# ನಮ್ಮ ಹಿತ್ತಲಿನತ್ತ ಹಿನ್ನೋಟ

## ನಾಗೇಶ ಹೆಗಡೆ

(ಡಾ. ರಾಮಚಂದ್ರ ಗುಹಾ ಅವರ 'ಜಾಗತಿಕ ಪರಿಸರ ಚರಿತ್ರೆ'ಗೆ ಬರೆದ ಹಿನ್ನುಡಿ.)

ಜಗತ್ತಿನ ವಿವಿಧ ದೇಶಗಳಲ್ಲಿನ ಪರಿಸರ ರಕ್ಷಣ ಸಂಘರ್ಷಗಳನ್ನು ಖಚಿತ ದಾಖಲೆಗಳೊಂದಿಗೆ ಚಿತ್ರಿಸಿದ ರಾಮಚಂದ್ರ ಗುಹಾ ಅವರ ಈ ಗ್ರಂಥವನ್ನು ಓದಿದ ಮೇಲೆ ನಮ್ಮ ಸಮಾಜದಲ್ಲೂ ಕಳೆದ ಎರಡು ದಶಕಗಳಿಂದ ನಡೆಯುತ್ತಿರುವ ಪರಿಸರ ಚಳುವಳಿಗಳತ್ತ ಹಿನ್ನೋಟ ಬೀರುವುದು ಅಗತ್ಯವೆನಿಸಿದೆ.

ಈ ಗ್ರಂಥದ ಪ್ರಕಟನೆಯ ಜಾಡನ್ನೇ ಹಿಡಿದು ಹೊರಟರೆ ನಮ್ಮ ಹಿತ್ತಲಿನ ಪರಿಸರ ರಕ್ಷಣೆಯ ಆ ಹಿನ್ನೋಟ ಸಿಗುತ್ತದೆ. ಭಾರತದ ಬೇರೆ ಯಾವ ಭಾಷೆಗೂ ತರ್ಜುಮೆಯಾಗುವುದಕ್ಕಿಂತ ಮೊದಲು ಇದು ಕನ್ನಡದಲ್ಲಿ ಬರುತ್ತಿದೆ; ಮೂಲ ಇಂಗ್ಲಿಷ್ ಕೃತಿಯ ಜತೆ ಜತೆಗೇ ಪ್ರಕಟವಾಗುತ್ತಿದೆ. ಇದು ಕನ್ನಡ ಮಣ್ಣಿನ ಗುಣವೇ ಇರಬೇಕು, ಪರಿಸರ ಹೋರಾಟವೂ ಅಷ್ಟೆ. ಇತರ ರಾಜ್ಯಗಳಿಗೆ ಮಾದರಿ ಯಾಗುವಷ್ಟು ಮುಂಚಿತವಾಗಿ ಇಲ್ಲಿ ಪರಿಸರ ಚಳುವಳಿಗಳು ಪ್ರಾರಂಭವಾದವು. ಭಾರತದ ಮೊದಲ (ಹಾಗೂ ಈ ಶತಮಾನದ ಏಕೈಕ) 'ಪರಿಸರ ಅಭ್ಯರ್ಥಿ' ಈ ನೆಲದಲ್ಲೇ ಚುನಾವಣಾ ಕಣಕ್ಕಿಳಿದರು. ಪರಿಸರ ಚಳುವಳಿ ಮತ್ತು ಪರಿಸರ ಸಾಹಿತ್ಯ ಎರಡೂ ಪರಸ್ಪರ ಪೂರಕವೆಂಬಂತೆ ಇಲ್ಲಿ ಚಿಗುರೊಡೆದು ಬೆಳೆದವು. ಡಾ. ಶಿವರಾಮ ಕಾರಂತರು ಅನುವಾದಿಸಿಕೊಟ್ಟ 'ಭಾರತ ಪರಿಸರ ಪರಿಸ್ಥಿತಿ' (ಎರಡು ಸಂಪುಟಗಳು), ಬ್ರಂಟ್ಲೆಂಡ್ ಆಯೋಗದ 'ನಮ್ಮೆಲ್ಲರಿಗೂ ಒಂದೇ ಭವಿಷ್ಯ', ಫುಕುವೊಕರ 'ಒಂದು ಹುಲ್ಲಿನ ಕ್ರಾಂತಿ', ಗಾಡ್ಗೀಳ್ ಮತ್ತು ಗುಹಾರ 'ಪರಿಸರ ನ್ಯಾಯದ ತಕ್ಕಡಿಯಲ್ಲಿ' ಇವೆಲ್ಲ ಇತರ ಭಾರತೀಯ ಭಾಷೆಗಳಲ್ಲಿ ಬರುವುದಕ್ಕಿಂತ ಮುಂಚಿತವಾಗಿ, ಇಲ್ಲಿನ ಪರಿಸರ ಚಳುವಳಿಗಳಿಗೆ ಒಮ್ಮೊಮ್ಮೆ ಮುಂಬೆಳಕಾಗಿ, ಒಮ್ಮೊಮ್ಮೆ ಹಿಂಬೆಳಕಾಗಿ, ಪ್ರಕಾಶಿತಗೊಂಡಿವೆ. ಪ್ರೊ. ಮಾಧವ ಗಾಡ್ಗೀಳ್ ಮತ್ತು ಅವರ ಸಂಗಾತಿ ರಾಮಚಂದ್ರ ಗುಹಾ ಇಬ್ಬರೂ ತಮ್ಮ ಅಕಾಡೆಮಿಕ್ ಅಧ್ಯಯನ, ಚಿಂತನೆ ಮತ್ತು ಬರಹಗಳಿಂದ ಇಲ್ಲಿನ ಅನೇಕ ಚಳುವಳಿಗಳಿಗೆ ಪ್ರೇರಕರಾಗಿ, ಚಳುವಳಿಗಳಿಂದ ಪ್ರೇರಿತರಾಗಿ ಬೆಳೆದಿದ್ದಾರೆ. ಆ ಮಟ್ಟಿಗೆ ಗುಹಾರ ಈ ಗ್ರಂಥಕ್ಕೂ ಕನ್ನಡ ನಾಡಿನ ಪರಿಸರ ಹೋರಾಟಗಳಿಗೂ ತಳಕು ಹಾಕಬೇಕಾದುದು ಅನಿವಾರ್ಯವಾಗುತ್ತದೆ.



ಪಾಶ್ಚಾತ್ಯ ಸಮಾಜದಲ್ಲಿ ಪರಿಸರ ಜಾಗ್ರತಿಗಳ ಮೂರು ಸ್ಪಷ್ಟ 'ಅಲೆ'ಗಳನ್ನು ಗುಹಾ ಗುರುತಿಸುವ ಹಾಗೆ ಭಾರತದಲ್ಲೂ ಪರಿಸರ ಸಂರಕ್ಷಣೆಯ ಮೂರು ಹಂತಗಳನ್ನು ಗುರುತಿಸಿ ವಿಭಾಗಿಸುವವರಿದ್ದಾರೆ. ಒಂದು, ಪ್ರಾಚೀನ ಭಾರತದ ಪರಿಸರ ಪರಂಪರೆ; ಇನ್ನೊಂದು, ವಸಾಹತುಶಾಹಿ ಕಾಲದ ಪರಿಸರ ಮತ್ತು ಮೂರನೆಯದಾಗಿ ಸ್ವಾತಂತ್ರ್ಯೋತ್ತರ ಭಾರತದ ಪರಿಸರ ರಕ್ಷಣಾ ಪರಿಶ್ರಮಗಳು.

ಪ್ರಾಚೀನ ಭಾರತದ ಪರಿಸರ ಪರಂಪರೆಗಳನ್ನು ದಾಖಲಿಸುವವರೆಲ್ಲ ವೇದಕಾಲದಿಂದಲೇ ಪ್ರಾರಂಭಿಸುತ್ತಾರೆ. ನಮ್ಮ ಪೂರ್ವಜರ ಪರಿಸರ ಪ್ರಜ್ಞೆ ಅದೆಷ್ಟು ಮಹೋನ್ನತವಾಗಿತ್ತೆಂದು ಹೇಳಲು ವೇದ, ಉಪನಿಷತ್ತುಗಳಿಂದ ಆರಂಭಿಸಿ, ಕಾಳಿದಾಸ, ಬಸವಣ್ಣ, ಸರ್ವಜ್ಞ, ಟಾಗೋರರವರೆಗಿನ ಮಾತುಗಳನ್ನು ಉದಾಹರಿಸುತ್ತಾರೆ. ಒಪ್ಪತಕ್ಕ ಮಾತೇ. ಆದರೂ ಅದು ಶಿಷ್ಟ ಸಾಹಿತ್ಯದ ಪರಂಪರೆಯನ್ನು ಒತ್ತಿ ಹೇಳಿದಂತಾದೀತೆ ಹೊರತು, ಪ್ರಕೃತಿಯೊಂದಿಗಿನ ಸಹಬಾಳ್ವೆ ಭಾರತದಲ್ಲಿ ಮಾತ್ರ ವಿಶಿಷ್ಟವಾಗಿತ್ತೆಂದು ಅರ್ಥೈಸುವಂತಿಲ್ಲ. ಮಂತ್ರ-ಪಾಡ್ದನಗಳ ಐತಿಹಾಸಿಕ ದಾಖಲೆಗಳೇ ಇಲ್ಲದ ಸಮಾಜದಲ್ಲೂ ಜಲಧಾರೆಗೆ, ಪಕ್ಷಿಗಳ ಇಂಚರಕ್ಕೆ, ಮಂದಮಾರುತಕ್ಕೆ ಅಭಿವಂದಿಸುವ ಧನ್ಯತಾ ಭಾವ, ಮನಸೋಲುವ ರಸಿಕತೆ ಇದ್ದೇ ಇತ್ತು. ತಮ್ಮ ಸುತ್ತಲಿನ ಜೀವಜಾಲ ಸುರಕ್ಷಿತವಾಗಿದ್ದರೆ ತಾವೂ ಸುರಕ್ಷಿತ ಎಂಬ ಸಂಗತಿ ಅಂಡಮಾನಿನ 'ಒಂಗೆ'ಗಳಿಗೆ, ಆಸ್ಟ್ರೇಲಿಯಾದ ಮೂಲನಿವಾಸಿಗಳಿಗೆ, ಅಮೆರಿಕದ ರೆಡ್ ಇಂಡಿಯನ್ ಜನಾಂಗದವರಿಗೆ, ಆಫ್ರಿಕದ ಪಿಗ್ಮಿಗಳಿಗೆ, ಬಿಳಿಗಿರಿ ರಂಗನ ಬೆಟ್ಟದ ಸೋಲಿಗರಿಗೆ ಗೊತ್ತಿದೆ. ಅಷ್ಟೇಕೆ, ಮಾನವರಿಗಿಂತ ಕೆಳಹಂತದ ಜೀವಿಗಳೆನಿಸಿದ ಚಿಂಪಾಂಜಿಗಳಿಗೆ, ಮೊಲಗಳಿಗೆ, ಉಡಗಳಿಗೂ ಪರಿಸರದೊಂದಿಗೆ ತಾದಾತ್ಮ್ಯದಿಂದ ಬಾಳುವುದು ಗೊತ್ತು.

ಮನುಷ್ಯರ ತೋಳ್ಬಲ ಸಮಸಮವಾಗಿದ್ದಷ್ಟು ಕಾಲ ಪ್ರಕೃತಿಯನ್ನು ಮನುಷ್ಯರು 'ರಕ್ಷಿಸ'ಬೇಕಾದ ಅಗತ್ಯವೂ ಇರಲಿಲ್ಲ. ಆದರೆ ತಂಡ ಕಟ್ಟಿಕೊಂಡು, ಸೈನ್ಯ ಕಟ್ಟಿಕೊಂಡು ಹೊಸ ಸಂಪನ್ಮೂಲ ಹುಡುಕುತ್ತ ವಲಸೆ ಹೋಗುವ ಹಾಗೂ ದುರ್ಬಲರ ಆಸ್ತಿಯನ್ನು ಆಕ್ರಮಿಸಿಕೊಳ್ಳುವ ಪ್ರವೃತ್ತಿ ಬೆಳೆದಂತೆಲ್ಲ (ಅದೂ ಆರ್ಯರ ಕಾಲದಿಂದಲೇ ಜಾರಿಯಲ್ಲಿತ್ತೆಂಬುದನ್ನು ನಾವು ಮರೆಯಬಾರದು!) ಸಂಪನ್ಮೂಲ ಸಂರಕ್ಷಣೆಗಾಗಿ ಸಂಘರ್ಷ ಅನಿವಾರ್ಯವಾಯಿತು. ಅದು ಚದುರಂಗಬಲದ ಆಕ್ರಮಣದ ರೂಪದಲ್ಲೂ ಇದ್ದೀತು ಅಥವಾ ರಾಜರ ಕ್ಷೇಮಕ್ಕಾಗಿ ಯಜ್ಞದ ನೆಪದಲ್ಲಿ ಅರಣ್ಯದ ಮಧ್ಯೆ ಋತ್ವಿಜರು ನಡೆಸುವ ಅತಿಕ್ರಮಣದ ರೂಪದಲ್ಲೂ ಇದ್ದೀತು; ಅಂಥ ಅತಿಕ್ರಮಣವನ್ನು ಪ್ರತಿಭಟಿಸಿದ ಆದಿವಾಸಿಗಳನ್ನು ರಾಕ್ಷಸರೆಂದು ಪಟ್ಟ ಕಟ್ಟಿ ಹೊಸಕಿ

ಹಾಕಿದ್ದೂ ನಮ್ಮಲ್ಲಿ ನಡೆದಿದೆ. ಪರದೇಶದ ರಾಜಕುಮಾರಿಯರನ್ನು ಹಾರಿಸಿಕೊಂಡು ಬರಬೇಕೆನ್ನುವ ಚಪಲವನ್ನು ಬಿಟ್ಟರೆ, ಚರಿತ್ರೆಯಲ್ಲಿ ಘಟಿಸಿದ ಪ್ರತಿಯೊಂದು ದಾಳಿಯನ್ನೂ ನಾವು ಸಂಪನ್ಮೂಲ ಕಬಳಿಕೆಯ ಹುನ್ನಾರವೆಂದೂ ಅಂಥ ದಾಳಿಗೆ ಎದುರಾದ ಪ್ರತಿಯೊಂದು ಪ್ರತಿರೋಧವನ್ನೂ ಸಂಪನ್ಮೂಲ ರಕ್ಷಣೆ, ಅಥವಾ ಪರಿಸರ ರಕ್ಷಣೆಯ ಸಂಘರ್ಷವೆಂದೂ ಹೇಳಬೇಕಾಗುತ್ತದೆ. ಭಾರತದ ಶಿಷ್ಟ ಪರಂಪರೆಯ ಹೆಗ್ಗಳಿಕೆ ಏನೆಂದರೆ, ಅಂಥ ಏನೆಲ್ಲ ತುಮುಲಗಳ ನಡುವೆಯೂ ಕೃಷಿ-ಕೈಗಾರಿಕೆ ಹಾಗೂ ವಾಣಿಜ್ಯ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ಬೆಳೆಸಿಕೊಂಡು ಬಂದಿದ್ದು; ಒಂದನ್ನೊಂದು ಅತಿಯಾಗಿ ಆಕ್ರಮಿಸದಂತೆ ಸಮತೋಲ ಸ್ಥಿತಿಯನ್ನು ಕಾಪಾಡಿಕೊಂಡು ಬಂದಿದ್ದು.

ಯಂತ್ರಯುಗ, ಔದ್ಯಮಿಕ ಯುಗಕ್ಕೆ ಕಾಲಿಟ್ಟಾಗಿಂದ ಬಲಾಢ್ಯರ ಸಂಚಾರ ಸಾಮರ್ಥ್ಯ ಹಾಗೂ ಸಂಘರ್ಷಸಾಮರ್ಥ್ಯ ಅತಿಯಾಗಿ ಹೆಚ್ಚಿತು. ರಾಜರ ಕಲ್ಪನೆ ಬದಲಾಯಿತು. ಗಡಿಗಳ ಉಲ್ಲಂಘನೆ ಮಾಡದೇ ದೂರದ ಸಂಪನ್ಮೂಲಗಳನ್ನು ಸ್ವಂತಕ್ಕಾಗಿ ಕಬಳಿಸುವ ಶಕ್ತಿ ಬಂತು. ಹಿಂದಿನ ಮೂರು ಶತಮಾನಗಳ ಅವಧಿಯಲ್ಲಿ ಈ ಬಗೆಯ ವಸಾಹತುಶಾಹಿ ಸಂಸ್ಕೃತಿ ಬೆಳೆದು ಬಂತು. ಗಾಡ್ಗೀಳ್ ಮತ್ತು ಗುಹಾ ಬೇರೊಂದು ಕಡೆ ಹೇಳುವಂತೆ, ಸಂಪನ್ಮೂಲಗಳ ವ್ಯಾಖ್ಯೆ ಬದಲಾಯಿತು; ಆಕ್ರಮಣಕಾರರು ತಮ್ಮ ಹಿತ್ತಲಿನ ಸಂಪನ್ಮೂಲಗಳನ್ನು ಜೋಪಾನವಾಗಿಟ್ಟು ಕೊಂಡು, ದೂರ ದೇಶಗಳಿಂದ ಅರಣ್ಯ, ಖನಿಜ, ಕೃಷಿಸಂಪತ್ತನ್ನು ಎತ್ತಿ ಸಾಗಿಸುವ ಪ್ರವೃತ್ತಿ ಬೆಳೆದು ಬಂತು.

ವಸಾಹತುಶಾಹಿಯ ಈ ಅವಧಿಯಲ್ಲಿ ಭಾರತದಿಂದ ತೇಗ, ಖನಿಜ, ಸಣಬುಗಳಂಥ ನೈಸರ್ಗಿಕ ಸಂಪತ್ತುಗಳು ಅಪಾರ ಪ್ರಮಾಣದಲ್ಲಿ ಪರಭಾರೆ ಯಾದವು. ಆದರೆ ಇದೇ ಅವಧಿಯಲ್ಲಿ ದೂರ ದೇಶಗಳಿಂದ ಚಹ, ಕಾಫಿ, ಗೋಡಂಬಿ, ಬಟಾಟೆ, ಕ್ಯಾಬೇಜ್, ಪಪ್ಪಾಯಾ, ನೀಲಗಿರಿ ಸಸ್ಯಗಳೂ ಬಂದಿದ್ದರಿಂದ ದೇಶಕ್ಕೆ ನಿವ್ವಳ ಹಾನಿಯೊ ಲಾಭವೊ ಎಂಬ ಪ್ರಶ್ನೆಯನ್ನು ತುಲನೆಗೆ ತೆಗೆದು ಕೊಳ್ಳುವುದು ಸುಲಭವಾಗಲಾರದು. ಆದರೆ ಬ್ರಿಟಿಷರ ಆಧಿಪತ್ಯದಿಂದಾಗಿ 'ದೇಶ'ದ ಕಲ್ಪನೆ ಸುಸ್ಪಷ್ಟವಾಯಿತು. 'ನಮ್ಮದು' ಎಂಬ ಪದಕ್ಕೆ ವಿಶಾಲ ವ್ಯಾಪ್ತಿ ದೊರೆಯಿತು.

ಸ್ವಾತಂತ್ರ್ಯ ಹೋರಾಟವನ್ನೂ ಈ ವಿಶಾಲ ಅರ್ಥದಲ್ಲಿ ಪರಿಸರ ಸಂರಕ್ಷಣೆಯ ಹೋರಾಟವೆಂದೇ ಅರ್ಥೈಸಬೇಕಾಗುತ್ತದೆ. ಕಾಡಿನ ಮಧ್ಯೆ ವಾಸಿಸುವ ಬುಡಕಟ್ಟು ಜನಾಂಗವನ್ನು ವನರಕ್ಷಣೆಯ ನೆಪದಲ್ಲಿ ಎತ್ತಂಗಡಿ ಮಾಡುವಾಗಲೆಲ್ಲ ಈಗಿನ ಪರಿಸರ ಚಿಂತಕರು ಎತ್ತುವ ಪ್ರಶ್ನೆಗಳನ್ನೇ ಆಗ ತಿಲಕ್, ಗೋಖಲೆ, ಗಾಂಧೀಜಿ ಯವರು ಎತ್ತಿದ್ದರು. ತನ್ನ ಪರಿಸರದ ನಿರ್ವಹಣೆಯ ಹಕ್ಕು ತನಗೇ ಇರಬೇಕು, ತನ್ನ



ಪರಿಸರದಲ್ಲೇ ತಾನು ಸ್ವಾವಲಂಬಿಯಾಗಬೇಕು ಎಂಬ ಮಾತು ಆಗ ಇಡೀ ದೇಶಕ್ಕೆ ಅನ್ವಯವಾಗುತ್ತಿತ್ತು. ಅಂಥ ಮಾತುಗಳನ್ನು ಹೇಳುವವರು ಮುತ್ಸದ್ದಿಗಳೆನಿಸುತ್ತಿದ್ದರು.

ಎರಡನೆಯ ಮಹಾಯುದ್ಧದ ನಂತರದ ಪಾಶ್ಚಾತ್ಯ ಜಗತ್ತಿನಲ್ಲಿ ರಾಮ್ ಗುಹಾ ಗುರುತಿಸಿದ 'ಪರಿಸರ ಮುಗ್ಧತೆಯ ಯುಗ' (Age of ecological innocence) ಕೊಂಚ ತಡವಾಗಿ, ಅಂದರೆ ಸ್ವಾತಂತ್ರ್ಯ ಸಿಕ್ಕ ನಂತರ, ಭಾರತದಲ್ಲೂ ಕಾಣಿಸಿಕೊಂಡಿದೆ. ದೇಶವನ್ನು ಆದಷ್ಟು ತ್ವರಿತವಾಗಿ ಆಧುನಿಕಗೊಳಿಸುವ ನೆಹರೂ ಪ್ರಣೀತ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ದೊಡ್ಡ ಅಣೆಕಟ್ಟುಗಳು, ದೊಡ್ಡ ಗಣಿಗಳು, ಉಕ್ಕು-ಸಿಮೆಂಟ್ ಕಾರ್ಖಾನೆಗಳು, 'ಆಧುನಿಕ ಭಾರತದ ದೇಗುಲಗಳು' ಎಂದೆನಿಸುವಾಗ ನಮ್ಮ ಪುರಾತನ ಭಾರತದ ಪರಿಸರ ಪರಂಪರೆಯನ್ನು ಬಿಂಬಿಸುವ ಶ್ಲೋಕಗಳೆಲ್ಲ ದೇಗುಲಗಳಲ್ಲೇ ಮೂಲೆಗುಂಪಾದವು. ಹಸಿರು ಕ್ರಾಂತಿಯ ಹರಿಕಾರರಾಗಿ ರಸಗೊಬ್ಬರ ಕಾರ್ಖಾನೆಗಳೂ ಕಾಲುವೆ ಜಲಾಶಯಗಳೂ ನಿರ್ಮಿತಗೊಳ್ಳುವ ವೇಳೆಗೆ 'ಗ್ರಾಮ ಸ್ವರಾಜ್ಯ'ದ ಕನಸುಕಾಣುತ್ತಿದ್ದ ಗಾಂಧೀ ಅನುಯಾಯಿಗಳೆಲ್ಲ ಮೂಲೆಗುಂಪಾದರು. ಹೇಗೆ ಪಾಶ್ಚಾತ್ಯರ 'ಪರಿಸರ ಮುಗ್ಧತೆಯ ಯುಗ'ದಲ್ಲಿ ಮೊದಲ ಪರಿಸರ ಅಲೆಯ ನೆನಪುಗಳೆಲ್ಲ ಹೂತು ಹೋಗಿದ್ದವೊ ಹಾಗೆ ಭಾರತದಲ್ಲೂ ಪರಿಸರಪರಂಪರೆಗಳ ನೆನಪು ತ್ವರಿತವಾಗಿ ಅಳಿಸಿದವು. ದೇಶದ ಉಚಿತ ನೆಲ, ಉಚಿತ ನೀರು, ಉಚಿತ ಗಾಳಿ, ರಿಯಾಯಿತಿ ಶಕ್ತಿಮೂಲಗಳನ್ನೆಲ್ಲ ಬಳಸಿಕೊಂಡು ಬೆಳೆದ ಬಹುಪಾಲು ಸರಕಾರಿ ಸ್ವಾಮ್ಯದ ಉದ್ಯಮಗಳು ಬಿಳಿಯಾನೆಗಳಾದವು; ಅಥವಾ ಗುನ್ನಾರ್ ಮಿರ್ಡಾಲ್ ಅವರ ಮಾತಿನಲ್ಲಿ ಹೇಳುವುದಾದರೆ ದಕ್ಷತೆಯನ್ನು ಕಳೆದುಕೊಂಡು 'ಓವರ್ ಹೀಟೆಡ್ ಎಂಜಿನ್'ಗಳಾದವು. ಪರಿಸರ ಹೋರಾಟಗಳಿಗಾಗಿ ಬೇಕಾದ ಎಲ್ಲ ರಂಗಸಜ್ಜಿಕೆಗಳೂ ಸಿದ್ಧವಾದವು.

ದಾಖಲೆಗಾಗಿ ಹೇಳುವುದಾದರೆ, ಕರ್ನಾಟಕದಲ್ಲಿ ೧೯೮೦ರಲ್ಲಿ ನಡೆದ ಬೇಡ್ತಿ ಚಳುವಳಿಯೇ ಮೊದಲ ಪರಿಸರ ಹೋರಾಟವೆಂದು ಹೇಳಬೇಕು. ಲಿಂಗನಮಕ್ಕಿ ಜಲಾಶಯಕ್ಕಾಗಿ ಮುನ್ನೂರು ಹಳ್ಳಿಗಳನ್ನು ಮುಳುಗಿಸಿ, ಕಾಳಿ ಯೋಜನೆಗಾಗಿ ಸುಪಾ ಪಟ್ಟಣವನ್ನೂ ಮುಳುಗಿಸಿದ ಯೋಜನಾ ತಜ್ಞರು ಅಲ್ಲೇ ಸಮೀಪ ಅಘನಾಶಿನಿ ಮತ್ತು ಬೇಡ್ತಿ ಕಣಿವೆಗಳ ಜನರನ್ನೂ ಎತ್ತಂಗಡಿ ಮಾಡಲು ಹೊರಟಾಗ ಪ್ರತಿಭಟನೆ ಎದುರಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಕೆಚ್ಚಿನಿಂದ ಭಾಗವಹಿಸಿ, 'ದಕ್ಷಿಣದ ಬಾರ್ಡೋಲಿ' ಎಂಬ ಬಿರುದು ಪಡೆದಿರುವ, ಅತಿ ಹೆಚ್ಚಿನ ಕಷ್ಟನಷ್ಟ ಅನುಭವಿಸಿದ ಸಮುದಾಯಕ್ಕೇ ಈ ಕಂಟಕವೂ ಬಂದೆರಗಬೇಕೆ? 'ಸ್ವಾತಂತ್ರ್ಯ ಹೋರಾಟದಲ್ಲಿ ದೇಶಕ್ಕಾಗಿ ತ್ಯಾಗ ಮಾಡಿದೆವು. ಈಗ ಯಾರಿಗಾಗಿ ತ್ಯಾಗ ಮಾಡಬೇಕು? ಹುಬ್ಬಳ್ಳಿಯ

ಜನರಿಗಾಗಿ ತ್ಯಾಗ ಮಾಡಬೇಕೆ? ಬೆಂಗಳೂರಿನ ಉದ್ಯಮಿಗಳಿಗಾಗಿ ತ್ಯಾಗ ಮಾಡಬೇಕೆ?' ಎಂದು ಕೇಳಿದರು, ಶಿರಸಿಯ ತೋಟಗಾರರ ಸಹಕಾರಿ ಸಂಘದ ಅಧ್ಯಕ್ಷ ಹಾಗೂ ಬೇಡ್ತಿ ಹೋರಾಟದ ಮುಂಚೂಣಿಯಲ್ಲಿದ್ದ ಕಡವೆ ಶ್ರೀಪಾದ ಹೆಗಡೆ.

'ತಮ್ಮ ಆಸ್ತಿಪಾಸ್ತಿ ಹೋದೀತೆಂದು ಕೆಲ ಶ್ರೀಮಂತ ಅಡಿಕೆ ಬೇಸಾಯಗಾರರು ಎಬ್ಬಿಸಿದ ಸ್ವಾರ್ಥ ಹೋರಾಟ ಇದು' ಎಂಬ (ನಂತರದ ದಿನಗಳ) ಟೀಕೆಗೆ ಉತ್ತರವೆಂಬಂತೆ ಈ ಹೋರಾಟಕ್ಕೆ ಬೌದ್ಧಿಕ ಆಯಾಮ ನೀಡಿದವರು ಪ್ರೊ. ಲಿಂಗೇಶ್ ಶರ್ಮಾ. ದೊಡ್ಡ ಅಣೆಕಟ್ಟುಗಳ ಸಾಧಕ-ಬಾಧಕಗಳ ಕುರಿತು ಅವರು ಶಿರಸಿಯಲ್ಲಿ ೧೯೮೦ರಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಸಂಘಟಿಸಿದರು. ನಾಲ್ಕು ದಿನಗಳ ಈ ಸೆಮಿನಾರ್‌ಗೆ ದಿಲ್ಲಿ, ಕಲ್ಕತ್ತಾ, ಪುಣೆ, ಮುಂಬೈ, ಬೆಂಗಳೂರುಗಳ ಅರ್ಥತಜ್ಞರು, ಅಭಿವೃದ್ಧಿತಜ್ಞರು, ಆಡಳಿತ ತಜ್ಞರು ಹಾಗೂ ಅರಣ್ಯ ತಜ್ಞರು ಆಗಮಿಸಿ ಪಾಲ್ಗೊಂಡಿದ್ದರು. 'ವಿದ್ಯುತ್ತಿಗಾಗಿ ದಟ್ಟ ಅರಣ್ಯಗಳನ್ನು ಮುಳುಗಿಸು ವುದೆಂದರೆ ಒಂದು ರೂಪಾಯಿಯನ್ನು ವಿನಿಯೋಗಿಸಿ ೫೪ ಪೈಸೆಗಳನ್ನು ಪಡೆದಷ್ಟೇ ಅವ್ಯಾವಹಾರಿಕ' ಎಂದು ಪುಣೆಯ ವಿಜಯ ಪರಾಂಜಪೆ ಹೇಳಿದ್ದು ನಾಡಿನ ಪತ್ರಿಕೆಗಳಲ್ಲಿ ಪ್ರತಿಧ್ವನಿಸಿತು. ಡಾ. ಶಿವರಾಮ ಕಾರಂತರಂಥ ಹಿರಿಯರ ಗರ್ಜನೆ, ಸ್ವರ್ಣವಲ್ಲಿ ಸ್ವಾಮೀಜಿಯಂಥ ಸನಾತನಿಗಳ 'ಅರಣ್ಯಸೂಕ್ತ' ಉಪದೇಶ, ಸುಂದರಲಾಲ ಬಹುಗುಣರಂಥ ಸಂತರ ನಿಕಟ ಸಂಪರ್ಕ ಆ ಭಾಗದ ಗ್ರಾಮೀಣ ಜನರಿಗೆ ಏಕಕಾಲಕ್ಕೆ ಸಿಗುವಂತೆ ಮಾಡಿದ ಶ್ರೇಯ ಲಿಂಗೇಶ ಶರ್ಮಾರಿಗೆ ಸಲ್ಲಬೇಕು. ಕೇವಲ ಅಣೆಕಟ್ಟುಗಳಷ್ಟೇ ಅಲ್ಲ, ಗ್ರಾಮೀಣ ಭಾರತದ ಸಂಪನ್ಮೂಲಹರಣಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು ಚರ್ಚೆಗೆ ಬಂದವು. ಪಶ್ಚಿಮ ಘಟ್ಟದ ನೈಸರ್ಗಿಕ ಅರಣ್ಯವನ್ನು ಸವರಿಹಾಕಿ, ಅಲ್ಲಿ ನೀಲಗಿರಿ ನೆಡುತೋಪು ಬೆಳೆಸುತ್ತಿರುವ ಅರಣ್ಯ ಇಲಾಖೆಯ ಕ್ರಮ ಟೀಕೆಗೊಳಗಾಯಿತು. ಪರಿಸರ ನಿರಾಶ್ರಿತರ ಸಮಸ್ಯೆಗಳ ಮೇಲೆ ಕ್ಷ-ಕಿರಣ ಬೀರುವ ಯತ್ನ ನಡೆಯಿತು. ಆಧುನಿಕ ಕೃಷಿ ವಿಧಾನಗಳಷ್ಟೇ ಅಲ್ಲ, ನಾವು ಆಯ್ಕೆ ಮಾಡಿಕೊಂಡ ಅಭಿವೃದ್ಧಿಯ ಧೋರಣೆಯೇ ಭಾರತದ ದೂರಭವಿಷ್ಯಕ್ಕೆ ಕಂಟಕಪ್ರಾಯವಾದದ್ದೆಂಬ ವಿಚಾರ ಮೂಡಿ ಬಂತು.

ಈ ವಿಚಾರಗೋಷ್ಠಿಯನ್ನು ಕರ್ನಾಟಕದ ಪರಿಸರವಾದಿಗಳ 'ವುಡ್‌ಸ್ಟಾಕ್' ಎಂದೇ ಹೇಳಬೇಕು. ಏಕೆಂದರೆ ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದವರು ಪರಿಸರ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿದ್ದಷ್ಟೇ ಅಲ್ಲ, ಸಮರ್ಥ ಸಂವಹನಕಾರರಾಗಿ ಈ ಪ್ರಜ್ಞೆ ಸಮಾಜದ ವಿವಿಧ ಸ್ತರಗಳಲ್ಲಿ ಹರಡುವಂತೆ ಯತ್ನಿಸಿದರು. ಡಾ. ಶಿವರಾಮ ಕಾರಂತ, ಡಾ. ಕುಸುಮಾ ಸೊರಬ, ಡಾ. ವಂದನಾ ಶಿವ, ಡಾ. ಜಯಂತ ಬಂದೋಪಾಧ್ಯಾಯ, ಕೆ.ಎಂ. ಹೆಗಡೆ, ಮಂಜುನಾಥ ಹೊಸ್ತೋಟ, ರವಿ ಶರ್ಮಾ, ಪಾಂಡುರಂಗ ಹೆಗಡೆ – ಇವರೆಲ್ಲರ ಚಿಂತನೆ, ಚರ್ಚೆ, ತಿರುಗಾಟ, ಲೇಖನ, ಭಾಷಣ, ಯಕ್ಷಗಾನ ಎಲ್ಲವೂ ಪರಿಸರಮುಖಿಯಾಗಲು ಈ ಸಮ್ಮೇಳನವೇ ನೆಲೆಗಟ್ಟನ್ನು ಒದಗಿಸಿಕೊಟ್ಟಿತೆಂದೂ ಹೇಳಬಹುದು.



ಈ ವಿಚಾರ ಸಂಕಿರಣದ ನಂತರ ಬೇಡ್ತಿ ಅಣೆಕಟ್ಟಿನ ಮರುಪರಿಶೀಲನೆಯ ಬಗ್ಗೆ ಕರ್ನಾಟಕ ಸರಕಾರ ಒಂದು ಸಮಿತಿಯನ್ನೇನೊ ನೇಮಕ ಮಾಡಿತು. ಅದಕ್ಕಿಂತ ಹೆಚ್ಚಾಗಿ ಸೆಮಿನಾರಿನ ಪರೋಕ್ಷ ಫಲಶ್ರುತಿಗಳು ಗಣನೀಯವಾಗಿ ಕಾಣತೊಡಗಿದವು. ನೀಲಗಿರಿ ನೆಡುತೋಪಿನ ವಿರುದ್ಧ ಬಹುಗುಣರ ಪ್ರೇರಣೆಯಿಂದಾಗಿ 'ಚಿಪ್ಕೊ' ಮಾದರಿಯ 'ಅಪ್ಪಿಕೊ' ಚಳುವಳಿ ಪ್ರಾರಂಭವಾಯಿತು. ಪಶ್ಚಿಮ ಘಟ್ಟಗಳ ಸುಸ್ಥಿರ ನಿರ್ವಹಣೆ ಕುರಿತು ಶಿರಸಿಯ ಸಮೀಪದಲ್ಲೇ ಮಾಧವ ಗಾಡ್ಗೀಳರು ನಡೆಸುತ್ತಿದ್ದ ಸಂಶೋಧನಾ ಕ್ಷೇತ್ರದ ಬಗ್ಗೆ ಜನರಲ್ಲಿ ಆಸಕ್ತಿ ಹೆಚ್ಚಿತು. ಕೆನರಾ ಅರಣ್ಯ ಉಸ್ತುವಾರಿಯ ಆವರೆಗಿನ ತಪ್ಪುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯಶೀಲರಾದ ಯಲ್ಲಪ್ಪ ರೆಡ್ಡಿಯವರ ಪ್ರಯತ್ನಗಳು ಜನರ ಗಮನ ಸೆಳೆದವು. ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಸೇರಿಸಿ 'ಲಾರ್ಜ್ ಡ್ಯಾಮ್ಸ್' ಹೆಸರಿನ ಗ್ರಂಥ (ಸಂ. ಲಿಂಗೇಶ ಶರ್ಮಾ, ರವಿ ಶರ್ಮಾ) ದಿಲ್ಲಿಯಲ್ಲಿ ಪ್ರಕಟವಾಯಿತು. ಇದು ಭಾರತದ ಸ್ವಾತಂತ್ರ್ಯೋತ್ತರ ಅಭಿವೃದ್ಧಿ ಪಥವನ್ನು ಪ್ರಶ್ನಿಸುವ ಮೊದಲ ಗ್ರಂಥವೆಂಬ ಹೆಗ್ಗಳಿಕೆ ಪಡೆಯಿತು. ಭಾರತದಲ್ಲಿ ಎಲ್ಲಿ ದೊಡ್ಡ ಅಣೆಕಟ್ಟುಗಳ ನಿರ್ಮಾಣದ ಸಿದ್ಧತೆ ನಡೆದರೂ ಪರಿಸರವಾದಿಗಳ ಪೂರ್ವಸಿದ್ಧತೆಗೆ ಈ ಗ್ರಂಥ ದಾರಿದೀಪವೆನಿಸಿತು.

ಪಾಶ್ಚಾತ್ಯ ಜಗತ್ತಿನಲ್ಲಿ ಪರಿಸರ ಜಾಗ್ರತಿಯ ಮೂರನೆಯ 'ಅಲೆ' ಎದ್ದು ಆ ವೇಳೆಗೆ ಒಂದು ದಶಕವೇ ಕಳೆದಿತ್ತು. ಸಿರಸಿಯ ಬೇಡ್ತಿ ಸೆಮಿನಾರ್ ಅದರಿಂದ ಪ್ರಭಾವಿತವಾಗಿತ್ತೇ? ಅಂಥ ಲಕ್ಷಣಗಳೇನೂ ವಿಚಾರಗೋಷ್ಠಿಯಲ್ಲಿ ಕಂಡು ಬಂದಿರಲಿಲ್ಲ. ಪಾಶ್ಚಾತ್ಯ ಯಾವ ತಜ್ಞರೂ ಅದರಲ್ಲಿ ಭಾಗವಹಿಸಿರಲಿಲ್ಲ, ಅಷ್ಟೇ ಅಲ್ಲ, ಇದರಲ್ಲಿ ಪ್ರಬಂಧ ಮಂಡಿಸಿದ ಯಾವ ತಜ್ಞರೂ ಈ ಮೊದಲು ಇಂಥ ಅಂತರ ರಾಷ್ಟ್ರೀಯ ಪರಿಸರ ಸಮ್ಮೇಳನಗಳಲ್ಲಿ ಭಾಗವಹಿಸಿರಲಿಲ್ಲ. ನಾಲ್ಕು ದಿನಗಳ ಚರ್ಚೆಯಲ್ಲಿ 'ಸೈಲೆಂಟ್ ಸ್ಪ್ರಿಂಗ್' ಹಾಗಿರಲಿ ಅಂಥ ಯಾವುದೇ ಪರಿಸರ ಗ್ರಂಥದ ಪ್ರಸ್ತಾಪ ಒಮ್ಮೆಯೂ ಆಗಿರಲಿಲ್ಲ. ಅಷ್ಟರಮಟ್ಟಿಗೆ ಇದೊಂದು ಸ್ವತಂತ್ರವಾಗಿ ಎದ್ದ ಅಲೆ ಎಂದೇ ಹೇಳಬಹುದಾದರೂ ೧೯೭೨ರಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ಮೊದಲ ವಿಶ್ವ ಪರಿಸರ ಸಮ್ಮೇಳನದ ಪರೋಕ್ಷ ಪ್ರಭಾವ ಇದರ ಮೇಲೆ ಬಿದ್ದಿತ್ತೆಂಬುದನ್ನು ತೀರ ಕಡೆಗಣಿಸುವಂತಿಲ್ಲ. ೧೯೭೮ರಲ್ಲಿ 'ಸೈಲೆಂಟ್ ವ್ಯಾಲಿ' ಯೋಜನೆ ಕುರಿತು ವಿವಾದ ಎದ್ದ ಹಿನ್ನೆಲೆಯಲ್ಲಿ ಕೇರಳ ಸರಕಾರ ಅದನ್ನು ಕೈಬಿಡುವಂತೆ ಇಂದಿರಾ ಗಾಂಧಿಯವರೇ

ಸಲಹೆ ಮಾಡಿದ್ದರು. ಸ್ಟಾಕ್‌ಹೋಂ ಸಮ್ಮೇಳನಕ್ಕೆ ಹಾಜರಾಗಿದ್ದ ಇಂದಿರಾ ಗಾಂಧಿಯವರು ಆ ವೇಳೆಗಾಗಲೇ ಭಾರತದಲ್ಲಿ 'ಹುಲಿ (ಸಂರಕ್ಷಣಾ) ಯೋಜನೆ' ಆರಂಭಿಸಿ ಪರಿಸರ ಸಂರಕ್ಷಣೆಯ ವಿಷಯದಲ್ಲಿ ಭಾರತಕ್ಕೂ ಕಾಳಜಿ ಇದೆ ಎನ್ನುವುದನ್ನು ಅಂತರರಾಷ್ಟ್ರೀಯ ಸ್ತರದಲ್ಲಿ ಬಿಂಬಿಸಲು ಯತ್ನಿಸಿದ್ದರು. 'ಸೈಲೆಂಟ್ ವ್ಯಾಲಿ' ಯೋಜನೆಯನ್ನು ಕೈಬಿಟ್ಟಿದ್ದೇ ಬೇಡ್ತಿ ಯೋಜನೆಯನ್ನು ಕೈಬಿಡಬೇಕೆಂದು ಒತ್ತಾಯಿಸುವಲ್ಲಿ ಪ್ರೇರಕವಾಗಿತ್ತೆಂಬುದನ್ನು ನೆನೆದರೆ, ಅಲ್ಲಿಗೆ ಅಂತರರಾಷ್ಟ್ರೀಯ 'ಅಲೆ'ಯ ಪ್ರಭಾವ ಕೊಂಚಮಟ್ಟಿಗೆ ಇತ್ತೆಂದು ಹೇಳಬಹುದು.

ಅಂಥ ಪ್ರಭಾವ ಇದ್ದಿಲ್ಲವಾಗಿದ್ದರೆ, 'ಸೈಲೆಂಟ್ ವ್ಯಾಲಿ' ಯೋಜನೆ ವಿವಾದಗ್ರಸ್ತ ವಾಗಿಲ್ಲದಿದ್ದರೆ, ಬೇಡ್ತಿ ಯೋಜನೆ ನಿರಾತಂಕವಾಗಿ ಪೂರ್ಣ ಗೊಳ್ಳುತ್ತಿತ್ತೇ? ಅದನ್ನು ಹೇಳುವಂತಿಲ್ಲ. ಅಡಿಕೆಗೆ ಬೆಲೆ ಬಂದಿತ್ತು. ತಮ್ಮ ಆಸ್ತಿ ಅಮೂಲ್ಯವಾದುದೆಂಬುದು ಜನಕ್ಕೆ ಗೊತ್ತಾಗತೊಡಗಿತ್ತು. ಆರ್ಥಿಕ ಅಭಿವೃದ್ಧಿಯ ಮಾರ್ಗ ಆಗತಾನೆ ತೆರೆದುಕೊಳ್ಳತೊಡಗಿತ್ತು. ಶಿರಸಿಯಿಂದ ಬೆಂಗಳೂರಿಗೆ ನೇರವಾದ ಡಿಲಕ್ಸ್ ಬಸ್ ಸಂಚಾರ ಆರಂಭವಾಗಿತ್ತು. ರಾಜಕಾರಣಿಗಳ ಮೇಲೆ ಒತ್ತಡ ಹೇರಿ, ಅಷ್ಟಿಷ್ಟು ವಿಕಾಸಶೀಲ ಯೋಜನೆಗಳನ್ನು ರೂಪಿಸುವಷ್ಟು ಶಿರಸಿಯ ಜಮೀನುದಾರರು ಜಾಗ್ರತರಾಗಿದ್ದರು. ಅವೆಲ್ಲಕ್ಕಿಂತ ಮುಖ್ಯವಾಗಿ, ಲಿಂಗನಮಕ್ಕಿ ಯೋಜನೆಯ ನಿರಾಶ್ರಿತರಾದ ಅಡಿಕೆ ತೋಟದ ಮಾಲಿಕರು ಕಾರ್ಗಲ್ಲಿನ ಒಣ ಕಾಲೊನಿಗಳಲ್ಲಿ ಹಾಗೂ ಕಾಳಿ ಯೋಜನೆಯ ನಿರಾಶ್ರಿತರು ರಾಮನಗರದ ಬಂಜರು ಭೂಮಿಯಲ್ಲಿ ನರಕಸದೃಶ ಬಾಳುವೆ ಮಾಡುತ್ತಿರುವ ಸಂಗತಿ ಆಗಲೇ ಜನಜನಿತವಾಗಿತ್ತು. ದಟ್ಟ ಅರಣ್ಯಗಳಿದ್ದ ಜಾಗದಲ್ಲಿ ರೋಗಗ್ರಸ್ತ ನೀಲಗಿರಿ ನೆಡುತೋಪು ಕಣ್ಣಿಗೆ ರಾಚುತ್ತಿತ್ತು. ಕಟ್ಟೆರೋಗ ಬಂದಿದ್ದರಿಂದ ಅಡಿಕೆ ತೋಟಗಳಲ್ಲಿ ಮೊದಲಿದ್ದ ಬಾಳೆ, ಮೆಣಸುಗಳು ಕಣ್ಮರೆ ಯಾಗಿದ್ದವು.

ಸ್ಟಾಕ್‌ಹೋಂ ಸಮ್ಮೇಳನ, ೧೯೮೦ರ ನೈರೋಬಿಯ ಶಕ್ತಿ ಸಮ್ಮೇಳನ, ಉತ್ತರಖಂಡದ 'ಚಿಪ್ಕೊ' ಅಥವಾ ಕೇರಳದ ಸೈಲೆಂಟ್ ವ್ಯಾಲಿ ಈ ಯಾವುದೂ ಸಂಭವಿಸದಿದ್ದರೂ ಪರಿಸರವಾದ ಪಶ್ಚಿಮ ಘಟ್ಟದಲ್ಲಿ ತಾನಾಗಿ ಮೊಳಕೆಯೊಡೆಯ ಬಹುದಾಗಿತ್ತು. ನೆಲ ಸಿದ್ಧವಾಗಿತ್ತು.

••• ••• •••

ಎಂಬತ್ತರ ದಶಕದ ಆದಿಯಲ್ಲಿ ಕರ್ನಾಟಕದಲ್ಲಿ ಪರಿಸರ ಜಾಗ್ರತಿ ಚುರುಕಾಗಿ ವ್ಯಾಪಿಸುವಂತೆ ಮಾಡುವಲ್ಲಿ ಸ್ವಯಂಸೇವಾ ಸಂಸ್ಥೆಗಳು ಗಣನೀಯ ಕೊಡುಗೆ ಸಲ್ಲಿಸಿದವು. ಅಮೇರಿಕದಿಂದ ಹಿಂದಿರುಗಿದ ಎಸ್.ಆರ್. ಹಿರೇಮಠ ಮತ್ತು ಅವರ



ಪತ್ನಿ ಶಾಮಲಾ ಸೇರಿ ಮೆಣ್ಣೇರಿಯಂಥ ಹಿಂದುಳಿದ ಪ್ರದೇಶಗಳಲ್ಲಿ ಕುರಿ ಸಾಕಣೆ, ಕಂಬಳಿ ನೇಯ್ಗೆಯಂಥ ಕೆಲಸಗಳ ಮೂಲಕ ವಿಕಾಸ ಕಾರ್ಯಕ್ರಮ ಹಾಕಿಕೊಂಡಿದ್ದವರು ಅಲ್ಲಿಯೇ ಸಮೀಪ ಬಿರ್ಲಾ ಕಂಪನಿಯವರು ತುಂಗಭದ್ರಾ ನದಿಗೆ ಮಾಲಿನ್ಯ ಸೇರ್ಪಡೆ ಮಾಡುತ್ತಿರುವುದರ ವಿರುದ್ಧ ಜನಸಂಘಟನೆ ಮಾಡಿದರು. ಮುಂಬಯಿಯಿಂದ ಆಗತಾನೆ ಹಿಂದಿರುಗಿದ್ದ ಡಾ. ಕುಸುಮಾ ಸೊರಬ ಅವರು ಹೊನ್ನಾವರದ ಬಳಿಯ 'ಸ್ನೇಹಕುಂಜ'ದಲ್ಲಿ ಬಡವರಿಗಾಗಿ ಆರೋಗ್ಯ ಸೇವಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಲೇ ಹಿಂದುಳಿದವರ ಗದ್ದೆಯ ಮಣ್ಣನ್ನು ಹೆಂಚಿನ ಕಾರ್ಖಾನೆಯವರು ದೋಚುತ್ತಿರುವುದರ ವಿರುದ್ಧ ಜನಜಾಗ್ರತಿ ಮೂಡಿಸುತ್ತಿದ್ದರು. ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರ ಗತಿಸ್ಥಿತಿ ಸುಧಾರಿಸಲೆಂದು ಹೊರಟ ಡಾ. ಸುದರ್ಶನ್ ಮಲೆಮಹದೇಶ್ವರ ಬೆಟ್ಟದ ಗಣಿಗಾರಿಕೆ ಅಧ್ವಾನಗಳ ಕುರಿತು ಮಾಧ್ಯಮಗಳ ಗಮನ ಸೆಳೆದಿದ್ದರು. ಹುಣಸೂರಿನ ಸುತ್ತಮುತ್ತಲಿನ ಆದಿವಾಸಿಗಳ ವಿಕಾಸಕ್ಕಾಗಿ 'ಡೀಡ್' ಸಂಸ್ಥೆಯನ್ನು ಆರಂಭಿಸಿದ್ದ ಡಾ. ಪಯಾಸ್, ಕಬಿನಿ ಯೋಜನೆಯ ನಿರಾಶ್ರಿತರ ಹಾಗೂ ನಾಗರಹೊಳೆ ಅಭಯಾರಣ್ಯದಿಂದ ಹೊರದಬ್ಬಿಸಿಕೊಂಡವರ ಪರವಾಗಿ ಮಾತನಾಡ ತೊಡಗಿದ್ದರು. ಪ್ರಿನ್ಸ್‌ಟನ್‌ನಿಂದ ಹಿಂದಿರುಗಿದ್ದ ಪ್ರೊ. ಅಮೂಲ್ಯ ರೆಡ್ಡಿಯವರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲೇ ಗ್ರಾಮವಿಕಾಸಕ್ಕಾಗಿ 'ಅಸ್ತ್ರ' ಹೆಸರಿನ ಘಟಕವೊಂದನ್ನು ಸ್ಥಾಪಿಸಿ ಉಂಗ್ರ ಎಂಬ ಹಳ್ಳಿಯ ಶಕ್ತಿ ಸಂಪನ್ಮೂಲಗಳನ್ನು ಊರ್ಜಿತಗೊಳಿಸುವ ಯೋಜನೆ ಹಾಕಿಕೊಂಡಿದ್ದರು (ಆ ಹಳ್ಳಿಯ ಹೆಣ್ಣುಮಕ್ಕಳು ಪ್ರತಿದಿನ ಒಲೆ ಊದುವಾಗ ನಾಲ್ವತ್ತು ಸಿಗರೇಟುಗಳನ್ನು ಸೇದಿದಷ್ಟು ಬೆಂಝೀನ್ ಸಂಯುಕ್ತಗಳನ್ನು ತಮ್ಮ ಶ್ವಾಸಕೋಶದಲ್ಲಿ ಸೇರಿಸಿಕೊಳ್ಳುತ್ತಾರೆಂದೂ ಅವರು ನೀರಿಗಾಗಿ ವರ್ಷವಿಡೀ ಸವೆಸುವ ಹಾದಿಯನ್ನು ಲೆಕ್ಕ ಹಾಕಿದರೆ ಮುಂಬೈಯಿಂದ ದಿಲ್ಲಿಗೆ ಕಾಲ್ನಡಿಗೆಯಲ್ಲಿ ಹೋದಷ್ಟೇ ದೂರವಾದೀತೆಂದೂ ಅಲ್ಲಿನ ಸಮೀಕ್ಷೆಯಲ್ಲಿ ಕಂಡು ಬಂದ ಸಂಗತಿಗಳು ಮುಂದಿನ ಒಂದಿಡೀ ದಶಕದ ಕಾಲ ದೇಶದ ಎಲ್ಲ ಪರಿಸರ ಸಂಬಂಧಿ ಚರ್ಚೆಗಳಲ್ಲೂ ಪ್ರಸ್ತಾಪಕ್ಕೆ ಬರುತ್ತಿದ್ದವು). 'ಅಸ್ತ್ರ' ಸಂಸ್ಥೆಯ ನೆರವಿನಿಂದ ಕರ್ನಾಟಕದ ಅಸಂಖ್ಯಾತ ಹಳ್ಳಿಗಳಲ್ಲಿ ಹೊಸ ಹೊಗೆರಹಿತ ಒಲೆಗಳನ್ನು ನಿರ್ಮಿಸುವ ಮಂದ ಚಳುವಳಿಯೆ ನಡೆದಿದ್ದರಿಂದ ಒಂದು ಬಗೆಯಲ್ಲಿ ಗಿಡಮರ, ಉರುವಲು, ಹೊಗೆ ಮಾಲಿನ್ಯ, ಮುಂತಾದ ಗ್ರಾಮೀಣ ಸಮಸ್ಯೆಗಳು ಪರಿಸರ ಸಮಸ್ಯೆಗಳಾಗಿ, ಅಭಿವೃದ್ಧಿಯ ಸವಾಲುಗಳಾಗಿ ರೂಪುಗೊಳ್ಳತೊಡಗಿದವು.

ಈ ನಡುವೆ ಸರಕಾರಿ ಇಲಾಖೆಗಳೂ ಪರಿಸರ ಸಂರಕ್ಷಣೆಯ ಬಗ್ಗೆ ಮಾತಾಡತೊಡಗಿದ್ದವು. ಹಳ್ಳಿ-ಪಟ್ಟಣಗಳ ಉರುವಲ ಬೇಡಿಕೆಗಾಗಿ ಅರಣ್ಯನಾಶ

ಸರಿಯಲ್ಲವೆಂದೂ, ಅದಕ್ಕೆಂದೇ ಪ್ರತ್ಯೇಕ 'ಸಾಮಾಜಿಕ ಅರಣ್ಯ' ಬೆಳೆಸುತ್ತೇವೆಂದೂ ಹೇಳಿದ ಅರಣ್ಯ ಇಲಾಖೆ ಊರೂರುಗಳಲ್ಲಿ ಅಕೇಶಿಯಾ ಮತ್ತು ನೀಲಗಿರಿಯ ನೆಡುತೋಪು ಬೆಳೆಸಲು ಪ್ರಾರಂಭಿಸಿತು. ಆದರೆ ವಸಾಹತುಶಾಹಿಯ ಗರಡಿಯಲ್ಲಿ ಪಳಗಿದ ಭಾರತೀಯ ಆಡಳಿತಶಾಹಿ ಈಗಲೂ ಜನರ ಅಗತ್ಯಗಳಿಗೆ ಸ್ಪಂದಿಸುವ ಪಾಠ ಕಲಿತಿರಲಿಲ್ಲ. ಹೇಗೆ ಈ ಶತಮಾನದ ಆರಂಭದಲ್ಲಿ ಭಾರತದ ಅರಣ್ಯ ಇಲಾಖೆಗೆ ಜರ್ಮನಿಯ (ರಾಮ ಗುಹಾ ಹೇಳಿದಂತೆ ಡೀಟ್ರಿಚ್ ಬ್ರಾಂಡಿಸ್‌ನಂಥವರ) ಮಾರ್ಗದರ್ಶನ ದೊರೆತಿತ್ತೊ ಹಾಗೆ ಈಗ ಕರ್ನಾಟಕ ಅರಣ್ಯ ಇಲಾಖೆ ಬ್ರಿಟಿಷ್, ಜರ್ಮನಿ, ಮತ್ತು ಆಸ್ಟ್ರೇಲಿಯಾದ ತಜ್ಞರಿಂದ ಪಾಠ ಹೇಳಿಸಿಕೊಳ್ಳತೊಡಗಿತ್ತು. ೧೯೮೦ರಲ್ಲಿ ಇಲ್ಲಿನ ಪ್ರಧಾನ ಅರಣ್ಯ ಸಂರಕ್ಷಕರಾಗಿದ್ದ ಶ್ಯಾಮಸುಂದರ್ ಸ್ವತಃ ಜರ್ಮನಿಗೆ ಹೋಗಿ 'ಲಾಗಿಂಗ್ ಆಪರೇಶನ್ಸ್' (ಮರ ಕಡಿದು ಸಾಗಿಸುವ ) ತರಬೇತಿ ಪಡೆದು ಬಂದಿದ್ದೂ ಅಲ್ಲದೆ, ಮುಂದೆ ವರ್ಷ ವರ್ಷವೂ ನಿಯಮಿತ ರೂಪದಲ್ಲಿ ಅರಣ್ಯ ಅಧಿಕಾರಿಗಳನ್ನು ಯುರೋಪಿಗೆ ಹೆಚ್ಚಿನ ತರಬೇತಿಗಾಗಿ ಕಳಿಸುವ ಸಂಪ್ರದಾಯಕ್ಕೂ ದಾರಿ ಮಾಡಿಕೊಟ್ಟರು. ಈ ಅವಧಿಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಡಾ. ಮಾಧವ ಗಾಡ್ಗೀಳರು ರಾಜ್ಯದ ಬಿದಿರು ಸಂಪತ್ತು ಬರಿದಾಗುತ್ತಿರುವ ಬಗ್ಗೆ ಅಧ್ಯಯನ ನಡೆಸಿದ್ದರು. ಬಿದಿರನ್ನು ಆಧರಿಸಿ ಬದುಕುತ್ತಿರುವ ಮೇದರ ಜನಾಂಗವನ್ನು ನಿರ್ಗತಿಕರನ್ನಾಗಿ ಮಾಡಿ ಕಾರ್ಖಾನೆಗಳಿಗೆ ಸರಕಾರ ಅಗ್ಗದ ಬಿದಿರನ್ನು ಪೂರೈಸುತ್ತಿರುವ ಸಂಗತಿ ಅಕಾಡೆಮಿಕ್ ವಲಯವನ್ನೂ ದಾಟಿ ಪತ್ರಿಕೆಗಳಲ್ಲೂ ಪ್ರಕಟವಾಯಿತು. ಆ ಅವಧಿಯಲ್ಲೇ ಕರ್ನಾಟಕ ಸರಕಾರ ಕಾರ್ಖಾನೆಗಳಿಗೆ ಮರಮುಟ್ಟು ಒದಗಿಸಲೆಂದೇ ಪ್ರತ್ಯೇಕ 'ಪ್ಲಾಂಟೇಶನ್ ಕಾರ್ಪೊರೇಶನ್' ಆರಂಭಿಸಿತು. 'ಮರಗಳನ್ನು ಕ್ಯಾಬೇಜ್ ಸಸ್ಯಗಳ ಹಾಗೆ ಬೆಳೆಸುವುದನ್ನು ಜರ್ಮನರು ಜಗತ್ತಿಗೆ ಕಲಿಸಿಕೊಟ್ಟರು' ಎಂದು ಆಲ್ಡೊ ಲಿಯೋಪೊಲ್ಡ್ ವ್ಯಥಿಸಿದ ಅರ್ಧ ಶತಮಾನಗಳ ನಂತರ ಅದನ್ನೇ ಕಲಿಯುವ ಅಗತ್ಯ ನಮ್ಮ ಅರಣ್ಯ ತಜ್ಞರಿಗೆ ಕಂಡುಬಂತು.

ನೀಲಗಿರಿ ಪ್ಲಾಂಟೇಶನ್ ಕುರಿತಂತೆ ಡಾ. ಶಿವರಾಮ ಕಾರಂತ್ ಹಾಗೂ ಅವರ ಸಮೀಪ ಸಂಬಂಧಿ, ಆಗಿನ ಪ್ರಧಾನ ಅರಣ್ಯ ಸಂರಕ್ಷಕ ಎಸ್. ಶ್ಯಾಮಸುಂದರ್ ಅವರ ನಡುವಣ ಜಗಳ ಅಂದಿನ ದಿನಗಳಲ್ಲಿ ಸುವಿಖ್ಯಾತವಾಗಿತ್ತು. ಬೇಡ್ತಿ ಸೆಮಿನಾರಿನಲ್ಲೇ ಡಾ. ಕಾರಂತರು ತಮ್ಮ ಸೋದರ ಅಳಿಯನನ್ನು ತರಾಟೆಗೆ ತೆಗೆದುಕೊಂಡಿದ್ದರು. 'ಜಾಸ್ತಿ ಮಳೆ ಬೀಳುವಂಥ ಸದಾ ಹಸಿರಿನ ಅರಣ್ಯಗಳಲ್ಲಿ ನೀಲಗಿರಿಗೆ ಗುಲಾಬಿ ವೈರಸ್ ರೋಗ ಬರುತ್ತದೆಂಬುದು ಗೊತ್ತಿದ್ದರೂ ಯಾಕೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪಶ್ಚಿಮ ಘಟ್ಟಗಳಲ್ಲಿ ನೈಸರ್ಗಿಕ ಅರಣ್ಯಗಳನ್ನು ಕ್ಲಿಯರ್ ಫೆಲ್ಲಿಂಗ್ ಮಾಡಿ ನೀಲಗಿರಿ



ನೆಡುತೋಪು ಬೆಳೆಸಬೇಕಿತ್ತು?' ಎಂಬ ಕಾರಂತರ ಪ್ರಶ್ನೆಗೆ ಶ್ಯಾಮಸುಂದರ್ ಅಂದು ನೇರ ಉತ್ತರ ನೀಡಿರಲಿಲ್ಲ. ಆದರೆ ಮುಂದೆ ಕೆಲವೇ ತಿಂಗಳುಗಳ ನಂತರ ಎಲ್ಲೆಡೆ ನೀಲಗಿರಿ ಸಾಮಾಜಿಕ ಅರಣ್ಯ ವ್ಯಾಪಕವಾಗಿ ಬೇರೂರತೊಡಗಿ, ರೈತಸಂಘವೂ ಸೇರಿದಂತೆ ಅನೇಕ ಜನಸಂಘಟನೆಗಳು ಅದನ್ನು ಕಿತ್ತೆಸೆಯಲು ಆರಂಭಿಸಿದಾಗ ಶ್ಯಾಮಸುಂದರ್ ಉತ್ತರ ನೀಡಿದರು. ಆಗಲೂ ನೇರವಾಗಿ ಅಲ್ಲ, ಮೈಸೂರಿನ ಸಮೀಪ ತಂಬಾಕು ಬೆಳೆಯುತ್ತಿದ್ದ ಡಾ. ಕಾರಂತರ ಮಗ ಉಲ್ಲಾಸ ಕಾರಂತರ ಮೂಲಕ! (ನಂತರದ ದಿನಗಳಲ್ಲಿ ಉಲ್ಲಾಸ ಕಾರಂತರು ತಂಬಾಕಿನ ಕೃಷಿ ಕೈಬಿಟ್ಟು ತಮ್ಮನ್ನು ಸಂಪೂರ್ಣವಾಗಿ ಹುಲಿ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ). ಇತ್ತ ಉಲ್ಲಾಸರು ನೀಲಗಿರಿಯಂಥ ಶೀಘ್ರ ಬೆಳೆಯುವ, ಬೇಲಿಯೇ ಬೇಕಿಲ್ಲದ ಸಸ್ಯದ ಸದ್ಗುಣಗಳ ಕುರಿತು ಪತ್ರಿಕೆಗಳಿಗೆ ಜನಪ್ರಿಯ ಲೇಖನ ಬರೆಯುತ್ತಿದ್ದರೆ, ಅತ್ತ ಅವರ ತಂದೆ ಇದಕ್ಕೆ ತೀರಾ ವಿರುದ್ಧವಾದ ಹಾದಿ ತುಳಿದಿದ್ದರು. ಬಿರ್ಲಾ ಒಡೆತನದ ಕಾರ್ಖಾನೆಗೆಂದು ಹಾವೇರಿಯ ಬಳಿ ನೀಲಗಿರಿ ನೆಡುತ್ತಿರುವ ಸರಕಾರಿ ಪ್ಲಾಂಟೇಶನ್ ಕಾರ್ಖಾನೆಯ ವಿರುದ್ಧ ಮುಖ್ಯ ಫಿರ್ಯಾದುದಾರರಾಗಿ ಅವರು ನ್ಯಾಯಾಲಯದ ಕಟ್ಟೆ ಏರಿದ್ದರು!

ಅಷ್ಟೊತ್ತಿಗಾಗಲೇ ರಾಜ್ಯದ ಉದ್ದಗಲಕ್ಕೂ ವ್ಯಾಪಿಸಿದ್ದ ನೂರಾರು ಸ್ವಯಂಸೇವಾ ಸಂಸ್ಥೆಗಳು 'ಫೆವಾರ್ಡ್-ಕೆ' ಹೆಸರಿನಲ್ಲಿ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಂಡಿದ್ದರು. ಬೇಡ್ತಿ ಸೆಮಿನಾರಿನ ರೂವಾರಿಯಾಗಿದ್ದ ಪ್ರೊ. ಲಿಂಗೇಶ ಶರ್ಮಾ ಅವರು 'ಫೆವಾರ್ಡ್' ಆಶ್ರಯದಲ್ಲಿ ರಾಜ್ಯದಾದ್ಯಂತ ಅದೆ ತಾನೆ ಜಾರಿಗೆ ಬಂದಿದ್ದ ಪಂಚಾಯತ್ ರಾಜ್ ವ್ಯವಸ್ಥೆ ಕುರಿತು ತರಬೇತಿ ಶಿಬಿರಗಳನ್ನು ನಡೆಸಿದರು. ಪ್ರತಿ ಶಿಬಿರದಲ್ಲೂ ಅಭಿವೃದ್ಧಿಯ ಸಾಮಾಜಿಕ ಆಡೆತಡೆಗಳ ಚರ್ಚೆ, ಪರಿಸರ ರಕ್ಷಣೆಯ ಚರ್ಚೆ, ಗ್ರಾಮೀಣಮಟ್ಟದಲ್ಲಿ ಸ್ವಾವಲಂಬನೆಯ ಹಾದಿಯ ಕುರಿತು ಚರ್ಚೆ. ರಾಜ್ಯದಲ್ಲಿ ಎಲ್ಲೇ ಪರಿಸರ ಧ್ವಂಸದ ವಿರುದ್ಧ ಪ್ರತಿಭಟನೆ ನಡೆಯಲಿ ಅಲ್ಲಿ 'ಫೆವಾರ್ಡ್' ತಂಡ ಹಾಜರ್. ಅದು ಹರಿಹರದ ಪಾಲಿಫೈಬರ್ ಕಂಪನಿಯ ವಿರುದ್ಧ, ಶಿವಮೊಗ್ಗದ ಸಮೀಪ ಮೈಸೂರ್ ಪೇಪರ್ ಮಿಲ್ಸ್‌ನವರ ಸಿ ಅಂಡ್ ಡಿ ಲ್ಯಾಂಡ್ ಅತಿಕ್ರಮಣದ ವಿರುದ್ಧ, ಬಾಳೆಹೊನ್ನೂರಿನ ಬಳಿ ತುಂಗಾ ನದಿಗೆ ಅಣೆಕಟ್ಟಿನ ವಿರುದ್ಧ, ಕುಸನೂರಿನ ಬಳಿ ನೆಡುತೋಪಿಗಾಗಿ ಗೋಮಾಳಗಳ ಕಬಳಿಕೆಯ ವಿರುದ್ಧ, ರಾಣೆಬೆನ್ನೂರಿನಲ್ಲಿ ಕೃತಕ ನೂಲಿನ ಬಟ್ಟೆಗಳ ವಿರುದ್ಧ, ಬಿಣಗಾದ ಬಳಿ ಕಾಸ್ಟಿಕ್ ಸೋಡಾ ಕಾರ್ಖಾನೆಯ ಮಾಲಿನ್ಯ ವಿರುದ್ಧ, ಗೇರುಸೊಪ್ಪಾದ ಬಳಿ ಶರಾವತಿ ಟೇಲ್‌ರೇಸ್ ಯೋಜನೆಯ ವಿರುದ್ಧ, ಕೈಗಾ ಪರಮಾಣು ಸ್ಥಾವರ ಯೋಜನೆಯ ವಿರುದ್ಧ ಕೂಗೆತ್ತಲು – ಈ ಸ್ವಯಂಸೇವಾ ಸಂಸ್ಥೆಗಳ

ಯುವಕ-ಯುವತಿಯರೇ ಜಮಾ ಆಗುತ್ತಿದ್ದರು. ಸ್ಥಳೀಯ ಜನರ ಬೆಂಬಲ ಸಾಕಷ್ಟಿಲ್ಲದ ಪ್ರಸಂಗಗಳಲ್ಲೂ ಸಭೆ, ಭಿತ್ತಪತ್ರ, ಹಾಡು, ಘೋಷಣೆ, ಬೀದಿ ಪ್ರದರ್ಶನಗಳಲ್ಲಿ ಈ ನೂರಿನ್ನೂರು ಜನರ ಹಾಜರಿಯೇ ಕಾರ್ಯಕ್ರಮದ ಯಶಸ್ಸಿಗೆ ಸಾಕಾಗುವಷ್ಟಾಗುತ್ತಿದ್ದುದರಿಂದ ರಾಜ್ಯದಾದ್ಯಂತ ಒಂದರಮೇಲೊಂದರಂತೆ ಪರಿಸರ ಚಳುವಳಿಗಳ ಸುದ್ದಿ ಮಾಧ್ಯಮಗಳಲ್ಲಿ ಬರತೊಡಗಿದವು.

ಈ ಪಟ್ಟಿಯಲ್ಲಿ ಕೈಗಾ ಚಳುವಳಿಯನ್ನು ವಿಶೇಷವಾಗಿ ಹೆಸರಿಸಬೇಕಾದ ಅಗತ್ಯವಿದೆ. ಏಕೆಂದರೆ ಅಭಿವೃದ್ಧಿಶೀಲ ದೇಶಗಳಲ್ಲಿ ಅಣುಶಕ್ತಿಯ ವಿರುದ್ಧ ತಲೆ ಎತ್ತಿದ ಮೊದಲ ಪ್ರತಿಭಟನೆ ಇದು. ಚಿಪ್ಕೊದ ನಂತರ ಎಂಬತ್ತರ ದಶಕದಲ್ಲಿ ಅತಿ ಹೆಚ್ಚಿನ ಅಂತರರಾಷ್ಟ್ರೀಯ ಪ್ರಸಿದ್ಧಿ ಪಡೆದ ಚಳುವಳಿಯೂ ಇದೇ.

ಆವರೆಗಿನ ಪರಿಸರ ಚಳುವಳಿಗಳೆಲ್ಲ ಜನಕ್ಕೆ ಗೊತ್ತಿದ್ದ ಸಮಾಜ ಕಂಟಕರ ವಿರುದ್ಧವೇ ಆಗಿತ್ತು. ಅಂದಿನ ಪರಿಸರ ದುಸ್ಥಿತಿಗೆ ಮರಕಟುಕರು, ಧನವಂತ ಉದ್ಯಮಿಗಳು, ಗಣಿ ಮಾಲಿಕರು, ಭ್ರಷ್ಟ ಅಧಿಕಾರಿಗಳು, ಸ್ವಾರ್ಥ ರಾಜಕಾರಣಿಗಳೇ ಮುಂತಾದ ಪರಿಚಿತ ಖಳನಾಯಕರು ಕಾರಣರೆಂದು ಬಿಂಬಿತವಾಗಿದ್ದರಿಂದ ಅಂಥವರ ವಿರುದ್ಧ ಕೂಗೆಬ್ಬಿಸಲು ಜನಕ್ಕೆ ಒಂದು ಹೊಸ ಕಾರಣ ಬೇಕಾಗಿತ್ತು. ಅದಕ್ಕೆ ಸೂಕ್ತವಾದ 'ಪರಿಸರ' ಒದಗಿ ಬಂದಿತ್ತು. ಆದರೆ ಅಣುಶಕ್ತಿಯಂಥ ಗಹನ ತಂತ್ರಜ್ಞಾನದ, ದೇಶದ ಸುರಕ್ಷೆಗೂ ಸಂಬಂಧಿಸಿದ ಪ್ರಶ್ನೆ ಗಡಚಿನದಾಗಿತ್ತು. ವಿಜ್ಞಾನಿಗಳನ್ನು, ಅದರಲ್ಲೂ ಭಾಭಾ, ಸಾರಾಭಾಯಿ, ರಾಜಾರಾಮಣ್ಣರಂಥವರನ್ನು ಜಗದ್ವಂದ್ಯರೆಂದೇ ಭಾವಿಸಿ ಮನ್ನಣೆ ನೀಡುತ್ತಿದ್ದ ದೇಶದಲ್ಲಿ ಅವರ ಸಾಧನೆಗಳನ್ನೇ ಪ್ರಶ್ನಿಸುವುದು ತುಂಬ ನಾಜೂಕಿನ ವಿಷಯವಾಗಿತ್ತು. ಹಾಗೆ ಪ್ರಶ್ನಿಸಿದವರು 'ದೇಶದ್ರೋಹಿ' ಎನ್ನಿಸಿಕೊಳ್ಳುತ್ತಾರೆಂದು ಸ್ವತಃ ರಾಜಾರಾಮಣ್ಣನವರೇ ೧೯೮೧ರಲ್ಲಿ ಅಣುಶಕ್ತಿ ಇಲಾಖೆಯ ಅಧ್ವಾನಗಳ ಬಗ್ಗೆ ಮುಂಬಯಿಯ ಪತ್ರಕರ್ತ ಪ್ರಫುಲ್ ಬಿದ್ವಾಯಿಯವರು ಸರಣಿ ಲೇಖನ ಬರೆದ ಸಂದರ್ಭದಲ್ಲಿ ಘೋಷಿಸಿದ್ದರು.

ಅಣುಬಾಂಬಿನ ಕರಾಳ ಚರಿತ್ರೆ ಹಿರೊಶಿಮಾ ನಾಗಾಸಾಕಿಗಳಿಂದಾಗಿ ಹಿಂದೆಯೇ ಜನಮನದಲ್ಲಿ ದಾಖಲಾಗಿದ್ದರೂ ಕೇವಲ ಅದೊಂದರ ಭಯವನ್ನೇ ಎದುರಿಗಿಟ್ಟುಕೊಂಡು ವಿದ್ಯುತ್ ಉತ್ಪಾದನೆಯಂಥ ಶಾಂತಿಯುತ ಬಳಕೆಯಲ್ಲೂ ಅಪಾಯವಿದೆಯೆಂದು ಬಿಂಬಿಸುವುದು ಸುಲಭದ ಕೆಲಸವಾಗಿರಲಿಲ್ಲ. ಅದೂ ಅಲ್ಲದೆ, ಅಣೆಕಟ್ಟು-ಮುಳುಗಡೆಯಂಥ ಅಧ್ವಾನಗಳನ್ನು ತಡೆಯಲೆಂದೇ ಅಣುಶಕ್ತಿಯಂಥ 'ಸುರಕ್ಷಿತ' ತಂತ್ರಜ್ಞಾನವನ್ನು ಜಿಲ್ಲೆಗೆ ತಾನೇ ಕರೆಸುತ್ತಿದ್ದೇನೆಂದು ಅದೇ ಜಿಲ್ಲೆಯ ಜನಪ್ರಿಯ ಧುರೀಣ ಹಾಗೂ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು



ಹೇಳತೊಡಗಿದ್ದರು ಬೇರೆ. ಹೀಗೆ ಎಲ್ಲ ಕೋನಗಳಿಂದಲೂ ಭದ್ರಕೋಟೆಯಂತಿದ್ದ ಅಣುಶಕ್ತಿಯ ವಿರುದ್ಧ ಜನ ಒಂದಾಗಿದ್ದು, ಅಷ್ಟೇ ಅಲ್ಲ, ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಪಂಚಾಯತು ಮತ್ತು ಮಂಡಲ ಪಂಚಾಯತು ಗಳು ಈ ಸ್ಥಾವರದ ವಿರುದ್ಧ ಅವಿರೋಧ ಗೊತ್ತುವಳಿ ಸ್ವೀಕರಿಸಿದ್ದು ಒಂದು ವಿನೂತನ ದಾಖಲೆಯೆಂದೇ ಹೇಳಬೇಕು.

ಅಂಥ ಒಕ್ಕೊರಲಿನ ಪ್ರತಿಭಟನೆ ಕೇವಲ ಉತ್ತರ ಕನ್ನಡ ಜಿಲ್ಲೆಗೆ ಸೀಮಿತವಾಗಿರಲಿಲ್ಲ. ಅದು ರಾಷ್ಟ್ರೀಯ ಮಟ್ಟದ್ದಾಗಿತ್ತು. ಅದಕ್ಕೆ ಪಾಶ್ಚಾತ್ಯ ದೇಶಗಳ ವಿಜ್ಞಾನಿಗಳೂ ವಿಚಾರವಾದಿಗಳೂ ದನಿಗೂಡಿಸಿದರು. ಡಾ. ಶಿವರಾಮ ಕಾರಂತ, ಪೇಜಾವರಸ್ವಾಮಿ, ಪ್ರೊ. ಅಮೂಲ್ಯ ರೆಡ್ಡಿ, ದಿಲ್ಲಿಯ ಪ್ರೊ. ಧೀರೇಂದ್ರ ಶರ್ಮಾ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಕೃಷ್ಣ ಅಯ್ಯರ್, ತಾರಕುಂಡೆ, ಹೈದರಾಬಾದ್‌ನ ಎಂಜಿನಿಯರ್ ಟಿ. ಶಿವಾಜಿ ರಾವ್, ಇಂಗ್ಲೆಂಡಿನ ಪೀಟರ್ ಬುನ್ಯಾರ್ಡ್, ಆಸ್ಟ್ರೇಲಿಯಾದ ಹೆಲೆನ್ ಕಾಲ್ಡಿಕಾಟ್, ಕೆನಡಾದ ಬದಲೀ ನೊಬೆಲ್ ವಿಜೇತೆ ಡಾ. ರೊಸಾಲಿ ಬರ್ಟೆಲ್ ಇಂಥವರೆಲ್ಲರೂ ಕೈಗಾ ಚಳುವಳಿಯನ್ನು ಬೆಂಬಲಿಸಿ ಕಾರಣಗಳನ್ನು ನೀಡಿದರು. ಅಣುಶಕ್ತಿಯ ಸಾಧಕ-ಬಾಧಕಗಳನ್ನು ಕುರಿತಂತೆ ಬೆಂಗಳೂರಿನಲ್ಲಿ ಸರಕಾರವೇ ಒಂದು ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಬೇಕಾಗಿ ಬಂತು.

ಗಮನಾರ್ಹ ಸಂಗತಿಯೇನೆಂದರೆ, ರಾಷ್ಟ್ರಮಟ್ಟದ ಬೇಡ್ತಿ ಸೆಮಿನಾರ್ ನಿಂದಾಗಿ ಅಣೆಕಟ್ಟುಗಳ ವಿರುದ್ಧ ಜನಪ್ರತಿಭಟನೆ ರೂಪುತಳೆದರೆ, ಕೈಗಾ ಕುರಿತ ಜನಪ್ರತಿಭಟನೆಯಿಂದಾಗಿ ರಾಷ್ಟ್ರೀಯ ವಿಚಾರ ಸಂಕಿರಣವೊಂದು ಸಾಧ್ಯವಾಯಿತು.

ಪಶ್ಚಿಮದ ವಿವಿಧ ದೇಶಗಳ ಪರಿಸರವಾದಿಗಳ ಗಮನ ಸೆಳೆಯುವ ನಿಟ್ಟಿನಲ್ಲಿ ಅಣುವಿರೋಧಿ ಚಳುವಳಿ ಬೆಳೆಯುತ್ತಿದ್ದ ಅವಧಿಯಲ್ಲಿಯೇ ಪಶ್ಚಿಮ ಭಾರತದ ವಿವಿಧ ರಾಜ್ಯಗಳಲ್ಲಿ ಪರಿಸರವಾದಿಗಳನ್ನು ಸೃಷ್ಟಿಸುವ ಹಾಗೂ ಬೆಸೆಯುವ 'ಪಶ್ಚಿಮಘಟ್ಟ ಉಳಿಸಿ' ಹೆಸರಿನ ವ್ಯಾಪಕ ಪಾದಯಾತ್ರೆಯ ಅಭಿಯಾನ (೧೯೮೭ರಲ್ಲಿ) ನಡೆಯಿತು. ಕೇರಳ, ಕರ್ನಾಟಕ, ಗೋವಾ, ಮಹಾರಾಷ್ಟ್ರದುದ್ದಕ್ಕೂ ಚಾಚಿ ನಿಂತ ಪಶ್ಚಿಮ ಘಟ್ಟಗಳ ದಟ್ಟ ಅರಣ್ಯಗಳ ಮೂಲಕ ರಿಲೇ ತಂಡಗಳು ಕಾಲ್ನಡಿಗೆಯಲ್ಲಿ ಸಾಗಿದವು. ಕಳೆದ ನಾಲ್ಕು ದಶಕಗಳಲ್ಲಿ ಈ ಘಟ್ಟಸಾಲಿನಲ್ಲಿ ಎಲ್ಲೆಲ್ಲಿ ಏನೆಲ್ಲ ಅಧ್ವಾನಗಳಾಗಿವೆ ಎಂಬುದನ್ನು ಹೊರಗಿನವರಿಗಷ್ಟೇ ಅಲ್ಲ, ಸ್ಥಳೀಯರಿಗೂ ಬಿಂಬಿಸುವಲ್ಲಿ ಇದು ಯಶಸ್ವಿ ಯಾಯಿತು. ಸಾಹಿತಿಗಳು, ಸಿನಿಮಾ ನಟರು, ಪತ್ರಕರ್ತರು, ಸಂಗೀತ ಕಲಾವಿದರು, ವೈದ್ಯರು, ಕಾನೂನುತಜ್ಞರು, ಉಪನ್ಯಾಸಕರು ಹೀಗೆ ಸಮಾಜದ ಎಲ್ಲ ಸ್ತರಗಳಿಂದ ಜನ ಬಂದರು.

ಗೀತೆ, ಭಜನೆ, ಜಾನಪದ ಕಥೆ, ಕಲೆ, ಬೀದಿನಾಟಕ, ಛಾಯಾಗ್ರಹಣ ಗಳಂಥ ಸೃಷ್ಟಿಶೀಲ ಕೆಲಸಗಳೆಲ್ಲ ಮತ್ತೊಮ್ಮೆ ನಿಸರ್ಗಮುಖಿಯಾದುವಷ್ಟೇ ಅಲ್ಲ, ಅಳಿವಿನಂಚಿಗೆ ಬರುತ್ತಿದ್ದ ನಾಟಿವೈದ್ಯ, ವೃಕ್ಷಾಯುರ್ವೇದ, ಸಾವಯವ ಕೃಷಿಯಂಥ ಚಟುವಟಿಕೆಗಳೂ ಈ ಪಾದಯಾತ್ರೆ ಯಿಂದಾಗಿ ಮತ್ತೆ ಹೊಸತನ ಪಡೆಯತೊಡಗಿದವು. ಪಾಶ್ಚಾತ್ಯರ ಪಾಲಿಗೆ 'ಸೈಲೆಂಟ್ ಸ್ಪ್ರಿಂಗ್' (ಮೌನ ವಸಂತ) ಹೆಸರಿನ ಗ್ರಂಥವೇ ಪರಿಸರ ಚಳುವಳಿಗಳಿಗೆ ಚಾಲನೆ ಕೊಟ್ಟರೆ ಭಾರತದ ಈ ಭಾಗದಲ್ಲಿ ಹೇಮಂತ ಋತುವಿನಲ್ಲಿ ಕಾನನಗಳಲ್ಲೆದ್ದ ಭರಾಟೆ ಗಲಾಟೆಗಳೇ ಪರಿಸರ ಚಳುವಳಿಗಳಿಗೆ, ಗ್ರಂಥ ರಚನೆಗಳಿಗೆ ಪ್ರೇರಕವಾದವು.

ಪಶ್ಚಿಮ ಘಟ್ಟಗಳ ಗಿಡಮರಗಳನ್ನು ಅಪ್ಪಿ ಬೆಳೆದ ಚಳುವಳಿಗಳು ಈಗ ಮಣ್ಣು, ನೀರು, ಆಕಾಶಗಳಿಗೆ ಎಲ್ಲೇ ಅನ್ಯಾಯವಾದರೂ ಪ್ರತಿಭಟಿಸುವ ಮಟ್ಟಕ್ಕೆ ಬೆಳೆದವು. ಮಂಡ್ಯದ ಕಾಗದ ಕಾರ್ಖಾನೆಯಿಂದ ಸೂಸುವ ವಾಯುಮಾಲಿನ್ಯದ ವಿರುದ್ಧ, ಬೆಂಗಳೂರಿನ ಲಾಲ್‌ಬಾಗಿನ ಕೆರೆಯ ಜಲ ಪಕ್ಷಿಗಳಿಗೆ ಮಾರಕವಾಗ ಬಹುದಾದ ದೋಣಿ ವಿಹಾರದ ವಿರುದ್ಧ, ಬೀದರಿನಲ್ಲಿ ರಾಸಾಯನಿಕ ಕಾರ್ಖಾನೆ ಗಳಿಂದಾಗುತ್ತಿರುವ ಮಣ್ಣು ಮಾಲಿನ್ಯದ ವಿರುದ್ಧ, ಮಂಗಳೂರು ಬಳಿಯ ತಣ್ಣೀರುಬಾವಿಯಲ್ಲಿ ಗುಜರಿ ಹಡಗುಗಳನ್ನು ಒಡೆಯುವುದರ ವಿರುದ್ಧ, ಮೈಸೂರಿನ ರಟ್ನಹಳ್ಳಿಯ ಬಳಿ ತಲೆಯೆತ್ತುತ್ತಿರುವ ಯುರೇನಿಯಂ ಸಾಂದ್ರೀಕರಣ ಘಟಕದಿಂದ ಹೊಮ್ಮಬಹುದಾದ ವಿಕಿರಣದ ವಿರುದ್ಧ, ನಾಗರಹೊಳೆಯಲ್ಲಿ ಪ್ರವಾಸಿಗಳಿಗೆ ಹೊಟೆಲ್ ಆರಂಭಿಸುವವರ ವಿರುದ್ಧ, ನಂದಿಕೂರಿನ ಥರ್ಮಲ್ ಸ್ಥಾವರದ ವಿರುದ್ಧ, ತದಡಿಯಲ್ಲಿ ತೇಲುತೆಪ್ಪದ ವಿದ್ಯುತ್ ಸ್ಥಾವರದ ವಿರುದ್ಧ, ತುಂಗಾಮೂಲ, ಗಂಗಡಿಕಲ್ಲಿನಲ್ಲಿ ಗಣಿಗಾರಿಕೆ ವಿಸ್ತರಣೆಯ ವಿರುದ್ಧ, ಸಾಗರದಲ್ಲಿ ಚಿನ್ನದ ಅದುರುಶೋಧದ ವಿರುದ್ಧ ಜನಸಾಮಾನ್ಯರು ಬೀದಿಗಿಳಿದರು.

ಗಾಳಿ, ನೀರು, ಆಕಾಶದಂಥ ಭೌತಿಕ ಸಂಗತಿಗಳ ಹಾಗೆ ನಾಡಿನ ಸಾಂಸ್ಕೃತಿಕ ಆಯಾಮಗಳನ್ನೂ ಮಲಿನಗೊಳಿಸುವ ನವ ವಸಾಹತುಶಾಹಿ ಹುನ್ನಾರಗಳ ವಿರುದ್ಧ ಕೂಡ ಇದೇ ಅವಧಿಯಲ್ಲಿ ತೀವ್ರ ಪ್ರತಿಭಟನೆಗಳು ಪ್ರಕಟವಾದವು. ಕಾರ್ಗಿಲ್ ಕಂಪನಿಯ ಕಛೇರಿಗೆ ಮಿಂಚಿನ ದಾಳಿ ನಡೆಸಿದ ರೈತರು 'ಬೀಜ ಸತ್ಯಾಗ್ರಹ' ಘೋಷಿಸಿದರು. ಬರಲಿರುವ ಗ್ಯಾಟ್ ಡಂಕೆಲ್ ಪ್ರಹಾರಗಳ ಮುನ್ಸೂಚನೆ ಆಗಲೇ ಗ್ರಹಿಕೆಗೆ ಬಂದಂತೆ ಕರ್ನಾಟಕದ ರೈತ ಸತ್ಯಾಗ್ರಹವನ್ನೇ ಮಾದರಿಯಾಗಿಟ್ಟುಕೊಂಡು ಮಹಾರಾಷ್ಟ್ರ, ಉತ್ತರ ಪ್ರದೇಶ, ಹರಿಯಾಣಗಳಲ್ಲೂ ಪ್ರತಿಭಟನೆಗಳು ನಡೆದವು. ಇತ್ತ ಬೆಂಗಳೂರಿನ ಸಮೀಪ ಬಿಡದಿ, ಸಾತನೂರುಗಳಲ್ಲಿ ಜಪಾನಿನ ಉದ್ಯಮಿಗಳಿಗೆಂದು ಕೈಗಾರಿಕಾ ಕಾಲೊನಿ ನಿರ್ಮಿಸುವ ಸಿದ್ಧತೆ ನಡೆದಾಗ ಪರಿಸರ ಮಾಲಿನ್ಯಕ್ಕಿಂತ ಸಾಂಸ್ಕೃತಿಕ



ಮಾಲಿನ್ಯದ ಪ್ರಶ್ನೆಯನ್ನೇ ಮುಂದಿಟ್ಟುಕೊಂಡು ಚಿದಾನಂದ ಮೂರ್ತಿ, ಕೆ.ವಿ. ಸುಬ್ಬಣ್ಣ ಮುಂತಾದ ಹಿರಿಯರ ನೇತೃತ್ವದಲ್ಲಿ ಚಳುವಳಿ ನಡೆಯಿತು. ಜಪಾನೀಯರು ಇಲ್ಲಿ ಕಾಲೊನಿ ಆರಂಭಿಸುವ ಯೋಜನೆಯನ್ನು ಕೈಬಿಟ್ಟರು. ಜೈವಿಕ ಸೃಷ್ಟಿಯೂ ಬೌದ್ಧಿಕ ಆಸ್ತಿಯೆಂದೇ ಪರಿಗಣಿಸಿ ಅಪರೂಪದ ಸಸ್ಯಗಳ ಹಕ್ಕು ಸ್ವಾಮ್ಯವನ್ನು ತಮ್ಮದಾಗಿಸಿ ಕೊಳ್ಳುವತ್ತ ಪಾಶ್ಚಾತ್ಯರು ಹೆಜ್ಜೆಯಿಡುತ್ತಿದ್ದಂತೆಯೇ ನಮ್ಮ ಪಶ್ಚಿಮ ಘಟ್ಟಗಳ ಜೀವ ವೈವಿಧ್ಯಗಳ ರಕ್ಷಣೆಗಾಗಿ ಚಳುವಳಿಗಳು ಆರಂಭವಾದವು. ಜೀವವೈವಿಧ್ಯ ದಾಖಲಾತಿಯ ಕೆಲಸ ಆರಂಭವಾಯಿತು.

ತೊಂಭತ್ತರ ದಶಕದ ಉತ್ತರಾರ್ಧದ ವೇಳೆಗೆ ಕರ್ನಾಟಕದಲ್ಲಿ ಪರಿಸರ ಚಳುವಳಿಗಳ ಒಂದು ಯುಗ ಮುಗಿದಂತೆ ತೋರುತ್ತಿದೆ. ದಕ್ಷಿಣ ಕನ್ನಡದಲ್ಲಿ ಎಮ್‌ಆರ್‌ಪಿಎಲ್, ತೇಲುತೆಪ್ಪ, ಪೆಟ್ರೋಲ್ ಪೈಪ್‌ಲೈನ್ ಮತ್ತು ಕುದುರೆಮುಖ ಅಭಯಾರಣ್ಯದ ನಿರಾಶ್ರಿತರ ವಿಷಯದಲ್ಲಿ ಪ್ರತಿಭಟನೆ, ಕಬ್ಬನ್ ಪಾರ್ಕ್ ಅತಿಕ್ರಮಣ ವಿರುದ್ಧ ಬೆಂಗಳೂರಿನ ಗಣ್ಯರ ಪ್ರತಿಭಟನೆ, ನಾಗರಹೊಳೆ ಅಭಯಾರಣ್ಯದ ನಿರಾಶ್ರಿತರ ಕುರಿತು ಹುಣಸೂರಿನಲ್ಲಿ ಜಾಥಾ, ಬೆಂಗಳೂರು- ಮೈಸೂರು ಸೂಪರ್ ಹೈವೇ ವಿರುದ್ಧ ಎಡಪಂಥೀಯ ಸಂಘಟನೆಗಳ ಪ್ರತಿಭಟನೆ ಯಂಥ ಅಲ್ಲೊಂದು ಇಲ್ಲೊಂದು ಚಳುವಳಿಗಳು ಸುದ್ದಿ ಮಾಡುತ್ತಿರುವುದನ್ನು ಬಿಟ್ಟರೆ ೧೯೮೦-೯೫ರ ನಡುವಣ ಪರಿಸರ ಚಳುವಳಿಗಳ ಬಿರುಸು ಭರಾಟೆಗಳೆಲ್ಲ ತಣ್ಣಗಾಗಿವೆ. ಮಳೆಗಾಲದಲ್ಲಿ ಪುಂಖಾನುಪುಂಖ ಎದ್ದು ಏಕತ್ರವಾಗಿ ಸದ್ದು ಹೊಮ್ಮಿಸಿದ ಜೀರುಂಡೆಗಳು ಬೇಸಿಗೆಯಲ್ಲಿ ಅಣುಗಾತ್ರಕ್ಕಿಳಿದು ಮೌನವಾಗಿ ಮಣ್ಣು ಸೇರುವ ಪರಿ.

ಈ ಹಂತದಲ್ಲಿ ಒಮ್ಮೆ ಹಿಂದಿರುಗಿ ನೋಡಿ, ಕರ್ನಾಟಕದ ಪರಿಸರ ಹೋರಾಟಗಳ ಈವರೆಗಿನ ಸೋಲು ಗೆಲುವುಗಳ ಲೆಕ್ಕಪತ್ರ ತಪಶೀಲು ನಡೆಸಿದಾಗ ಕೆಲವು ಸಂಗತಿಗಳು ನಿಚ್ಚಳವಾಗಿ ಕಾಣುತ್ತವೆ: ಪ್ರತಿಭಟನೆ, ಮೆರವಣಿಗೆಗಳಂಥ ನೇರ ಹೋರಾಟಗಳಿಂದ ಜನಜಾಗೃತಿ ಸಾಧ್ಯವಾಯಿತೇ ವಿನಾ, ವಿನಾಶಕಾರಿ ಯೋಜನೆ ಗಳನ್ನು ಈ ವಿಧಾನದಲ್ಲಿ ನಿಲ್ಲಿಸುವುದು ಸಾಧ್ಯವಾಗಿಲ್ಲ. ಎರಡು ಸಂದರ್ಭಗಳಲ್ಲಿ ಯಶಸ್ಸು ಸಿಕ್ಕಿವೆ ನಿಜ – 'ಕರ್ನಾಟಕ ಪ್ಲಾಂಟೇಶನ್ ಕಾರ್ಪೊರೇಷನ್' ಮುಚ್ಚಿತು. ಆದರೆ ಅದಕ್ಕೆ ಡಾ. ಕಾರಂತ ಮತ್ತು ಎಸ್.ಆರ್. ಹಿರೇಮಠರು ಎಡೆಬಿಡದೆ ನಡೆಸಿದ ನ್ಯಾಯಾಂಗ ಹೋರಾಟವೇ ಕಾರಣವೇ ವಿನಾ ಕುಸನೂರಿನ 'ಕಿತ್ತಿಕೊ ಹಚ್ಚಿಕೊ' ಚಳುವಳಿಯಾಗಲೀ ರಾಣೆಬೆನ್ನೂರಿ ನಲ್ಲಿ ನೈಲಾನ್ ಬಟ್ಟೆ ಸುಡುವ ಕಾರ್ಯಕ್ರಮ ವಾಗಲೀ ಕಾರಣವಾಗಿರಲಿಲ್ಲ. ಜಪಾನೀ ಕೈಗಾರಿಕಾ ನಗರ ನಿರ್ಮಾಣ ಯೋಜನೆ ಯನ್ನು ಕೈಬಿಡಲಾಯಿತು. ಅದಕ್ಕೆ ಜಪಾನೀ ಹಿಂಜರಿತ ಕಾರಣವೇ ವಿನಾ ಕರ್ನಾಟಕ ಸರಕಾರದ ವಕ್ತಾರರು ಕೊನೆಯ

ನಿಮಿಷದವರೆಗೂ, ‘ನಾವು ಜಾಗ ಕೊಡದಿದ್ದರೆ ಅದನ್ನು ಆಂಧ್ರದವರು ಸ್ವಾಗತಿಸಿ ಬಿಡುತ್ತಾರೆ’ ಎಂದು ಚಡಪಡಿಸುತ್ತಲೇ ಇದ್ದರು. ಇಷ್ಟಕ್ಕೂ ‘ಹೋದೆಯಾ ಪಿಶಾಚಿ’ ಎಂದು ಸಂತಸಪಟ್ಟವರು ಇತ್ತ ವಿರಮಿಸುತ್ತಲೇ ಅತ್ತ ಅದೇ ಬಿಡದಿ-ಸಾತನೂರಿನ ನಿವೇಶನದಲ್ಲಿ ಈಗ ಪಾಶ್ಚಾತ್ಯ ಸಂಸ್ಕೃತಿಯ ಪ್ರತಿನಿಧಿಯಾಗಿ ವೈಭವೋಪೇತ ಗಾಲ್ಫ್‌ಕ್ಲಬ್ ರೂಪುಗೊಂಡಿದೆ. ಅದಕ್ಕೆಂದು ಹೊಲಗಳನ್ನು ಮಾರಿದ ರೈತರು ಅದೇ ತಾಣದಲ್ಲಿ ಇಂದು ಕೂಲಿಗಳಾಗಿ ಲ್ಯಾಂಡ್‌ಸ್ಕೇಪಿಂಗ್ ಮಾಡುತ್ತಿದ್ದಾರೆ. ‘ಪರಿಸರವಾದಿಗಳಿಂದಾಗಿ ಯೋಜನೆಗಳಿಗೆ ಅಡೆತಡೆ ಬರುತ್ತಿದೆ’ ಎಂದು ಸಚಿವ ಸ್ಥಾನದಲ್ಲಿರುವ ಜನಪ್ರತಿನಿಧಿಗಳು ಕೊಜೆಂಟ್ರಿಕ್ಸ್, ಕುದುರೆಮುಖ ವಿಸ್ತರಣೆ, ಶೀಗಡಿ ಕೃಷಿ, ಸೂಪರ್ ಹೈವೇ, ಬಾರ್ಜ್‌ಮೌಂಟೆಡ್ ವಿದ್ಯುತ್ ಸ್ಥಾವರದಂಥ ಉದಾಹರಣೆಗಳನ್ನು ಕೊಡುತ್ತಿದ್ದಾರಾದರೂ ಅವೆಲ್ಲ ಆಡಳಿತಾತ್ಮಕ ಜಂಜಾಟಗಳಿಂದಾಗಿಯೇ ಜಾರಿಗೆ ಬರುವಲ್ಲಿ ತಡವಾಗುತ್ತಿವೆ ಎಂಬುದು ನಿಚ್ಚಳವಾಗುತ್ತಿದೆ. ಪರಿಸರ ಹೋರಾಟಗಳಿಂದಾಗಿ ಅಡೆತಡೆಗಳುಂಟಾಗುವ ಬದಲು, ಜಡ್ಡುಗಟ್ಟಿದ ಆಡಳಿತ ಯಂತ್ರಕ್ಕೆ ಅವು ಕುಂಟುನೆಪಗಳ ಊರುಗೋಲಾಗಿವೆ.

ಹೋರಾಟಗಳು ವಿಫಲವಾಗಿದ್ದರೂ ‘ಪರಿಸರ ಪ್ರಜ್ಞೆ ಜಾಗ್ರತವಾಗಿದೆ’ ಎನ್ನುವಾಗಲೂ ನಾವು ಕೆಲವು ಮಿತಿಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಯಾಕೆ ಪಶ್ಚಿಮ ಘಟ್ಟಗಳ ಹಾಗೂ ಕಡಲತೀರಗಳ ಅಂಚಿನಲ್ಲೇ ಜಾಗ್ರತಿ ಜಾಸ್ತಿ ಇದೆ? ಸಂಡೂರಿನ ಗಣಿಗಾರಿಕೆಯಿಂದಾಗಿ ಸುತ್ತಮುತ್ತಲಿನ ಪರಿಸರ ವಿಪರೀತ ಬಿಗಡಾಯಿಸಿದೆ; ಅಲ್ಲಿ ಪ್ರತಿಭಟನೆಯ ಸುಳಿವಿಲ್ಲ. ತುಮಕೂರಿನ ಬಳಿಯ ಅಮ್ಮಸಂದ್ರದ ಸಿಮೆಂಟ್ ಕಾರ್ಖಾನೆಯಿಂದಾಗಿ ಸುತ್ತಲಿನ ತೆಂಗಿನ ತೋಟಗಳ ರೈತರು ಅಪಾರ ನಷ್ಟ ಅನುಭವಿಸುತ್ತಿದ್ದಾರೆ. ಆ ಕಾರ್ಖಾನೆಗೆ ಬೇಕಾದ ಸುಣ್ಣದ ಕಲ್ಲುಗಳ ಅಗತದಿಂದಾಗಿ ಕಾರೆಕುಚಿ ಎಂಬ ಒಂದು ಹಳ್ಳಿಯೇ ನಾಮಾವಶೇಷ ವಾಗಿದೆ. ಅಲ್ಲಿನ ನಿರಾಶ್ರಿತರಿಗೆ ಪರಿಹಾರವೂ ಇಲ್ಲ, ಅವರಿಂದ ಪ್ರತಿಭಟನೆಯೂ ಇಲ್ಲ. ಬೆಳಗಾವಿಯ ಅಲ್ಯೂಮಿನಿಯಂ ಕಾರ್ಖಾನೆಯ ಸುತ್ತಲಿನ ಮಾಲಿನ್ಯ ಸ್ಥಳೀಯರ ಗಮನಕ್ಕೆ ಬಂದಂತಿಲ್ಲ. ಕೋಲಾರದ ಚಿನ್ನದ ಗಣಿಯ ಮಾಲಿನ್ಯದಿಂದಾಗಿ ೩೦ ಕಿಲೋಮೀಟರ್ ದೂರದ ವರೆಗಿನ ಹಳ್ಳ ಕೊಳ್ಳ ಕೆರೆ ಕಾಲುವೆಗಳು ನಿರ್ಜೀವವಾಗಿವೆ. ಅಲ್ಲಿ ಪ್ರತಿಭಟನೆ ನಡೆದಿಲ್ಲ. ರಾಜ್ಯದ ಬಹುತೇಕ ಎಲ್ಲ ಸಕ್ಕರೆ-ಕಾಕಂಬಿ-ಬ್ರೂವರಿ-ಮದ್ಯ ಉತ್ಪಾದನಾ ಕಾರ್ಖಾನೆಗಳ ಸುತ್ತ ಮುತ್ತಲಿನ ಅಂತರ್ಜಲ ಮಲಿನವಾಗಿದೆ. ರಾಯಚೂರಿನ ಬಳಿಯ ಥರ್ಮಲ್ ವಿದ್ಯುತ್ ಕೇಂದ್ರದ ಸುತ್ತಮುತ್ತ ಕಲ್ಲಿದ್ದಲಿನ ಹಾರುಬೂದಿಯ ಉಪಟಳ ಮಿತಿಮೀರಿದೆ. ಆದರೆ ಎಲ್ಲೂ ವಿರೋಧ ವ್ಯಕ್ತವಾಗಿಲ್ಲ. ಅಷ್ಟೇಕೆ, ಪಶ್ಚಿಮ ಘಟ್ಟದ ಗರ್ಭದಲ್ಲೇ ಇರುವ



ದಾಂಡೇಲಿ ಪಟ್ಟಣದ ಸುತ್ತಮುತ್ತ ಅರಣ್ಯ ನಾಶ, ನೆಲ ಮಾಲಿನ್ಯ, ಜಲಮಾಲಿನ್ಯ, ವಾಯುಮಾಲಿನ್ಯ ಎಲ್ಲ ವ್ಯಾಪಕವಾಗಿದ್ದರೂ ಈವರೆಗೆ ಆ ಕುರಿತು ಅಲ್ಲಿ ಯಾರೂ ಮೆರವಣಿಗೆ ತೆಗೆದಿಲ್ಲ.

ಸುಲಭ ವಿಶ್ಲೇಷಣೆಗೆ ಸಿಗದ ಕರ್ನಾಟಕದ ಪರಿಸರ ಚಳವಳಿಯ ಈ ತೆರನಾದ ವಿರೋಧಾಭಾಸಗಳು ಚರಿತ್ರಕಾರರಿಗೂ ಸಾಮಾಜಿಕ ಅಧ್ಯಯನಾಸಕ್ತರಿಗೂ ಸವಾಲೊಡ್ಡುವಂತಿವೆ. ದಕ್ಷಿಣದ ರಾಷ್ಟ್ರಗಳಲ್ಲಿ ಪರಿಸರ ಹೋರಾಟವೆನ್ನುವುದು ಬರೀ ಮಧ್ಯಮವರ್ಗದ ಹೊಸ ಹವ್ಯಾಸವಾಗಿರದೆ ಅದು ಹಿಂದುಳಿದವರ ಅಸ್ತಿತ್ವದ ಹೋರಾಟವೂ ಆಗಿದೆಯೆಂದು ರಾಮ್ ಗುಹಾ ಗುರುತಿಸಿದ್ದು ನರ್ಮದಾ ಆಂದೋಲನದ ಸಂದರ್ಭದಲ್ಲಿ ಸರಿಯೇ ಇರಬಹುದಾದರೂ ಹಿಂದುಳಿದವರದೇ ಬಹುಮತವಿದ್ದ ಕೆನರಾ ಚುನಾವಣಾ ಕ್ಷೇತ್ರದಲ್ಲಿ ಡಾ. ಶಿವರಾಮ ಕಾರಂತರು ಉಗ್ರ ಚಳುವಳಿಯ ನಡುವೆಯೂ ಯಾಕೆ ಗೆಲ್ಲಲು ಅಸಮರ್ಥರಾದರು ?

ಪರಿಸರ ಅಲೆ ಬಂದ ಸಂದರ್ಭದಲ್ಲೇ ಕರ್ನಾಟಕದಲ್ಲಿ ಇನ್ನೂ ಅನೇಕ ಅಲೆಗಳು ಕಂಡುಬಂದವು. ಮಹಿಳಾ ಜಾಗ್ರತಿ, ಗ್ರಾಹಕ ಜಾಗ್ರತಿ, ದಲಿತ ಚಳುವಳಿ ಇವೆಲ್ಲವೂ ಪರಿಸರ ಚಳುವಳಿಗೆ ಸಂಲಗ್ನವಾಗಿ, ಸಮಕಾಲೀನವಾಗಿ ಇಲ್ಲಿ ಬೆಳೆದವು. ಆದರೆ ಎಲ್ಲವೂ ಈಗ ತಣ್ಣಗಾದಂತಿವೆ. ಹಾಗೆ ನೋಡಿದರೆ ಇವೆಲ್ಲ ಒಂದಕ್ಕೊಂದು ಪೂರಕವಾಗಿ ಬೆಳೆಯಬೇಕಿದ್ದವು. ಉಂಗ್ರ ಹಳ್ಳಿಯ ಮಹಿಳೆಯರ ಜೀವನ ಜಂಜಾಟಗಳು ಮಹಿಳಾ ವಿಮೋಚನಾ ಚಳುವಳಿಗೆ ಪ್ರೇರಕವಾಗಬಹುದಿತ್ತು. ನಾಗರಹೊಳೆಯಲ್ಲಿ ನೆಲೆ ತಪ್ಪಿದ ಆದಿವಾಸಿಗಳ ಕಷ್ಟ ಕಾರ್ಪಣ್ಯಗಳು ದಲಿತ ಚಳುವಳಿಯ ಮರುಹುಟ್ಟಿಗೆ ಪ್ರೇರಕವಾಗಬಹುದಿತ್ತು. ಹೆಚ್ಚುತ್ತಿರುವ ಪ್ಲಾಸ್ಟಿಕ್ ಹಾವಳಿ ಹಾಗೂ ಜನಪ್ರಿಯವಾಗುತ್ತಿರುವ ಸಾವಯುವ ಕೃಷಿ -- ಎರಡೂ ಗ್ರಾಹಕರ ಜಾಗ್ರತಿಗೆ ಚಾಲನೆ ಕೊಡಬಹುದಿತ್ತು. ಭಾರತೀಯ ಮಾರುಕಟ್ಟೆಗೆ ಬಹುರಾಷ್ಟ್ರೀಯ ಕಂಪೆನಿಗಳು ಎಗಿಲ್ಲದೆ ಲಗ್ಗೆ ಇಡುತ್ತಿರುವ ಸಂದರ್ಭದಲ್ಲಿ ಸ್ವತಃ ಪರಿಸರ ಚಳುವಳಿಯೇ ತೀವ್ರ ಸ್ವರೂಪ ಪಡೆಯಬಹುದಾದ ಎಲ್ಲ ಅವಕಾಶಗಳೂ ಇದ್ದವು. ಆದರೂ ಏಕೆ ಎಂಬತ್ತರ ದಶಕದ ಹೋರಾಟಗಾರರ ಬತ್ತಳಿಕೆಗಳು ಹಠಾತ್ತಾಗಿ ಬರಿದಾದವು ? ಈವರೆಗಿನ ಹೋರಾಟದ ಮಾರ್ಗ ಸರಿಯಲ್ಲವೆಂದಾಗಿದ್ದರೆ ಸಂಯಮದ ಮಾರ್ಗದಲ್ಲಿ ಆಳುವ ವರ್ಗದ ಮನವೊಲಿಸುವ ಮೂಲಕ, ಇಲ್ಲವೆ ನ್ಯಾಯಾಲಯಗಳ ಮೂಲಕ ಪರಿಸರ ಚಳುವಳಿ ಹೊಸ ದಿಶೆ ಪಡೆಯಬಹುದಿತ್ತು.

ಪರಿಸರವಾದವೆಂದರೆ ಕೇವಲ ಗಿಡಮರ, ಪಶುಪಕ್ಷಿಗಳ ಕುರಿತಾಗಿ ಭಾವನಾತ್ಮಕ ಪ್ರತಿಸ್ಪಂದನವಷ್ಟೇ ಅಲ್ಲವೆಂದೂ ಅದು ಪ್ರಗತಿಯ ದಿಶೆಯನ್ನು ಪ್ರಶ್ನಿಸುವ

ವಿಧಾನವೆಂದೂ ಪ್ರೊ. ಲಿಂಗೇಶ ಶರ್ಮಾ, ಡಾ. ಶಿವರಾಮ ಕಾರಂತ, ಡಾ. ಕುಸುಮಾ ಸೊರಬ ಮೂವರೂ ವಿವಿಧ ಸಂದರ್ಭಗಳಲ್ಲಿ ಹೇಳಿದ್ದರು. ಇಂದು ಆ ಮೂವರೂ ನಮ್ಮೊಂದಿಗಿಲ್ಲ. ಆದರೆ ಪ್ರಗತಿಯ ಭರಾಟೆಯಲ್ಲಿ ಸಾಮಾಜಿಕ ಅಸಮಾನತೆ ಹಾಗೂ ಮುಂದಿನ ಪೀಳಿಗೆಯ ಕ್ಲೇಶಗಳು ಹೆಚ್ಚದಂತೆ ಇಂದಿನ ಜನರನ್ನು ಎಚ್ಚರಿಸುವುದೇ ಪರಿಸರವಾದದ ಸ್ಥೂಲ ಉದ್ದೇಶವೆಂದು ಹೇಳುವುದಾದರೆ ಕರ್ನಾಟಕದಲ್ಲಿ ಈ ಚಳುವಳಿ ಈಗಲೂ ಜೀವಂತವಾಗಿದೆ ಎನ್ನಬಹುದು. ಎಚ್ಚರಿಸುವ ಕ್ರಿಯೆ ಬೀದಿಯಲ್ಲಿ ನಡೆಯುತ್ತಿಲ್ಲ; ಸೆಮಿನಾರ್ ಸಭಾಂಗಣದಲ್ಲಿ ನಡೆಯುತ್ತಿಲ್ಲವಾದರೂ ಅಕ್ಷರ ರೂಪದಲ್ಲಿ ಈಗಲೂ ಗೋಚರಿಸುತ್ತಿದೆ. ಅಕಾಡೆಮಿಕ್ ಅಧ್ಯಯನ ರೂಪದಲ್ಲಿ ನಡೆಯುತ್ತಿದೆ. ಕತೆ, ಕಾದಂಬರಿಗಳಲ್ಲಿ ನಡೆಯುತ್ತಿದೆ. ಪರಿಸರ ಚರಿತ್ರೆಯನ್ನು ಅವಲೋಕನ ಮಾಡುವ ರಾಮ್ ಗುಹಾರ ಈ ಪುಸ್ತಕದಲ್ಲಿ ಅದು ಕಾಣುತ್ತಿದೆ.

ಕರ್ನಾಟಕದಲ್ಲಿ ವ್ಯಕ್ತವಾದ ಪರಿಸರ ಪ್ರಜ್ಞೆ ಅನೇಕ ವಿಧದಲ್ಲಿ ರಾಷ್ಟ್ರಕ್ಕೇ ಮಾದರಿಯ ಸ್ವರೂಪದ್ದೆಂದು ಈ ಮೊದಲು ಹೇಳಿದೆನಷ್ಟೆ ? ಜಾಗತಿಕ ಮಟ್ಟದಲ್ಲೂ ಅದು ಮುಂಚೂಣಿ ಸ್ಥಾನಕ್ಕೇರಿದ ಒಂದು ಉದಾಹರಣೆ ನಮ್ಮೆದುರು ಇದೆ. ರಿಯೊದಲ್ಲಿ ನಡೆದ ಪೃಥ್ವಿ ಶೃಂಗ ಸಭೆಯ ಗೊತ್ತುವಳಿಯ ಪ್ರಕಾರ, 'ಜಾಗತಿಕ ಪರಿಸರ ಸೌಲಭ್ಯ' ಹೆಸರಿನ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆ. ಅದರ ತಾಂತ್ರಿಕ ಘಟಕದ ಅಧ್ಯಕ್ಷರಾಗಿ ಡಾ. ಮಾಧವ ಗಾಡ್ಗೀಳ್ ನೇಮಕಗೊಂಡಿದ್ದಾರೆ. ಕರ್ನಾಟಕದಲ್ಲಿ ನೆಲೆಸಿ, ಇಲ್ಲಿನ ಭಾಷೆ ಕಲಿತು, ಇಲ್ಲಿನ (ವಿಶೇಷವಾಗಿ ಪಶ್ಚಿಮ ಘಟ್ಟಗಳ) ಚರಿತ್ರೆ, ಜನಜೀವನ, ಹಾಗೂ ಪರಿಸರದೊಂದಿಗಿನ ಸಂಬಂಧವನ್ನು ಕುರಿತಾಗಿ ಎರಡು ದಶಕಗಳ ಕಾಲ ವೈಜ್ಞಾನಿಕ ಅಧ್ಯಯನ ನಡೆಸಿದವರು ಅವರು. ನೇಪಥ್ಯದಲ್ಲಿದ್ದುಕೊಂಡೇ ಇಲ್ಲಿನ ಪರಿಸರ ಚಳುವಳಿಗಳನ್ನು ಸಮೀಪದಿಂದ ನೋಡುತ್ತ, ತಮ್ಮ ವಿಶ್ಲೇಷಣಾತ್ಮಕ ಬರಹಗಳ ಮೂಲಕ, ಅಕಾಡೆಮಿಕ್ ಉಪನ್ಯಾಸಗಳ ಮೂಲಕ ಹಾಗೂ ಜೈವಿಕ ವೈವಿಧ್ಯ ದಾಖಲಾತಿಯ ಸಕ್ರಿಯ ಮಾರ್ಗದರ್ಶನದ ಮೂಲಕ ಇಲ್ಲಿನ ಚಳುವಳಿಗಳಿಗೆ ಪರೋಕ್ಷ ಸ್ಫೂರ್ತಿ ಕೊಡುತ್ತ, ತಾನೂ ಬೆಳೆಯುತ್ತ ಈಗ ತೃತೀಯ ವಿಶ್ವದ ಪರಿಸರ ಸ್ಥಿತಿಗತಿಗಳ ವಕ್ತಾರರಾಗಿದ್ದಾರೆ. ಗಾಡ್ಗೀಳರ ಸಹವರ್ತಿಯಾಗಿ ಅವರ ಅನೇಕ ಲೇಖನ ಹಾಗೂ ಗ್ರಂಥಗಳ ಸಹಲೇಖಕರಾಗಿದ್ದವರು ರಾಮ್ ಗುಹಾ.

'ಆಧುನಿಕ ನಾಗರಿಕತೆ ನಮ್ಮನ್ನು ಗತಕಾಲದಿಂದ ಬೇರ್ಪಡಿಸಿದೆ ಹಾಗೂ ಭವಿಷ್ಯವೂ ಕೈಗೆಟುಕದಂತೆ ಮಾಡಿದೆ' ಎಂಬ ಗಿರಿ ದೇಶಿಂಗ್ಕರ್ ಅವರ ಮಾತನ್ನು ನಮಗೆ ಈ ಗ್ರಂಥದ ಮೂಲಕ ನೆನಪಿಸಿಕೊಟ್ಟು ಆ ಮಾತನ್ನು ಸುಳ್ಳಾಗಿಸುವ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗುವಂತೆ ಗುಹಾ ಪ್ರೇರೇಪಿಸುತ್ತಿದ್ದಾರೆ.

# ಪ್ರಕೃತಿ ನಿಷೇಧಿಸಿದ ಪಥಗಳು


## ಸುನಿಲ್ ಸಹಸ್ರಬುದ್ಧೆ

## ಸಂಗ್ರಹ-ಅನುವಾದ ಜಶವಂತ ಜಾಧವ


(ಆಧುನಿಕ ಪಾಶ್ಯಾತ್ಯ ನಾಗರಿಕತೆಗೆ ವಿರುದ್ಧವಾಗಿ ಪ್ರಸ್ತುತ ಭಾರತದಲ್ಲಿ ನಡೆಯುತ್ತಿರುವ ಪರ್ಯಾಯ ಮಾರ್ಗಗಳ ಶೋಧನೆ ಹಾಗೂ ಚಿಂತನೆಗಳ ಚಟುವಟಿಕೆಗಳಲ್ಲಿ ಡಾ॥ ಸುನಿಲ್ ಸಹಸ್ರಬುದ್ಧೆಯವರು ಮಹತ್ವದ ಪಾತ್ರ ವಹಿಸಿದ್ದಾರೆ. ಕಾನ್‌ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐ.ಐ.ಟಿ) ಯಿಂದ ಡಾಕ್ಟರೇಟ್ ಪದವಿ ಪಡೆದುಕೊಂಡು ನಂತರ ಅವರು ದೊಡ್ಡ ಹುದ್ದೆಗಳ ಆಕರ್ಷಣೆಯನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು ಆದಿವಾಸಿ - ಬುಡಕಟ್ಟು ಸಮುದಾಯಗಳು, ವಿದ್ಯಾರ್ಥಿ, ರೈತಾಪಿ, ಕಾರ್ಮಿಕರುಗಳ ಸಂಘಟನೆಗಳಲ್ಲಿ ತೊಡಗಿಕೊಂಡರು; ಜನಸಮುದಾಯಗಳ ಪಾರಂಪರಿಕ ಜ್ಞಾನಸಂಗ್ರಹವನ್ನು ಪರಿಶೋಧಿಸುವ ಹಾಗೂ ಬಲಗೊಳಿಸುವ ಉದ್ದೇಶದ 'ಪ್ರೋಗ್ರಾಮ್ ಫಾರ್ ಪೀಪಲ್ಸ್ ಸೈನ್ಸ್ ಅಂಡ್ ಟೆಕ್ನಾಲಜಿ' ಯನ್ನು ಸ್ಥಾಪಿಸಿದರು. ಮೊದಲು ಮಾರ್ಕ್ಸ್‌ವಾದಿಯಾಗಿದ್ದು ಆನಂತರ ಗಾಂಧಿಯ ಗಾಢ ಪ್ರಭಾವಕ್ಕೊಳಗಾದ ಸಹಸ್ರಬುದ್ಧೆ ಈಗ ತಮ್ಮನ್ನು ಗಾಂಧಿವಾದಿ-ಮಾರ್ಕ್ಸ್‌ವಾದಿಯೆಂದು ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ. 'ಕಿಸಾನ್ ಮಜದೂರ್ ನೀತಿ' ಎನ್ನುವ ಹಿಂದಿ ಪತ್ರಿಕೆಯನ್ನು ಸಂಪಾದಕರಾಗಿ ಹತ್ತು ವರ್ಷಗಳ ಕಾಲ ನಡೆಸಿದ ಅವರು ತತ್ವಶಾಸ್ತ್ರ, ವಿಜ್ಞಾನ, ರಾಜಕೀಯ, ರೈತಚಳವಳಿಗಳಂತಹ ವಿಭಿನ್ನ ವಿಷಯಗಳನ್ನೆಲ್ಲ ಹೆಣೆದು ನೋಡುವ ಐದು ಪೂರ್ಣಪ್ರಮಾಣದ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ.

ಪ್ರಸ್ತುತ ಲೇಖನ ಡಾ॥ ಸಹಸ್ರಬುದ್ಧೆಯವರು ೧೯೯೮ರ ಏಪ್ರಿಲ್‌ನಲ್ಲಿ ಮಣಿಪಾಲದ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ)ನ ಆಶ್ರಯದಲ್ಲಿ ಡಾ। ಟಿ.ಎಂ. ಪೈ ಜನ್ಮಶತಾಬ್ದಿ ಸಂದರ್ಭದಲ್ಲಿ ನೀಡಿದ ಎರಡು ಉಪನ್ಯಾಸಗಳಲ್ಲಿ ಮೊದಲನೆಯ ಉಪನ್ಯಾಸ 'ಫರ್ಬಿಡನ್ ಪಾಥ್ಸ್ ಆಫ್ ನೇಚರ್' ನ ಸಂಗ್ರಹವಾಗಿದೆ;

ಈ ಉಪನ್ಯಾಸವನ್ನು ಹೀಗೆ ಬಳಸಿಕೊಳ್ಳಲು ಅನುಮತಿ ಹಾಗೂ ಸಹಾಯವನ್ನು ನೀಡಿದ ಮಣಿಪಾಲ ಅಕಾಡೆಮಿಗೂ ಅದರ ಮಾನವಿಕ ಅಧ್ಯಯನ ಕೇಂದ್ರದ ಡಾ॥ ಮುರಾರಿ ಬಲ್ಲಾಳರಿಗೂ ನೀನಾಸಮ್ ಋಣಿಯಾಗಿದೆ.)

ಮಾನವ ಸಾಧನೆಯ ಉತ್ತುಂಗದ ಘಟ್ಟವೆಂದು ಕರೆಸಿಕೊಳ್ಳುವ ಈ ಶತಮಾನದ ಕಡೆಯ ದಶಕಗಳಲ್ಲಿ ಅತಿಜಟಿಲವಾದೊಂದು ಸಮಸ್ಯೆ ನಮ್ಮನ್ನು ಕಾಡತೊಡಗಿದೆ. ಇದು ನಮ್ಮ ಹಾಗೂ ನಮ್ಮ ಪರಿಸರದ ಅಳಿವು-ಉಳಿವಿಗೆ ಸಂಬಂಧಿಸಿರುವಂಥದು. ಏಕೆ, ಪಳೆಯುಳಿಕೆ ಆಧಾರದ ಇಂಧನ ಮೂಲಗಳು ನಾವು ಉಸಿರಾಡುವ ಗಾಳಿಯನ್ನೇಕೆ

ವಿಷ ವಾಗಿಸುತ್ತವೆ? ಬೃಹತ್ ಜಲಾಶಯ ಯೋಜನೆಗಳೇಕೆ ಸುತ್ತಮುತ್ತಲ ಸಹಜ ಸಮತೋಲನವನ್ನು ಅಸ್ತವ್ಯಸ್ತಗೊಳಿಸುತ್ತವೆ? ರಾಸಾಯನಿಕ ಕೃಷಿ ಪದ್ಧತಿಯು ಭೂಮಿ-ಬೆಳೆಗಳ ಸಾರವನ್ನೇಕೆ ಬತ್ತಿಸುತ್ತದೆ? ಪರಮಾಣು ಶಕ್ತಿಸ್ಥಾವರಗಳೇಕೆ ಇಡೀ ಭೂಮಂಡಲವನ್ನು ಮಸಣವಾಗಿ ಮಾರ್ಪಡಿಸುತ್ತವೆ? ಏಕೆ?

ಇಂಥೆಲ್ಲ ಪ್ರಶ್ನೆಗಳನ್ನು ಈ ಕೆಲವು ವರ್ಷಗಳಲ್ಲಿ ಕೇಳಿಯಾಗಿದೆ; ಅವುಗಳಿಗೆ ಉತ್ತರಗಳನ್ನು ಕಂಡುಕೊಂಡೂ ಆಗಿದೆ. ಈಗ ನಾವು ಕೇಳಬೇಕಾದ ಪ್ರಶ್ನೆ ಬೇರೆಯೆ ತೆರನದು; ಮೇಲ್ಕಂಡ ಎಲ್ಲ ಪ್ರಶ್ನೆಗಳನ್ನೂ ಒಳಗೊಂಡು, ಅವುಗಳನ್ನು ಮೀರಿ ನಿಲ್ಲುವಂಥದು: ' ಏಕೆ, ನಾವು ರೂಪಿಸಿಕೊಳ್ಳುವ ಪ್ರತಿಯೊಂದು ಹೊಸ ತಂತ್ರಜ್ಞಾನವೂ ನಮ್ಮನ್ನು ಹಾಗೂ ನಮ್ಮ ಪರಿಸರವನ್ನು ಹೊಚ್ಚ ಹೊಸ ರೀತಿಗಳಲ್ಲಿ ಹಾನಿಗೊಳಿಸುತ್ತದೆಯೇಕೆ? ಮೊದಮೊದಲು ಪ್ರಗತಿಕಾರಕವೆಂದು ತೋರುವ ಪ್ರತಿಯೊಂದು ಯೋಜನೆಯೂ ಅಂತಿಮವಾಗಿ ಪ್ರಕೃತಿಮಾರಕವಾಗಿ ಪರಿಣಮಿಸು ತ್ತಿರುವುದೇಕೆ? ಹೀಗೆ ಹೆಜ್ಜೆಹೆಜ್ಜೆಗೂ ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿರುವ ಆಧುನಿಕ ವಿಜ್ಞಾನ-ತಂತ್ರಜ್ಞಾನಗಳಲ್ಲಿಯೇ ಮೂಲಭೂತವಾದೊಂದು ಸಮಸ್ಯೆಯಿದೆಯೇ?'

ಈ ಪ್ರಶ್ನೆಗೆ ಉತ್ತರವನ್ನು ಹುಡುಕಿಕೊಳ್ಳುವಲ್ಲಿ ಆಧುನಿಕ ಮಾನವ ನಾಗರಿಕತೆಯ ಹತ್ತು ಹಲವು ಮಜಲುಗಳನ್ನು ಹಾದುಹೋಗಬೇಕಾದುದು ಅವಶ್ಯಕ; ಏಕೆಂದರೆ ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನಗಳು ಇಂದು ಈ ಎಲ್ಲ ಕ್ಷೇತ್ರಗಳನ್ನೂ ಆವರಿಸಿವೆ, ಅವುಗಳಲ್ಲಿಯ ವಿವಿಧ ಚಟುವಟಿಕೆಗಳನ್ನು ನಿಯಂತ್ರಿಸುತ್ತಿವೆ. ಈ ಬಿಡಿಬಿಡಿ ನೋಟಗಳ ಮುಖಾಂತರವಷ್ಟೆ ನಮಗೆ ಅಖಂಡವಾದ ಚಿತ್ರವೊಂದು ಲಭ್ಯವಾಗುವುದು. ಹಾಗಾಗಿ ನಾನಿಲ್ಲಿ ನನ್ನ ಉಪನ್ಯಾಸದಲ್ಲಿ ಜೀವನದ ಒಂದು ವಲಯದಿಂದ ಮತ್ತೊಂದಕ್ಕೆ ಮಗುದೊಂದಕ್ಕೆ ಜಿಗಿಯುತ್ತ ಜಾರುತ್ತ ಚಲಿಸುತ್ತಿರುತ್ತೇನೆ; ಈ ಚಲನೆ ಕೆಲವೊಮ್ಮೆ ಸ್ಪಷ್ಟರೇಖೆಯ ರೂಪದಲ್ಲಿರಬಹುದು, ಇನ್ನು ಕೆಲವೊಮ್ಮೆ ಅಸ್ಪಷ್ಟ ಸುತ್ತಾಟದಂತಿರಬಹುದು. ಇಂಥ ಚರ್ಚೆಯಲ್ಲಿ ಇದು ಅನಿವಾರ್ಯ.

ಮೊದಲನೆಯದಾಗಿ, ಆಧುನಿಕ ವಿಜ್ಞಾನದ 'ಶಕ್ತಿ' ಯ ಪರಿಕಲ್ಪನೆಯನ್ನು ಪರಿಶೀಲಿಸೋಣ . ಆಧುನಿಕ ವಿಜ್ಞಾನ 'ಶಕ್ತಿ' (ಎನರ್ಜಿ) ಹಾಗೂ 'ಸಾಮರ್ಥ್ಯ' (ಪವರ್) ಎನ್ನುವ ಎರಡು ಪರಸ್ಪರ ಸಂಬಂಧಿತವಾದ ಆದರೆ ವಿಶಿಷ್ಟವಾದ ಪರಿಕಲ್ಪನೆಗಳನ್ನು ಬಳಸುತ್ತದೆ. ಆದರೆ ವಿಜ್ಞಾನದ ಚೌಕಟ್ಟಿನ ಹೊರಗೆ ನಿಂತು ಯೋಚಿಸಿದಾಗ ಇಂಥ ಪರಿಕಲ್ಪನೆಗಳು ಎಷ್ಟು ಪೊಳ್ಳಾದುವೆಂಬುದು ಸ್ಪಷ್ಟವಾಗುತ್ತದೆ. ಈ ವಿಷಯದಲ್ಲಿ ಚಾರಿತ್ರಿಕ ಉದಾಹರಣೆಯೊಂದನ್ನು ಪರೀಕ್ಷಿಸೋಣ. ಇತ್ತೀಚಿನ ವರ್ಷಗಳಲ್ಲಿ 'ಶಕ್ತಿಯ ಕೊರತೆಯ ಸಮಸ್ಯೆ' (ಎನರ್ಜಿ ಕ್ರೈಸಿಸ್ ) ಎನ್ನುವ ಮಾತನ್ನು ಹೇಳುವುದು ಕೇಳುವುದು ಸರ್ವಸಾಮಾನ್ಯವಾಗಿ ಹೋಗಿದೆ. ವಾಸ್ತವದಲ್ಲಿ ಈ ಕಲ್ಪನೆ ಸೃಷ್ಟಿಯಾದದ್ದು ೧೯೭೩ರಲ್ಲಿ. ಆ ವರ್ಷ ಮಧ್ಯಪ್ರಾಚ್ಯದಲ್ಲಿ ನಡೆದ ಯುದ್ಧವೊಂದರಲ್ಲಿ ಅರಬ್ ದೇಶಗಳು ಇಸ್ರೇಲನ್ನು ಸೋಲಿಸಿದವು. ಇದರ ಒಂದು ಪರಿಣಾಮವಾಗಿ ಆ ಅರಬ್ ದೇಶಗಳಲ್ಲಿನ ಬೃಹತ್ ತೈಲಕ್ಷೇತ್ರಗಳು ಪ್ರಬಲ ಪಾಶ್ಚಾತ್ಯ ದೇಶಗಳ, ವಿಶೇಷವಾಗಿ ಅಮೇರಿಕನ್ ಸಂಸ್ಥೆಗಳ ಕೈತಪ್ಪಿ ಹೋದವು. ಇದಾದ ಕೆಲವು ದಿನಗಳಲ್ಲಿಯೇ ಪಾಶ್ಚಾತ್ಯ ವೈಜ್ಞಾನಿಕ ಹಾಗೂ ವಾಣಿಜ್ಯ ರಂಗಗಳಲ್ಲಿ 'ಶಕ್ತಿಯ ಕೊರತೆ' ಎಂಬ ಹೊಸ ಪದಪುಂಜ ಕೇಳಿಬರಲಾರಂಭಿಸಿತು. ವಿಚಿತ್ರವೆಂದರೆ, ಜಗತ್ತಿನಲ್ಲಿ ಎಂದೂ ಎಲ್ಲಿಯೂ ಶಕ್ತಿ(ಎನರ್ಜಿ) ಯ ಕೊರತೆ ಇರಲಾರದು ಎನ್ನುವ ಸರಳಾತಿಸರಳ ಸತ್ಯ ಆ ಘನ ವಿಜ್ಞಾನಿಗಳಿಗ್ಯಾರಿಗೂ ಹೊಳೆಯಲಿಲ್ಲ. ಪಾಶ್ಚಿಮಾತ್ಯರನ್ನು ಆಗಿನಿಂದ ಬಾಧಿಸತೊಡಗಿದುದು 'ಪ್ರಾಬಲ್ಯ ' (ಪವರ್) ದ ಕೊರತೆಯೇ ಹೊರತು 'ಶಕ್ತಿ' (ಎನರ್ಜಿ)ಯ ಕೊರತೆ ಖಂಡಿತ ಅಲ್ಲ.

ಈ ಅಂಶ ಆಧುನಿಕ ವಿಜ್ಞಾನದಲ್ಲಿರುವ ಮೂಲಭೂತ ಸಮಸ್ಯಾತ್ಮಕತೆಯ ಒಂದು ಆಯಾಮವನ್ನು ಸ್ಫುಟವಾಗಿ ಕಾಣಿಸುತ್ತದೆ. ಆಧುನಿಕಪೂರ್ವ ಮಾನವ ಸಮಾಜಗಳಲ್ಲಿಯೂ 'ಶಕ್ತಿ' ಯ ಬಳಕೆಯಿತ್ತು, ತಿಳುವಳಿಕೆಯಿತ್ತು; ಆದರೆ ಆ ಸಮುದಾಯಗಳು ಎಂದೂ ಕೂಡ 'ಶಕ್ತಿಕ್ಷಾಮ' ದಿಂದ ಬಳಲಿದಂತೆ ತೋರುವುದಿಲ್ಲ. ಈ ಸಮಸ್ಯೆ ಹುಟ್ಟಿಕೊಂಡದ್ದು ಆಧುನಿಕ ನಾಗರಿಕತೆ ಯಲ್ಲಿ ಮಾತ್ರ – ಅಥವಾ – ನಿಜ ಹೇಳಬೇಕೆಂದರೆ, ಈ ಸಮಸ್ಯೆಯನ್ನು ಹುಟ್ಟಿಸಿಕೊಂಡಿದ್ದು ಆಧುನಿಕ ನಾಗರಿಕತೆ ಮಾತ್ರ. ಇಂದಿಗೂ ಕೂಡ ಜಗತ್ತಿನ ಬೇರೆ ಬೇರೆಡೆಗಳಲ್ಲಿ, ವಿಶೇಷವಾಗಿ ಭಾರತದಂಥ ನಾಡುಗಳಲ್ಲಿ, ಒಟ್ಟೂ ಬಳಕೆಯಾಗುವ 'ಶಕ್ತಿ' ಯಲ್ಲಿ ಅರ್ಧದಷ್ಟು ಭಾಗವನ್ನು ಮಾತ್ರ ಆಧುನಿಕ ವಿಜ್ಞಾನ ಉತ್ಪಾದಿಸಿಕೊಡುತ್ತದೆ; ಇನ್ನರ್ಧ ಭಾಗ ಸೃಷ್ಟಿಯಾಗುವುದು ಸಾಂಪ್ರದಾಯಿಕ ಮೂಲಗಳಿಂದಲೆ. (ನನಗೆ ಗೊತ್ತು, ಕೋಟ್ಯಾನುಕೋಟಿ ಸ್ಥಳಗಳಲ್ಲಿ ಉತ್ಪಾದನೆಯಾಗುವ ಹಾಗೂ ಬಳಕೆಯಾಗುವ ಶಕ್ತಿಯ ಪ್ರಮಾಣವನ್ನು ಹೀಗೆ ಲೆಕ್ಕಮಾಡುವುದೇ ಕಡುಕಷ್ಟದ ಸಂಗತಿ; ಆದರೆ ಅನೇಕ ತಜ್ಞರು ಅಂದಾಜಿಸಿರುವ ಹಾಗೂ ಪರಸ್ಪರ ಒಪ್ಪಿರುವ ಅಂಕಿ ಅಂಶಗಳಿವು.) ಇಲ್ಲಿ ಸಾಂಪ್ರದಾಯಿಕ ಶಕ್ತಿಮೂಲಗಳೆಂದರೆ ಕಟ್ಟಿಗೆ, ಮನುಷ್ಯ ಹಾಗೂ ಪ್ರಾಣಿ-ಪ್ರಯತ್ನಗಳಂಥವು ಮತ್ತು ಪ್ರಾಣಿಗಳ ಜೈವಿಕ ತ್ಯಾಜ್ಯ ವಸ್ತುಗಳು. ಆಧುನಿಕ ಮೂಲಗಳೆಂದರೆ ಪ್ರಮುಖವಾಗಿ ಕಲ್ಲಿದ್ದಲು, ಡೀಸೆಲು-ಪೆಟ್ರೋಲು, ಜಲ-ಉಷ್ಣ-ಅಣು-ವಿದ್ಯುತ್ತಿನಂಥವು. ಕುತೂಹಲದ ಸಂಗತಿಯೆಂದರೆ, ಶಕ್ತಿಕ್ಷಾಮದ ಬಿಕ್ಕಟ್ಟನ್ನು ಎದುರಿಸುತ್ತಿರುವುದು ಆಧುನಿಕ ಶಕ್ತಿಮೂಲಗಳ ವಲಯವೆ ಹೊರತು ಸಾಂಪ್ರದಾಯಿಕ ಶಕ್ತಿಮೂಲಗಳ ವಲಯವಲ್ಲ.

ನಮ್ಮಲ್ಲಿ ಬಹುಪಾಲು ತಜ್ಞರು ಈ ವಿಚಿತ್ರ ವೈದೃಶ್ಯದ ಅಂಶವನ್ನು ಕೊಂಚವೂ ಚರ್ಚಿಸದೆ ಆ ಒಂದು ನಿರ್ದಿಷ್ಟ ಹಾಗೂ ಸೀಮಿತ ಕ್ಷೇತ್ರದ ಸಮಸ್ಯೆಯನ್ನು ಇಡಿ ಜಗತ್ತಿನ ಸಮಸ್ಯೆಯೆಂಬಂತೆ ಚಿತ್ರಿಸುತ್ತಿದ್ದಾರೆ.

ಸಾಂಪ್ರದಾಯಿಕ ಮತ್ತು ಆಧುನಿಕ ಶಕ್ತಿಮೂಲಗಳ ನಡುವೆ ಮೂಲಭೂತ ವಾದೊಂದು ವ್ಯತ್ಯಾಸವಿದೆ. ಈ ಭಿನ್ನತೆ ಕೇವಲ ಬಹಿರಂಗರೂಪಕ್ಕಲ್ಲದೆ ಆಯಾಯಾ ಮೂಲಗಳ ಅಂತಃಸತ್ವ ಹಾಗೂ ಅಂತಃಸತ್ಯಗಳಿಗೂ ಸಂಬಂಧಿಸಿದ್ದು. ಆಧುನಿಕ ವಿಜ್ಞಾನವು , ಉಚ್ಚ ಶಕ್ತಿ ಪ್ರಕ್ರಿಯೆಗಳನ್ನು ನೆಚ್ಚಿಕೊಳ್ಳುವಂಥದು; ಸಹಜ ಶಕ್ತಿಯನ್ನು ಅಸಹಜ ಪ್ರಾಬಲ್ಯವನ್ನಾಗಿ ಪರಿವರ್ತಿಸಿಕೊಂಡು ಪ್ರಾಬಲ್ಯ (ಪವರ್)ವನ್ನೆ ಶಕ್ತಿ(ಎನರ್ಜಿ)ಯೆಂದು ಭ್ರಮಿಸುವಂಥದು. ಅದು ತನ್ನ ಉದ್ದೇಶ ಸಾಧನೆಗೆಂದು ಅತಿ ಕಡಿಮೆ ಕಾಲಮಾನದಲ್ಲಿ ಅತಿ ಹೆಚ್ಚು ಪ್ರಮಾಣದ ಶಕ್ತಿಯನ್ನು ಬಳಸಿಕೊಳ್ಳುವುದರ ಮೂಲಕ ಪ್ರಾಬಲ್ಯವನ್ನು ಪಡೆದುಕೊಳ್ಳಲು ಹವಣಿಸುತ್ತದೆ. ಈ ಅಂಶವನ್ನು ಅದರದೆ ಪರಿಭಾಷೆಯಲ್ಲಿ ಹೇಳುವುದಾದರೆ, 'ಪ್ರಾಬಲ್ಯ (ಪವರ್) = ಶಕ್ತಿ (ಎನರ್ಜಿ)ಯ ಬಳಕೆಯ ಪ್ರಮಾಣ +ಕಾಲಮಾನ (ಟೈಮ್)' ಎಂಬ ಅದರ ಪ್ರಖ್ಯಾತ ಸಮೀಕರಣ ತೋರಿಸುವಂತೆ, 'ಕಾಲ' ದ ಅಪವರ್ತನ ಕನಿಷ್ಠವಿದ್ದಷ್ಟೂ ಹಾಗೂ 'ಶಕ್ತಿ'ಯ ಅಪವರ್ತನ ಗರಿಷ್ಠವಿದ್ದಷ್ಟೂ ಅದು ಅಧಿಕಾಧಿಕ ಪ್ರಾಬಲ್ಯವನ್ನು ಗಳಿಸಿಕೊಳ್ಳುತ್ತದೆ. ಹಾಗಾಗಿ ಆಧುನಿಕ ಜಲ-ಉಷ್ಣ-ಅಣು-ವಿದ್ಯುತ್ ಸ್ಥಾವರಗಳು 'ಎನರ್ಜಿ ಸ್ಟೇಷನ್' ಗಳೆಂದಲ್ಲದೆ 'ಪವರ್ ಸ್ಟೇಷನ್' ಗಳೆಂದು ಕರೆಸಿಕೊಳ್ಳುವುದು ಆಕಸ್ಮಿಕವೊ ಕಾಕತಾಳೀಯವೊ ಆದ ಸಂಗತಿಯೇನಲ್ಲ. ಈ 'ಪವರ ಸ್ಟೇಷನ್' ಗಳು ಉತ್ಪಾದಿಸುವುದು ' ಎನರ್ಜಿ' ಗಿಂತ ಹೆಚ್ಚಾಗಿ 'ಪವರ್' ನ್ನು. 'ಶಕ್ತಿ' ಯು ಜಗತ್ತಿನಾದ್ಯಂತ ಧಾರಾಳವಾಗಿ ದೊರಕುತ್ತದೆ; ಅದರ ನಿಧಿ ಎಂದೂ ಬತ್ತಿ ಹೋಗುವಂಥದಲ್ಲ. ಆದರೆ, ಆಧುನಿಕ ಜೀವನ ಶೈಲಿಯಾದರೊ ಶಕ್ತಿಗಿಂತ ಪ್ರಾಬಲ್ಯವನ್ನು ಹೆಚ್ಚಾಗಿ ಬೇಡುತ್ತದೆ. ಅತಿ ಕಡಿಮೆ ಕಾಲಾವಧಿಯಲ್ಲಿ ಅತಿ ಹೆಚ್ಚು ಶಕ್ತಿಯನ್ನು ವರ್ಗಾಯಿಸುವ/ರೂಪಾಂತರಿಸುವ ಪ್ರಾಬಲ್ಯಕೇಂದ್ರಿತ ತಂತ್ರಜ್ಞಾನವನ್ನು ಅದು ಬಯಸುತ್ತದೆ. ಹೀಗೆ ನೋಡಿದಾಗ ಜಗತ್ತಿನಲ್ಲಿ ಎಂದೂ ಎಲ್ಲಿಯೂ 'ಶಕ್ತಿಕ್ಷಾಮ' ವೆನ್ನುವುದು ಅಸಾಧ್ಯವಾದ ವಿದ್ಯಮಾನ; ಹಾಗೇನಾದರೂ ಸಮಸ್ಯೆಯಿದ್ದಲ್ಲಿ ಅದು 'ಪ್ರಾಬಲ್ಯ ಕ್ಷಾಮ' ವಷ್ಟೆ.

ಈ ತಾಂತ್ರಿಕ ಅಂಶವನ್ನು ಇನ್ನಷ್ಟು ಪರಿಶೀಲಿಸೋಣ. ಇಲ್ಲಿ ಇನ್ನೊಂದು ಚಾರಿತ್ರಿಕ ಘಟನೆಯನ್ನು ಪ್ರಸ್ತಾಪಿಸುವುದಾದರೆ – ೧೯೭೩ರಲ್ಲಿ ಅರಬ್ ದೇಶಗಳು ಇಸ್ರೇಲನ್ನು ಸೋಲಿಸುತ್ತಿದ್ದಂತೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ 'ಶಕ್ತಿ ಕ್ಷಾಮ' ದ ಹೊಸ



ಪರಿಕಲ್ಪನೆಯೊಂದು ಮೈದಾಳಿದುದನ್ನು ನಾವು ಈಗಾಗಲೆ ಕಂಡಿದ್ದೇವೆ. ಇದಾದ ಕೆಲವೆ ವರ್ಷಗಳಲ್ಲಿ, ೧೯೭೪-೭೫ರ ಅವಧಿಯಲ್ಲಿ ಆ ರಾಷ್ಟ್ರಗಳ ವಿಜ್ಞಾನಿಗಳು ಒಟ್ಟಿಗೆ ಸೇರಿ ಚರ್ಚಿಸಿ 'ಶಕ್ತಿ'ಯ ಹೊಸ ಪರಿಕಲ್ಪನೆಯೊಂದನ್ನು ಕಟ್ಟಲು ಪ್ರಯತ್ನಿಸಿದರು. ಆ ಚರ್ಚೆಯ ಫಲವಾಗಿ ಹೊರಬಂದ ಕೈಪಿಡಿಯೊಂದರಲ್ಲಿ ಅವರು ವ್ಯವಸ್ಥಿತ ಚಲನೆ (ಆರ್ಗನೈಸ್‌ಡ್ ಮೋಷನ್) ಯೆ ಶಕ್ತಿಯ ಅತ್ಯುತ್ತಮ ರೂಪವೆಂದು ಮತ್ತೊಮ್ಮೆ ಸಾಧಿಸಲು ಯತ್ನಿಸಿದರು. ಸ್ವಾರಸ್ಯವೆಂದರೆ, ಮಾನವೇತರ ಜಗತ್ತಿನಲ್ಲಿ, ಹಾಗೆಯೆ ಆಧುನಿಕ ಪೂರ್ವ ಮಾನವ ಜಗತ್ತಿನಲ್ಲಿ ಅನೇಕಾನೇಕ ಶಕ್ತಿರೂಪಗಳಿದ್ದವು/ಇವೆ; ಆದರೆ ಇವು ಯಾವುವೂ ಸಹ ಈ ವಿಜ್ಞಾನಿಗಳು ಸಮರ್ಥಿಸಲೆಳಸಿದ ರೀತಿಯ ವ್ಯವಸ್ಥಿತ ಚಲನೆಗಳಲ್ಲ. ಎರಡನೆಯದಾಗಿ, ಪ್ರಕೃತಿಯಲ್ಲಿ ಜರುಗುವ ಶಕ್ತಿಯ ವರ್ಗಾವಣೆಗಳಲ್ಲಿ ಬಹುಪಾಲು ಆಯಾಯಾ ಪರಿಸರಕ್ಕೆ ಸಹಜವೂ ಸಾಮಾನ್ಯವೂ ಆದ ಉಷ್ಣತೆಯಲ್ಲಿಯೆ ಜರುಗುತ್ತವೆ. ಆದರೆ ಮೇಲೆ ಪ್ರಸ್ತಾಪಿಸಿದ ವಿಜ್ಞಾನಿಗಳ ಕೈಪಿಡಿ ವ್ಯವಸ್ಥಿತ ಚಲನೆಯನ್ನು ಹೊರತುಪಡಿಸಿದರೆ ಅತ್ಯಧಿಕ ಹಾಗೂ ಅತ್ಯಲ್ಪ ಉಷ್ಣಾಂಶಗಳು 'ಶಕ್ತಿ' ಯ ಅತ್ಯುತ್ತಮ ಮೂಲಗಳಾಗಿವೆಯೆಂದು ವಾದಿಸಿತು. ಭೌತಶಾಸ್ತ್ರದ ಪ್ರಾಥಮಿಕ ಪಾಠವೊಂದನ್ನು ನೆನಪಿಸಿಕೊಡುವುದಾದರೆ – ಅತ್ಯಧಿಕ ಹಾಗೂ ಅತ್ಯಲ್ಪ ಉಷ್ಣಾಂಶಗಳು ಅತ್ಯಧಿಕ ಹಾಗೂ ಅತ್ಯಲ್ಪ ಒತ್ತಡಗಳಿಗೆ ಸಮಾನವಾದವು. ಈ ಅಂಶಗಳನ್ನು ನಿಯಂತ್ರಿಸುವ ಮೂಲಕವೆ ಆಧುನಿಕ ವಿಜ್ಞಾನ ಪ್ರಾಬಲ್ಯರೂಪಿ ಶಕ್ತಿಯನ್ನು ಉತ್ಪಾದಿಸಿಕೊಳ್ಳುವುದು; ಈ ಶಕ್ತಿಯಿಂದಲೆ ಅದು ಆಧುನಿಕ ಯಂತ್ರಗಳನ್ನು ನಡೆಸುವುದು. ಹೀಗೆ, ಅಧಿಕ ಹಾಗೂ ಅಲ್ಪ ಉಷ್ಣಾಂಶಗಳ ನಡುವೆ ತುಯ್ದಾಡುವ ಮುಖಾಂತರ ಯಂತ್ರಗಳು ವ್ಯವಸ್ಥೀಕೃತ ಚಲನಾವಿನ್ಯಾಸಗಳಲ್ಲಿ ತೊಡಗಿಕೊಂಡು ಪ್ರಾಬಲ್ಯವನ್ನು ಸೃಷ್ಟಿಸಿಕೊಡುತ್ತವೆ; ಅರ್ಥಾತ್ ಅತ್ಯಲ್ಪ ಕಾಲಾವಧಿಯಲ್ಲಿ ಅತ್ಯಧಿಕ ಶಕ್ತಿಯನ್ನು ಬಳಸುವ ಹಾಗೂ ಹೊರ ಹೊಮ್ಮಿಸುವಂತಹ ಪ್ರಾಬಲ್ಯವನ್ನು ಉತ್ಪಾದಿಸುತ್ತವೆ. ಇದು ಉಷ್ಣಾಧಾರಿತ ಚಲನೆ (ಥರ್ಮೊಡೈನಮಿಕ್ಸ್) ಯ ಮೂಲ ಸೂತ್ರಗಳಲ್ಲೊಂದು.

ಈ ರೀತಿಯ ಪ್ರಕ್ರಿಯೆಗಳಲ್ಲಿ ಜರುಗಿಸುವಲ್ಲಿ ಆಧುನಿಕ ವಿಜ್ಞಾನ ಅಧಿಕಾಧಿಕ ಸ್ತರಾಂತರ (ಗ್ರೇಡಿಯಂಟ್) ಗಳನ್ನು ಸೃಷ್ಟಿಸುತ್ತದೆ. ಸ್ತರಾಂತರವೆಂದರೆ ಯಾವುದೆ ಭೌತಿಕಾಂಶದ ಎರಡು ಬಿಂದುಗಳ ನಡುವಿನ ಮಟ್ಟದ ಅಂತರ. ಉದಾಹರಣೆಗೆ ೧° ಸೆಂಟಿಗ್ರೇಡ್ ಹಾಗೂ ೧೦೦° ಸೆಂಟಿಗ್ರೇಡ್ ಉಷ್ಣಾಂಶಗಳ ನಡುವಿನ ಸ್ತರಾಂತಲ ೧° ಹಾಗೂ ೧೦° ಸೆಂಟಿಗ್ರೇಡ್ ಉಷ್ಣಾಂಶಗಳ ನಡುವಿನ ಸ್ತರಾಂತರಕ್ಕಿಂತ ಅತ್ಯಧಿಕ ವಾದುದು; ಹಾಗೆಯೆ ಎರಡು ಭಿನ್ನ ಒತ್ತಡದ ಅಂಶಗಳ ನಡುವೆ, ಎರಡು ಭಿನ್ನ ಭೂಮಟ್ಟಗಳ ನಡುವೆ ಬೇರೆಬೇರೆ ಪ್ರಮಾಣಗಳ ಸ್ತರಾಂತರಗಳಿರಬಹುದು. ಆಧುನಿಕ

ವಿಜ್ಞಾನಕ್ಕೆ, ಈ ತೆರನಾದ ಅಧಿಕಾಧಿಕ ಸ್ತರಾಂತರಗಳನ್ನು ಸೃಷ್ಟಿಸುವುದೊಂದೆ ಶಕ್ತಿಯನ್ನು ಉತ್ಪಾದಿಸಿಕೊಳ್ಳುವ ಮಾರ್ಗವಾಗಿದೆ.

ಪ್ರಕೃತಿಯ ಮಾರ್ಗ ಇದಕ್ಕೆ ಸಂಪೂರ್ಣ ವ್ಯತಿರಿಕ್ತವಾದುದು. ಪ್ರಕೃತಿ ಸರ್ವಸಾಮಾನ್ಯವಾಗಿ ಯೋಜಿಸುವುದು ಅಲ್ಪ ಸ್ತರಾಂತರಗಳನ್ನು ಮಾತ್ರ. ಉದಾಹರಣೆಗೆ ನಮ್ಮ ಭೂಮಂಡಲದ ತಾಪಮಾನಕ್ಕೂ ಸುಮಾರು ೬೦೦೦$^{\circ}$ ಸೆಂಟಿಗ್ರೇಡಿನಷ್ಟಿರುವ ಸೂರ್ಯನ ತಾಪಮಾನಕ್ಕೂ ಅಗಾಧವಾದ ಸ್ತರಾಂತರವಿದೆ ನಿಜ. ಆದರೆ ನಮ್ಮಿಬ್ಬರ ನಡುವಿರುವ ಅಷ್ಟೆ ಅಗಾಧವಾದ ದೂರ ಉಷ್ಣಾಂಶದ ಸ್ತರಾಂತರದ ಅತಿಶಯತೆಯನ್ನು ಕ್ರಮಕ್ರಮೇಣವಾಗಿ ಕುಗ್ಗಿಸುತ್ತಬರುತ್ತದೆ. ಸೂರ್ಯನ ಆ ಅತಿಪ್ರಖರ ಶಾಖ ಹಾಗೂ ಪ್ರಭೆ ಕೊನೆಗೆ ಭೂಮಿಯನ್ನು ತಲುಪುವ ಹೊತ್ತಿಗೆ ನಮಗೆ ಸಹ್ಯವಾದ ಪ್ರಮಾಣ ಕ್ಕಿಳಿದಿರುತ್ತವೆ. ಹೀಗೆ ಪ್ರಕೃತಿಯಲ್ಲಿ ನಮ್ಮ ದೃಷ್ಟಿಕೋನದಿಂದ ಅತ್ಯುಗ್ರವೆನ್ನಬಹುದಾದ ಉಷ್ಣಾಂಶ ಹಾಗೂ ಶೀತಾಂಶಗಳು ಇರುವುದಾದರೂ ಅವು ಸುದೀರ್ಘ ದೂರಮಾನ ಗಳಲ್ಲಿಯಷ್ಟೆ ಅಂಥ ಅತಿಶಯ ಅಂತರದ ಸ್ತರಗಳನ್ನು ಮುಟ್ಟುತ್ತವೆ. ಕನಿಷ್ಠ ದೂರ/ಕಾಲಮಾನಗಳಲ್ಲಿ ಗರಿಷ್ಠವಾದ ತಾಪಮಾನದ ಏರಿಕೆ/ ಇಳಿಕೆಯಂತಹ ವಿದ್ಯಮಾನಗಳು ಪ್ರಕೃತಿಯಲ್ಲಿ ಕಂಡುಬರುವುದು ಅತ್ಯಂತ ವಿರಳ. ಅಂಥ ವಿರಳ ವಿದ್ಯಮಾನಗಳೂ ಕೂಡ ಬಹಳಷ್ಟು ಬಾರಿ ಪ್ರಕೃತಿ ಒಂದಲ್ಲ ಒಂದು ರೀತಿಯಲ್ಲಿ ತನ್ನ ಸಮತೋಲವನ್ನು ರಕ್ಷಿಸಿಕೊಳ್ಳಲು ಹೂಡುವ ಅನಿವಾರ್ಯ ಉಪಾಯಗಳೆ ಆಗಿರುತ್ತವೆ. ಜ್ವಾಲಾಮುಖಿ ಸ್ಫೋಟಗಳು, ಚಂಡಮಾರುತಗಳು ಇಂತಹ ನಿದರ್ಶನಗಳು. ಆಧುನಿಕ ವಿಜ್ಞಾನ ಮಾತ್ರ ಇಂಥ ಅಧಿಕ ಸ್ತರಾಂತರವನ್ನು ಆಧರಿಸಿದ ಪ್ರಕ್ರಿಯೆಗಳನ್ನು ನಿತ್ಯ ಸಂಯೋಜಿಸುತ್ತದೆ. ಇದಕ್ಕೊಂದು ಸರಳ ಉದಾಹರಣೆಯಾಗಿ ಜಲವಿದ್ಯುತ್ ಯಂತ್ರ ವ್ಯವಸ್ಥೆಯನ್ನು ಪರಿಶೀಲಿಸಬಹುದು. ಅಲ್ಲಿ ವರ್ತುಲ ಚಲನೆಯ ಯಂತ್ರಭಾಗ (ರೋಟಾರ್) ವೊಂದನ್ನು ಅಗಾಧವಾದ ವೇಗಗಳಲ್ಲಿ ಸುತ್ತಿಸಿ ವಿದ್ಯುತ್ತನ್ನು ಉತ್ಪಾದಿಸಲಾಗುತ್ತದೆ. ಆ ಯಂತ್ರಭಾಗ ಹೀಗೆ ಚಲಿಸುವಂತೆ ಮಾಡಲು ಕೃತಕವಾಗಿ ಜಲಧಾರೆಯೊಂದನ್ನು ಅತಿ ಎತ್ತರದಿಂದ ಕೆಳಮುಖವಾಗಿ ಹರಿಸುತ್ತಾರೆ. ಈ ವ್ಯವಸ್ಥೆ ಒಂದು ರೀತಿಯಲ್ಲಿ ವ್ಯವಸ್ಥೀಕೃತ ಚಲನೆಯ ತತ್ವ ಹಾಗೂ ಅಧಿಕ ಸ್ತರಾಂತರಗಳ ತತ್ವಗಳ ಸಂಮಿಶ್ರ ರೂಪವಾಗಿದೆ. ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಯಂತ್ರಗಳೆಲ್ಲವೂ ಇವೆ ತತ್ವಗಳನ್ನು ಆಧರಿಸಿದಂಥವು; ಹಾಗೆಯೆ, ಈ ತೆರನ ಯಂತ್ರರೂಪವೆ ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಸ್ವರೂಪವನ್ನು ನಿರ್ಧರಿಸುವಂಥದು. ಪ್ರಕೃತಿ ತತ್ವಗಳಿಗೆ ವಿರುದ್ಧವಾದ ಈ ಕೃತಕ ತತ್ವಗಳು ಅಂತಿಮವಾಗಿ ಪರಿಸರಕ್ಕೆ ಧಕ್ಕೆಯುಂಟು ಮಾಡುವುದು ಅಸಹಜವೂ ಆಕಸ್ಮಿಕವೂ ಆದ



ಸಂಗತಿಯೇನಲ್ಲ. ಪ್ರಕೃತಿ ಇಂಥ ಪಥಗಳನ್ನು ಪ್ರಕ್ರಿಯೆಗಳನ್ನು ಸಹಿಸುವುದಿಲ್ಲ.

ಆಧುನಿಕ ವಿಜ್ಞಾನದ ವಿರುದ್ಧದ ಇಂಥ ಟೀಕೆಯ ಬಗ್ಗೆ ಕೆಲವು ವಿಜ್ಞಾನನಿಷ್ಠರು ಆಕ್ಷೇಪಿಸುವುದುಂಟು. ಅವರು ಪ್ರತಿವಾದಿಸುವುದು ಹೀಗೇ:

ಮಾನವನಿರ್ಮಿತ ಅಧಿಕ ಸ್ತರಾಂತರ ಪ್ರಕ್ರಿಯೆಗಳ ಬಗ್ಗೆ ಈ ರೀತಿಯ ಟೀಕೆ ತಪ್ಪು. ಸತ್ಯವೆಂದರೆ ಇಡಿ ವಿಶ್ವ ಇಂಥ ಪ್ರಕ್ರಿಯೆಗಳನ್ನು ಅವುಗಳಿಂದ ಸೂಸುವ ಶಕ್ತಿಯನ್ನು ಆಶ್ರಯಿಸಿಕೊಂಡಿದೆ. ಉದಾಹರಣೆಗೆ ಸೂರ್ಯನಲ್ಲಿ ಅಂಥ ಪ್ರಕ್ರಿಯೆಗಳಿಲ್ಲದಿದ್ದಲ್ಲಿ ಅವುಗಳುತ್ಪಾದಿಸುವ ತಾಪ ಬೆಳಕುಗಳಿಲ್ಲದಿದ್ದಲ್ಲಿ ಭೂಮಿ ಬೆಳಗುತ್ತಿರಲಿಲ್ಲ, ನಾವಾಗಲಿ ಈ ಅಗಣಿತ ಜೀವರಾಶಿಯಾಗಲಿ ಬಾಳುತ್ತಿರಲಿಲ್ಲ. ಉಚ್ಚ ಶಕ್ತಿ ಪ್ರಕ್ರಿಯೆಗಳು ಜಗತ್ತಿನ ಮೂಲೆಮೂಲೆಗಳಲ್ಲಿಯೂ ಸದಾಕಾಲವೂ ನಡೆಯುತ್ತಲೆ ಇರುತ್ತವೆ. ಅವುಗಳಿಗೆ ಹೋಲಿಸಿದಲ್ಲಿ ನಾವು ಸೃಷ್ಟಿಸುವ ಪ್ರಕ್ರಿಯೆಗಳು ಅತ್ಯಂತ ನಗಣ್ಯ; ಅವುಗಳ ಒಟ್ಟೂ ಪ್ರಭಾವ ಹಾಗೂ ಪರಿಣಾಮ ಅತಿ ಕ್ಷುಲ್ಲಕ. ಹಾಗೆ ನೋಡಿದರೆ, ನಮ್ಮ ಪ್ರಕ್ರಿಯೆಗಳ ಕಾರಣಕ್ಕಿಂತ ಜಗವನ್ನೆಲ್ಲ ವ್ಯಾಪಿಸಿರುವ ಅಗಾಧ ಸಂಖ್ಯೆಯ ಅಂಥ ಪ್ರಕ್ರಿಯೆಗಳಲ್ಲಾಗಬಹುದಾದ/ಆಗುವ ಅಲ್ಪಸ್ವಲ್ಪ ಬದಲಾವಣೆಗಳಿಂದಲೆ ನಮ್ಮ ಭೂಮಿ ನಾಶವಾಗುವ ಸಂಭವ ಗಣನೀಯವಾಗಿ ಹೆಚ್ಚು. ಹೀಗೆ, ನಮ್ಮ ಸದ್ಯದ ಭ್ರಮೆಗಳೇನೆ ಇರಲಿ, ನಾವಿನ್ನೂ ಪ್ರಕೃತಿಯ ಕೃಪೆಯಲ್ಲಿಯೆ ಬದುಕುತ್ತಿದ್ದೇವೆ. ಮತ್ತೆ, ಆಧುನಿಕ ವಿಜ್ಞಾನದ ಮೂಲಕ ನಾವು ಪ್ರಾಕೃತಿಕ ಪ್ರಕ್ರಿಯೆಗಳ ಸಾರರೂಪವನ್ನು ಅರಿತುಕೊಳ್ಳುವ ಹಾಗೂ ಅವುಗಳನ್ನು ನಮ್ಮ ಸ್ತರದಲ್ಲಿ ಪುನರಾವರ್ತಿಸುವ/ಪುನರ್‌ಸೃಷ್ಟಿಸುವ ಪ್ರಯತ್ನದಲ್ಲಿ ತೊಡಗಿಕೊಂಡಿದ್ದೇವೆ ಅಷ್ಟೆ.

ಇಂಥ ಪ್ರಶ್ನೆಗಳಿಗೆ ನಾನು ಕೊಡಬಹುದಾದ ಉತ್ತರವಿಷ್ಟೆ:

ವಿಶ್ವದಲ್ಲಿ ಅಸಂಖ್ಯಾತವಾದ ಅಧಿಕ ಸ್ತರಾಂತರಗಳ ಪ್ರಕ್ರಿಯೆಗಳು ನಿತ್ಯ ಜರುಗುತ್ತಿರುವುದು ಯಾರೂ ಅಲ್ಲಗಳೆಯಲಾಗದ ಸತ್ಯ. ಆದರೆ ನಾವು ಈ ಮೊದಲೆ ನೋಡಿದಂತೆ ಇಂಥ ಪ್ರಕ್ರಿಯೆಗಳ ಆತ್ಯಂತಿಕ ಬಿಂದುಗಳೆರಡೂ ಪರಸ್ಪರವಾಗಿ ಅತಿ ದೂರದಲ್ಲಿರುವುದರಿಂದ ಆ ಪ್ರಕ್ರಿಯೆಗಳ ಏರಿಕೆ-ಇಳಿಕೆಯ ಅನುಪಾತ ಅಂತಿಮವಾಗಿ ತೀರಾ ಕಡಿಮೆ ಪ್ರಮಾಣದ್ದಾಗಿರುತ್ತದೆ. ಹಾಗಾಗಿಯೆ, ತೀರಾ ಹತ್ತಿರದಲ್ಲಿದ್ದರೆ ಸಹಿಸಲು ಸಾಧ್ಯವೆ ಇಲ್ಲದಂಥ ಶಾಖದ ಸೂರ್ಯ ವಾಸ್ತವದಲ್ಲಿ ನಮ್ಮಿಂದ ಅಷ್ಟು ಅತಿಶಯ ದೂರದಲ್ಲಿರುವುದರಿಂದ ನಾವು ಆತನನ್ನು ಅವಲಂಬಿಸಿಯೂ ಆತನಿಂದ ಅಪಾಯ ಕ್ಕೊಳಗಾಗದಿರುವುದು.

ಇನ್ನು, ಅಂಥ ಪ್ರಕೃತಿ ಸಹಜ ಪ್ರಕ್ರಿಯೆಗಳ ಹೋಲಿಕೆಯಲ್ಲಿ ನಾವು ಕೃತಕವಾಗಿ ಸೃಷ್ಟಿಸುವ ಪ್ರಕ್ರಿಯೆಗಳು ಅತ್ಯಂತ ಕುಬ್ಜಗಾತ್ರದವೂ ಅಣುಪ್ರಮಾಣದವೂ

ಆದುವೆಂಬುದೂ ನಿಜ ಸರಿ. ಆದರೆ ನಮ್ಮ ಅಧಿಕ ಸ್ತರಾಂತರ ಪ್ರಕ್ರಿಯೆಗಳು ಘಟಿಸುವುದು ಅತ್ಯಲ್ಪ ಪ್ರಮಾಣದ ದೂರಗಳಲ್ಲಿ. ಹಾಗಾಗಿ, ಪ್ರಕೃತಿಯ ತತ್ವಗಳ ದೃಷ್ಟಿಕೋನದಿಂದ ನೋಡಿದಾಗ, ನಮ್ಮ ಪ್ರಕ್ರಿಯೆಗಳು ಹಾನಿಯುಂಟುಮಾಡುವುದೆ ಹೆಚ್ಚು.

ಹಾಗೆ ನಮ್ಮನ್ನು ತೀವ್ರತರ ಅಪಾಯಕ್ಕೊಡ್ಡಬಲ್ಲ ವಿದ್ಯಮಾನಗಳು ವಿಶ್ವದ ವ್ಯವಸ್ಥೆಯಲ್ಲಿ ನಡೆಯುವುದು ತೀರಾ ಅಪರೂಪವಾಗಿ, ಆಕಸ್ಮಿಕವಾಗಿ. ಸದ್ಯ ನಮಗೆ ತಿಳಿದಿರುವ ಮಾನವಕುಲದ ಹಾಗೂ ಮಾನವನಿಗಿಂತ ಎಷ್ಟೊ ಮೊದಲಿನಿಂದ ಇಲ್ಲಿ ಬದುಕುತ್ತ ಬಂದಿರುವ ಜೀವಸಂಕುಲದ ಒಟ್ಟೂ ಇತಿಹಾಸವನ್ನು ಗಮನಿಸಿದಾಗ,ಅಂಥ ಆತ್ಯಂತಿಕವಾಗಿ ಮಾರಕವಾದ ವಿದ್ಯಮಾನಗಳು ಪ್ರಕೃತಿಯ ವತಿಯಿಂದ ನಡೆದದ್ದು ಇಲ್ಲವೆ ಇಲ್ಲ ಎನ್ನುವಷ್ಟು ವಿರಳವಾಗಿವೆ. ಯಾವುದೊ ಒಂದು ಯುಗದಲ್ಲಿ ಭೂಮಿಯ ಯಾವುದೊ ಒಂದು ಸಣ್ಣ ಭಾಗದಲ್ಲಿ ಕೆಲವು ನಿರ್ದಿಷ್ಟ ಜೀವರಾಶಿಗಳನ್ನು ನಷ್ಟಗೊಳಿಸುವಂತಹ ಉಲ್ಕಾಪಾತವಾಯಿತು, ಉಷ್ಣಾಂಶದ ಏರುಪೇರಾಯಿತು, ಭೂಕಂಪವಾಯಿತು ಎನ್ನುವುದನ್ನು ಬಿಟ್ಟರೆ ಇಡಿ ಭೂಮಂಡಲವನ್ನೆ ಸಾವಿನ ಭಯಕ್ಕೀಡುಮಾಡುವಂತಹ ವಿದ್ಯಮಾನಗಳು ನಡೆಯುತ್ತಿರುವುದು ನಮ್ಮ ಈ ಕಳೆದ ಎರಡು ಶತಮಾನಗಳಲ್ಲಿಯೆ, ನಮ್ಮ ಕೃತ್ಯಗಳ ಫಲವಾಗಿಯೆ ಎನ್ನುವುದು ದಿಟ.

ಮತ್ತೆ, ಪ್ರಾಕೃತಿಕ ಆಕಸ್ಮಿಕಗಳ ಬಗ್ಗೆ ಚರ್ಚಿಸುವುದು ಅಷ್ಟೇನೂ ಅರ್ಥಪೂರ್ಣವಲ್ಲದ ಕ್ರಿಯೆಯೆಂದೆ ನನ್ನ ತಿಳುವಳಿಕೆ. ಅಂಥ ಆಕಸ್ಮಿಕಗಳು ಎಷ್ಟೆಂದರೂ ಆಕಸ್ಮಿಕಗಳು. ಅವು ಇಂದೆ ಈ ಕ್ಷಣವೆ ಘಟಿಸಬಹುದು, ಇಲ್ಲ, ಇನ್ನೊಂದು ಕೋಟಿ ಶತಕೋಟಿ ವರ್ಷಗಳ ನಂತರ ಜರುಗಬಹುದು. ನಮ್ಮ ನವ ನಾಗರಿಕತೆಯ ಹಾನಿಕಾರಕ ಪರಿಣಾಮಗಳು ಮಾತ್ರ ನಿತ್ಯ ಬೆಳೆಯುತ್ತಿರುವಂಥವು, ಇಂದಲ್ಲ ನಾಳೆ, ನಾಳೆಯಲ್ಲ ನಾಡಿದ್ದು, ಇನ್ನು ಕೆಲವೆ ವರ್ಷಗಳಲ್ಲಿ ನಮ್ಮನ್ನು ಪ್ರಳಯದ ಅಂಚಿಗೆ ಒಯ್ಯುವಂಥವು.

ಇದೆ ಅಂಶವನ್ನು ಒಂದು ಉದಾಹರಣೆಯ ಮುಖಾಂತರ ಇನ್ನಷ್ಟು ವಿಶದೀಕರಿಸಿ ಅದನ್ನು ಚರ್ಚೆಯ ಮುಂದಿನ ಅಂಶಕ್ಕೆ ಸಾಗುವ ಸೇತುವೆಯನ್ನಾಗಿಯೂ ಬಳಸಬಹುದು:

ಉಚ್ಚಶಕ್ತಿ ಪ್ರಕ್ರಿಯೆಗಳು ಸಂಪೂರ್ಣವಾಗಿ ಆಧುನಿಕ ವಿಜ್ಞಾನದ ಬಳುವಳಿ ಎಂಬುದೊಂದು ಭ್ರಮೆ ನಮ್ಮಲ್ಲಿ ಅನೇಕರಿಗಿದೆ. ವಾಸ್ತವವೆಂದರೆ, ನಮ್ಮ ಪೂರ್ವಿಕರಿಗೂ ಇಂಥ ಪ್ರಕ್ರಿಯೆಗಳ ಪರಿಚಯವಿತ್ತು. ಇದಕ್ಕೆ ನಾನು ಸದ್ಯಕ್ಕೆ ಒಂದೆ ಒಂದು ಪ್ರತ್ಯಕ್ಷ ಉದಾಹರಣೆಯನ್ನು ನೀಡಿ ಮುಂದುವರಿಯುತ್ತೇನೆ: ಭಾರತದಲ್ಲಿ 'ಕಬ್ಬಿಣದ ಉತ್ಪಾದನೆ' ಎಂದಾಕ್ಷಣ ನಮ್ಮ ಮನದಲ್ಲಿ ಸುಳಿಯುವುದು ಬೊಕಾರೊ,



ಭಿಲ್ವಾ, ಭದ್ರಾವತಿಯಂತಹ ಕೇಂದ್ರಗಳ ಹೆಸರುಗಳು. ಅದೆ, ಮಧ್ಯಪ್ರದೇಶದ ಹಳ್ಳಿಮೂಲೆಯೊಂದರಲ್ಲಿ ಶತಶತಮಾನಗಳಿಂದ, ಅಂದರೆ ಆಧುನಿಕ ಪೂರ್ವದ ಎಷ್ಟೋ ಹಳೆಯ ಕಾಲಘಟ್ಟದಿಂದ, ಅಲ್ಲಿಯ ಕೆಲ ಕಸುಬುದಾರರು ಅತ್ಯುಚ್ಚ ಗುಣಮಟ್ಟದ ಕಬ್ಬಿಣವನ್ನು ತಯಾರಿಸುವ ಅಪರೂಪದ ಪಾರಂಪರಿಕ ವಿಧಾನವನ್ನೊಂದನ್ನು ಅನುಸರಿಸಿಕೊಂಡು ಸುಧಾರಿಸಿಕೊಂಡು ಬರುತ್ತಿದ್ದಾರೆನ್ನುವ ಸಂಗತಿ ಬಹಳಷ್ಟು ಮಂದಿಗೆ ಗೊತ್ತೆ ಇಲ್ಲ. ತುಸು ಗಮನಿಸಿ ನೋಡಿ – ಕಬ್ಬಿಣದ ಖನಿಜ ಕಬ್ಬಿಣವಾಗಿ ಪರಿವರ್ತಿತಗೊಳ್ಳುವುದು ೧೫೨೫ ಡಿಗ್ರಿ ಸೆಂಟಿಗ್ರೇಡಿನಷ್ಟು ಅತ್ಯಧಿಕ ತಾಪಮಾನದ ಆವರಣದಲ್ಲಿ. ಇಂಥ ಶಾಖವನ್ನು ಬೊಕಾರೊ ಭದ್ರಾವತಿಗಳಲ್ಲಿ ರಕ್ಕಸಗಾತ್ರದ ಅಗ್ನಿಕುಂಡಗಳ ಮೂಲಕ ಸೃಷ್ಟಿಸಿದರೆ, ಮಧ್ಯಪ್ರದೇಶದ ಆ ಗ್ರಾಮಗಳಲ್ಲಿ ಅದನ್ನು ಪುಟ್ಟ ಪುಟ್ಟ ಅಗ್ಗಿಷ್ಟಿಕೆಗಳಲ್ಲಿ ಉತ್ಪಾದಿಸುತ್ತಾರೆ. ಈ ಮೂಲಕ, ಅಂಥ ಉಚ್ಚ ಶಕ್ತಿ ಪ್ರಕ್ರಿಯೆಯ ಅನಿವಾರ್ಯ ಪರಿಸರನಾಶಕ ಪರಿಣಾಮಗಳ ಪ್ರಮಾಣ ಅತ್ಯಲ್ಪವಾಗಿದ್ದು, ಹಾಗೆ ಆಗುವ ಹಾನಿಯನ್ನು ಪರಿಸರ ಬಹುಬೇಗನೆ ಸರಿಪಡಿಸಿಕೊಳ್ಳಲು ಅವಕಾಶವಿರುತ್ತದೆ. ಅರ್ಥಾತ್, ಈ ಪಾರಂಪರಿಕ ತಂತ್ರಜ್ಞಾನ ಪರಿಸರದ ಸಹನಾಮಿತಿಯನ್ನೂ ಸ್ವಯಂ ಚಿಕಿತ್ಸೆಯ ಶಕ್ತಿಯನ್ನೂ ಗೌರವಿಸುತ್ತಲೆ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತದೆ. ಇಂಥ ತಂತ್ರಜ್ಞಾನದ ಒಂದು ಮುಖ್ಯ ಗುಣವೆಂದರೆ ಅದರಿಂದ ಉಂಟಾಗುವ ಪಾರಿಸರಿಕ ದುಷ್ಪರಿಣಾಮಗಳು ಅನಿವಾರ್ಯವೂ ಅತ್ಯಲ್ಪವೂ ಆದುವೇ ಹೊರತು ಅಪರಿಹಾರ್ಯವೂ ಅತ್ಯಗಾಧವೂ ಆದುವಲ್ಲ. ಪ್ರಕೃತಿಬಾಧಕವಲ್ಲದ ಪ್ರಕ್ರಿಯೆಗಳು ಕೆಲವು ಸನ್ನಿವೇಶಗಳಲ್ಲಿ ಸಾಧ್ಯವೇ ಇಲ್ಲವೆನ್ನುವಂತಹ ಪ್ರಸಂಗಗಳಲ್ಲಿ ಅಂಥ ಅನಿವಾರ್ಯ ಪ್ರಕ್ರಿಯೆಗಳನ್ನು ಆದಷ್ಟೂ ಅಲ್ಪಪ್ರಮಾಣವೂ ಅಪರೂಪವೂ ಆಗಿರುವಂತೆ ಎಚ್ಚರ ವಹಿಸಬೇಕೆಂಬುದೆ ಇಂಥ ಪಾರಂಪರಿಕ ತಂತ್ರಜ್ಞಾನಗಳ ಮೂಲ ನಂಬುಗೆಯಾಗಿರುವಂತಿದೆ. ಇದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ ಬೊಕಾರೊ- ಭಿಲ್ಯಾಗಳ ಆಧುನಿಕ ಕಾರ್ಖಾನೆಗಳು ಬೃಹತ್ ಅಗ್ನಿಕುಂಡಗಳನ್ನು ಬಳಸಿ ಸುತ್ತಮುತ್ತಲ ಪರಿಸರ ಇನ್ನೆಂದೂ ತಾನೆತಾನಾಗಿ ಚೇತರಿಸಿಕೊಳ್ಳಲಾಗದಂಥ ಕೃತಕ ವಾತಾವರಣವನ್ನು ನಿರ್ಮಿಸುತ್ತದೆ; ಇಂಥ ಪಾರಿಸರಿಕ ಹಾನಿ ಅಂತಿಮವಾಗಿ ಸಾಮಾಜಿಕ ಹಾನಿಯೂ ಆಗುವಂಥ ಏಕಮುಖಿ ಚಲನೆಗೆ ನಮ್ಮನ್ನು ತಳ್ಳುತ್ತವೆ.

••• ••• •••

ಇಲ್ಲಿಂದ ಚರ್ಚೆಯ ಎರಡನೆ ಮುಖ್ಯ ಅಂಶಕ್ಕೆ ಬರುವುದಾದರೆ —

ಗಾಂಧಿ ಯಂತ್ರಗಳನ್ನು ಸಂಶಯದಿಂದ ಕಂಡಿದ್ದು ಇದೇ ಕಾರಣಕ್ಕಾಗಿ. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, ಅವರು ಸಂದೇಹಿಸಿದ್ದು ಆಧುನಿಕ ಯಂತ್ರ-ತಂತ್ರಜ್ಞಾನಗಳನ್ನೆ ಹೊರತು ಎಲ್ಲಾ ಯಂತ್ರಗಳನ್ನಲ್ಲ. ಮತ್ತೆ, ಇಂಥ ವಿರೋಧದಲ್ಲಿ ಗಾಂಧಿ ಏಕಾಂಗಿಯಾಗಿರಲಿಲ್ಲ; ಅವರಂತೆಯೆ ಆಧುನಿಕ ಯಂತ್ರ ನಾಗರಿಕತೆಯನ್ನು ವಿರೋಧಿಸುವವರು ಪಾಶ್ಚಿಮಾತ್ಯರೂ ಸೇರಿದಂತೆ ಹಲವರಿದ್ದರು/ಇದ್ದಾರೆ. ಗಾಂಧಿ ಮತ್ತು ಅವರ ಮೊದಲ ಸಹವಾದಿಗಳ ಜೀವನಕಾಲ ಹಾಗೂ ಅದಕ್ಕಿಂತ ತುಸು ಮುಂಚಿನ ಕಾಲಾವಧಿಯಲ್ಲಿಯೆ ಮಾನವ 'ಶಕ್ತಿ' ಗಿಂತ 'ಪ್ರಾಬಲ್ಯ' ವನ್ನು ಹೆಚ್ಚು ಆರಾಧಿಸಲು ಹಾಗೂ ಶಕ್ತಿಗಿಂತ ಪ್ರಾಬಲ್ಯಚಾಲಿತ ಯಂತ್ರಗಳನ್ನು ಆಧರಿಸಲು ಪ್ರಾರಂಭಿಸಿದುದು. ನಾವಿಂದು 'ಯಂತ್ರಯುಗ'ವೆಂದು ಕರೆಯುವ ಕಾಲಘಟ್ಟ ಆರಂಭವಾದುದೆ ಉಗಿಯಂತ್ರದ ಆವಿಷ್ಕಾರದೊಂದಿಗೆ.

ಉಗಿಯಂತ್ರವು ಅಗಾಧ ಪ್ರಮಾಣದ ಕಲ್ಲಿದ್ದಲನ್ನು ಸುಡುವುದರ ಮುಖಾಂತರ ಚಲಿಸುವ ಮೊತ್ತಮೊದಲ ಮುಖ್ಯ ಯಂತ್ರರೂಪವಾಗಿತ್ತು. ಅದರಲ್ಲಿ, ಹಾಗೆ ಉರಿಯುವ ಕಲ್ಲಿದ್ದಲ ಮೂಲಕ ಉಗಿಯ ಅಪಾರ ರಾಶಿಯೊಂದನ್ನು ಉತ್ಪಾದಿಸಿ, ಆ ಉಗಿಯನ್ನು ಕಿರಿಮೂತಿ ಕೊಳವೆಯೊಂದರಲ್ಲಿ ಹಾಯಿಸಿ, ಅದರ ಒತ್ತಡದಿಂದ ಪರಿಭ್ರಾಮಕ ಯಂತ್ರಭಾಗ (ರೋಟಾರ್) ವೊಂದನ್ನು ಚಲಾಯಿಸಿ ಅದರ ಶಕ್ತಿಯ ಮೂಲಕ ಇನ್ನೊಂದು ದೊಡ್ಡ ಯಂತ್ರವನ್ನು ನಡೆಸಲಾಗುತ್ತದೆ. ಕಾಲಕ್ರಮೇಣ ಇದೆ ಯಂತ್ರರೂಪವನ್ನು ತುಸು ಮಾರ್ಪಡಿಸಿ, ಪರಿಭ್ರಾಮಕ ಭಾಗಕ್ಕೊಂದು ಅಯಸ್ಕಾಂತ ವನ್ನೂ ತಾಮ್ರದ ತಂತಿಯ ಸುರುಳಿಯೊಂದನ್ನು ಜೋಡಿಸಿ, ಈ ಇಡಿ ಸಂಯೋಜನೆಯ ಚಲನೆಯ ಮೂಲಕ ವಿದ್ಯುತ್ತನ್ನು ಉತ್ಪಾದಿಸುವ ವಿಧಾನವನ್ನು ಕಂಡುಕೊಳ್ಳಲಾಯಿತು. ಹೀಗೆ ಉಗಿಯಂತ್ರ ಒಂದು ರೀತಿಯಲ್ಲಿ ಎಲ್ಲ ಆಧುನಿಕ 'ಪ್ರಾಬಲ್ಯ' - ಉತ್ಪಾದಕ ಯಂತ್ರವ್ಯವಸ್ಥೆಗಳ ಮೂಲಮಾದರಿಯಾದುದು.

ಇಂಥ ವಿಧಾನಗಳಿಂದ ಉತ್ಪಾದಿಸಿದ 'ಶಕ್ತಿ'ಯನ್ನು ದೂರದೂರದ ಪ್ರದೇಶಗಳಿಗೆ ಸಾಗಿಸಿ ನಾವು ಕೊನೆಗೆ ಮಾಡುವುದಾದರೂ ಏನನ್ನು? ಅಲ್ಲಿ ಆ ವಿದ್ಯುಚ್ಛಕ್ತಿಯಿಂದ ಮತ್ತೊಂದು ಪರಿಭ್ರಾಮಕ ಭಾಗವನ್ನು ತಿರುಗಿಸಿ ಆ ಮೂಲಕ ಮತ್ತೊಂದು ಯಂತ್ರ ಚಲಿಸುವಂತೆ ಮಾಡುತ್ತೇವೆ. ರೈಲ್ವೆ ಯಂತ್ರದಿಂದ ಹಿಡಿದು ಬಟ್ಟೆ ಗಿರಣಿ ಯಂತ್ರದಂತಹ ಎಲ್ಲ ಆಧುನಿಕ ಯಂತ್ರಗಳೂ ಇದೆ ತತ್ವವನ್ನು ಅನುಸರಿಸುತ್ತವೆ; ಬೇರೆ ಬೇರೆ ದೂರಗಳುದ್ದ ಜರುಗುವ 'ಶಕ್ತಿ' - ವರ್ಗಾವಣೆಯನ್ನು ಆಧರಿಸುತ್ತವೆ.

ಇಂಥ 'ಶಕ್ತಿ'ಯ ಉತ್ಪಾದನೆ-ವರ್ಗಾವಣೆ-ಬಳಕೆಯ ವಿಧಾನ ನಾವು ಈಗಾಗಲೆ



ಕಂಡಂತೆ ಅಧಿಕ ಸ್ತರಾಂತರದ ಉಚ್ಚ ಶಕ್ತಿಯ ಪ್ರಕ್ರಿಯೆಗಳನ್ನು ನೆಚ್ಚಿಕೊಳ್ಳುವಂಥದು. ಆ ಕಾರಣಕ್ಕಾಗಿಯೆ ಅದು ಪ್ರಕೃತಿಯ ಸಹಜ ವಿಧಾನಗಳಿಗೆ ವಿರುದ್ಧವಾದುದು. ಆಧುನಿಕ ಯಂತ್ರಗಳ ಬಗ್ಗೆ ಗಾಂಧಿಯಂಥವರಿಗಿದ್ದ ಗಾಢ ಸಂಶಯಗಳನ್ನು ನಾವು ಈ ಹಿನ್ನೆಲೆಯಲ್ಲಿಯೆ ಅರ್ಥೈಸಿಕೊಳ್ಳಬೇಕು. ಗಾಂಧಿಯ ಈ ನಿಲುವು ಕೇವಲ ಭಾವನಾತ್ಮಕ ಸ್ವರೂಪದ್ದಾಗಿರದೆ ಅತ್ಯಂತ ಮಹತ್ವದ ರಾಜಕೀಯ-ಸಾಮಾಜಿಕ-ಆರ್ಥಿಕ ಆಯಾಮಗಳನ್ನೊಳಗೊಂಡುದಾಗಿತ್ತು. ಹಾಗೆ ನೋಡಿದರೆ ಆಧುನಿಕ ವಿಜ್ಞಾನದ ಮೋಹಕ ರೂಪದ ಮಾರಕ ಮುಖವನ್ನು ಅಷ್ಟು ಸಂಪೂರ್ಣವಾಗಿ ಗ್ರಹಿಸಿದ ಮೊದಲ ವ್ಯಕ್ತಿ ಗಾಂಧಿಯೆ ಹೌದು. ದುರದೃಷ್ಟವಶಾತ್ ಅಂಥ ಅಖಂಡ ಪ್ರಜ್ಞೆಯ ಪ್ರವಾಹವನ್ನು ಮುಂದುವರಿಸಿಕೊಂಡು ಹೋಗುವವರು ನಮ್ಮಲ್ಲಿ ಆ ನಂತರ ಯಾರೂ ಬರಲಿಲ್ಲ. ಹಾಗೆಂದ ಮಾತ್ರಕ್ಕೆ ಆ ಪ್ರಜ್ಞೆ ಪೂರ್ಣ ನಾಶವಾಗಿಹೋಗಿದೆಯೆಂದೇನಲ್ಲ. ಅದು ಇಂದು ಖಂಡಖಂಡವಾಗಿ ಬಿಡಿಬಿಡಿ ಚಳವಳಿಗಳಲ್ಲಿ ಬಿಡಿಬಿಡಿ ವ್ಯಕ್ತಿಗಳಲ್ಲಿ ಹಂಚಿ ಹೋಗಿದೆಯಷ್ಟೆ. ಅಂಥ ಎಲ್ಲ ಸೆಲೆಗಳನ್ನೂ ಮತ್ತೊಮ್ಮೆ ಒಟ್ಟುಗೂಡಿಸಿ ಅವುಗಳನ್ನು ಒಂದು ಏಕಾಗ್ರಧಾರೆಯನ್ನಾಗಿ ಪರಿವರ್ತಿಸಬೇಕಾದುದು ಇಂದಿನ ಅವಶ್ಯಕತೆಯಾಗಿದೆ.

••• ••• •••

ಮೂರನೆಯದಾಗಿ —

ಇನ್ನು ಕೆಲವರು ಆಕ್ಷೇಪಿಸುವುದುಂಟು: 'ಇಂಥ ಟೀಕೆ ಬೃಹತ್ ಯಂತ್ರ ವ್ಯವಸ್ಥೆಗಳ ಮಟ್ಟಿಗೇನೊ ಸಾಧುವಾದುದು ಸರಿ. ಆದರೆ ಆಧುನಿಕ ವಿಜ್ಞಾನ ಕೊಂಚವೂ ಪರಿಸರಮಾರಕವಲ್ಲದ ಇನ್ನಿತರ ತಂತ್ರಜ್ಞಾನರೂಪಗಳನ್ನು ಸೃಷ್ಟಿಸಿದೆಯಲ್ಲ. ಉದಾಹರಣೆಗೆ, ಅತ್ಯಲ್ಪ ಪ್ರಮಾಣದ ವಿದ್ಯುತ್ತಿನ ಮೇಲೆ ನಡೆಯುವ ದೂರಸಂಪರ್ಕ ಸಾಧನಗಳು ಹಾಗೂ ವಿದ್ಯುನ್ಮಾನ (ಇಲೆಕ್ಟ್ರಾನಿಕ್) ಸಲಕರಣೆಗಳ ಬಗ್ಗೆ ಇಂಥ ಕಟುಮಾತುಗಳನ್ನು ಆಡಲು ಸಾಧ್ಯವೆ?' ಎಂದು.

ಮೇಲೆ ಹೆಸರಿಸಿದ ಸಲಕರಣೆಗಳು ಹಾಗೂ ವ್ಯವಸ್ಥೆಗಳು ಅತಿಕಡಿಮೆ ವಿದ್ಯುತ್ತನ್ನು ಅವಲಂಬಿಸಿರುವುದು ಸರಿ. ಆದರೆ ಅದು ಅರ್ಧ ಸತ್ಯ ಮಾತ್ರ. ಒಂದು ಪ್ರತ್ಯಕ್ಷ ನಿದರ್ಶನವನ್ನೆ ಪರಶೀಲಿಸೋಣ. ಒಂದು ದೂರವಾಣಿ ಉಪಕರಣ ಸ್ವತಃ ತಾನು ಕಾರ್ಯ ನಿರ್ವಹಿಸಲು ಕೆಲವೆ ಮಿಲಿ-ಆ್ಯಂಪಿಯರ್‌ನಷ್ಟು ನಗಣ್ಯವೆಂದು ಕಾಣುವ ವಿದ್ಯುತ್ತನ್ನು ಬಳಸಿಕೊಳ್ಳುತ್ತದೆಯೇನೊ ಹೌದು; ಆದರೆ ಅಂಥ ಉಪಕರಣಗಳ ತಯಾರಿಕೆಯ ಕಥೆಯೆ ಬೇರೆ. ಅವುಗಳನ್ನು ತಯಾರಿಸುವುದು ಸಿಲಿಕಾನ್ ತುಣುಕುಗಳಿಂದ; ಆ ಸಿಲಿಕಾನನ್ನು ತಯಾರಿಸುವಲ್ಲಿ ಮತ್ತೆ ೧೦ -'ಮಿಲಿಮೀಟರ್

ಮರ್ಕ್ಯುರಿಯಷ್ಟು ಅಸಹಜ ಅತಿಕನಿಷ್ಠ ಒತ್ತಡದ ಆವರಣವೊಂದನ್ನು ಸೃಷ್ಟಿಸಿಕೊಳ್ಳಬೇಕು. ಅಂದರೆ ನಾವು ಈ ಮೊದಲೆ ಚರ್ಚಿಸಿದ ಅಧಿಕ ಸ್ತರಾಂತರ ಹಾಗೂ ಉಚ್ಚ ಶಕ್ತಿ ಪ್ರಕ್ರಿಯೆಗಳ ಮೊರೆಹೋಗದೆ ಸರಳ ಪ್ರಾಥಮಿಕ ದೂರವಾಣಿ ಸಾಧನಗಳ ತಯಾರಿಕೆಯೆ ಸಾಧ್ಯವಿಲ್ಲ.

ದೂರಸಂಪರ್ಕ ಜಾಲಕ್ಕೆ ಸಂಬಂಧಿಸಿದ ಇನ್ನೊಂದು ಅಂಶವನ್ನೂ ಇಲ್ಲಿ ಗಮನಿಸಬಹುದು. ಚೆನ್ನೈನ ಐ.ಐ.ಟಿ. ಯಲ್ಲಿರುವ ನನ್ನ ಮಿತ್ರ ಪ್ರೊಫೆಸರ್ ಜುಂಜನ್‌ವಾಲಾ ಸದ್ಯ ನಮ್ಮಲ್ಲಿರುವ ಬಹುಮೇಧಾವಿ ದೂರಸಂಪರ್ಕ ತಜ್ಞರಲ್ಲೊಬ್ಬರು. ಅವರೊಮ್ಮೆ ಹೇಳಿದರು: ಪ್ರಸಕ್ತ ಭಾರತದಲ್ಲಿ ಬಳಕೆಯಾಗುತ್ತಿರುವ ಪ್ರತಿಯೊಂದು ದೂರವಾಣಿ ಸಂಪರ್ಕಸಾಧನದ ಮೇಲೂ ಸರ್ಕಾರ ಸುಮಾರು ೩೫ರಿಂದ ೪೦ಸಾವಿರ ರೂಪಾಯಿಗಳಷ್ಟನ್ನು ಸಹಾಯಧನವಾಗಿ ನೀಡುತ್ತಿದೆ. ಬಳಕೆದಾರರಾಗಿ ನಾವು ನೀಡುವ ಮೊತ್ತ ಸಂಪರ್ಕವೊಂದಕ್ಕೆ ೩- ೪ ಸಾವಿರ ರೂಪಾಯಿಗಳಷ್ಟಾದರೆ ಸರ್ಕಾರ ಅದರ ಹತ್ತು ಪಟ್ಟು ಮೊತ್ತವನ್ನು ಪ್ರತಿ ಸಂಪರ್ಕದ ಹಿಂದೆ ಹೂಡಬೇಕಾಗುತ್ತದೆ. ಹಾಗಾದರೆ ಇಷ್ಟು ಅಧಿಕ ನಷ್ಟದ ಸಬ್ಸಿಡಿಯ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವಷ್ಟು ಮೂರ್ಖವೆ ನಮ್ಮ ಆಡಳಿತ ವ್ಯವಸ್ಥೆ? — ಎನ್ನುವ ಪ್ರಶ್ನೆಯೇಳುವುದು ತೀರ ಸಹಜ. ಆದರೆ, ವಾಸ್ತವದಲ್ಲಿ, ಮೇಲ್ನೋಟಕ್ಕೆ ನಷ್ಟಕಾರಕವೆಂದು ತೋರುವ ಇಂಥ ಯೋಜನೆಗಳಿಂದ ಸರ್ಕಾರ ಕೆಲವು ಅದೃಶ್ಯ ಲಾಭಗಳನ್ನು ಪಡೆದುಕೊಳ್ಳುತ್ತಿರುತ್ತದೆ. ವ್ಯಾಪಾರವನ್ನು, ಕೆಲವು ನಿರ್ದಿಷ್ಟ ರೀತಿಯ ಜೀವನಶೈಲಿಗಳನ್ನು ಪರೋಕ್ಷವಾಗಿಯಾದರೂ ಪ್ರವರ್ತಿಸುವುದರ ಮೂಲಕ ಸರ್ಕಾರಿಯಂತ್ರ ನಷ್ಟವೆಂದು ಕಾಣುವ ಮೊತ್ತದ ಎಷ್ಟೋ ಪಟ್ಟು ಹೆಚ್ಚು ಲಾಭವನ್ನು ಈ ಮಾರ್ಗದಿಂದ ಗಳಿಸಿಕೊಳ್ಳುತ್ತಿರುತ್ತದೆ.

ಆದರೆ, ಈ ಲಾಭ ಸರ್ಕಾರದ ಮೂಲಕವಾಗಲಿ ಸಂಸ್ಥೆಗಳ ಮೂಲಕವಾಗಲಿ ಒಟ್ಟೂ ಸಮಾಜಕ್ಕೆ ಸಮಾನವಾಗಿ ಹಂಚಿಕೆಯಾಗುವುದಿಲ್ಲವೆಂಬುದು ಈ ಕಥೆಯ ಇನ್ನೊಂದು ಸ್ವಾರಸ್ಯದ ಅಂಶ. ಇದನ್ನು ನಮ್ಮ ಕಾಲದ ಬಹುಮುಖ್ಯ ಐತಿಹಾಸಿಕ ಬದಲಾವಣೆಯೊಂದನ್ನು ಪರಿಶೀಲಿಸುವುದರ ಮುಖಾಂತರ ಅರ್ಥೈಸಿಕೊಳ್ಳಬಹುದು. ದೂರಸಂಪರ್ಕ ಸೌಲಭ್ಯವನ್ನು ಬಿಡಿಯಾಗಿ ಪರಿಗಣಿಸದೆ ಅದನ್ನು ನಿರ್ದಿಷ್ಟವಾದೊಂದು ಚಾರಿತ್ರಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನಲೆಯಲ್ಲಿಟ್ಟುನೋಡುವ ಕ್ರಮವಿದು:

ವರ್ತಮಾನದ ಜಗತ್ತಿನ ಉದ್ಯಮ ವ್ಯವಸ್ಥೆಯಲ್ಲಿ ಬಹುದೊಡ್ಡ ಬದಲಾವಣೆಯೊಂದು ಈಗ ಘಟಿಸುತ್ತಿದೆ. ಇದನ್ನು 'ಜಾಗತೀಕರಣ' ವೆಂದು ಕರೆಯುವುದುಂಟು. ಈ ಪರಿಕಲ್ಪನೆ/ಪದ ತೀರಾ ಇತ್ತೀಚೆಗೆ ರೂಢಿಗೆ ಬಂದಿದ್ದರೂ ಕೂಡ ವಾಸ್ತವದಲ್ಲಿ ಆ



ಪ್ರಕ್ರಿಯೆ ಮಾತ್ರ ಅದಕ್ಕೂ ಮುಂಚಿತ ಹಲವಾರು ವರ್ಷಗಳಿಂದಲೆ ಬೆಳೆಯುತ್ತ ಬರುತ್ತಿತ್ತು. 'ಜಾಗತೀಕರಣ'ವು ಕೇವಲ ಕೆಲವು ದೇಶಗಳ ನಡುವಿನ, ಕೇವಲ ಕೆಲವು ವರ್ಷಗಳ ವಿದ್ಯಮಾನವಲ್ಲ. ಬದಲಾಗಿ, ಅದು ಜಾಗತಿಕ ಸ್ತರದಲ್ಲಿ ಹೊಸದೊಂದು ಯುಗವನ್ನೆ ಉದ್ಘಾಟಿಸುವಂಥದು. ಇದನ್ನು ತುಸು ಸರಳವಾಗಿ ವಿವರಿಸುವುದಾದರೆ—

ಇತ್ತೀಚಿನವರೆಗೆ ಬೃಹದುತ್ಪಾದನೆಯ ಕ್ರಮಗಳೆ ಉದ್ಯಮ ವ್ಯವಸ್ಥೆಯ ಮೂಲಾಧಾರವಾಗಿದ್ದವು; ಈ ಮೊದಲು ನಾವು ಚರ್ಚಿಸಿದ ಉಚ್ಚ ಶಕ್ತಿ ಪ್ರಕ್ರಿಯೆಗಳನ್ನೆ ಅವು ಆಧರಿಸಿದ್ದವು. ಈ ಮೊದಲಿನ ಸಾಂಪ್ರದಾಯಿಕ ಕಾರ್ಖಾನೆಗಳು ಮೂರು-ಐದು-ಹತ್ತು ಸಾವಿರದಷ್ಟು ಕಾರ್ಮಿಕರನ್ನು ಒಳಗೊಂಡಿದ್ದು ಅಷ್ಟೆ ಬೃಹತ್ ಪ್ರಮಾಣದ ಉತ್ಪಾದನೆಯಲ್ಲಿ ತೊಡಗಿಕೊಂಡಿದ್ದವು. ಉದ್ಯಮ ವ್ಯವಸ್ಥೆಯ ಈ ಮಾದರಿ ಇಂದು ಬಹುಬೇಗನೆ ಬದಲಾಗುತ್ತಲಿದೆ. ಈಗ ಸಣ್ಣ ಸಣ್ಣ ಘಟಕಗಳನ್ನೊಳಗೊಂಡ ಮಾದರಿಯನ್ನೆ ವ್ಯವಸ್ಥೆ ಹೆಚ್ಚು ಅಪೇಕ್ಷಿಸುತ್ತಿದೆ; ಅಂಥವನ್ನೆ ಹೆಚ್ಚು ಹೆಚ್ಚು ಸೃಷ್ಟಿಸುತ್ತಿದೆ. ಇದಕ್ಕೆ ಉದಾಹರಣೆಯೊಂದನ್ನು ನೀಡುವುದಾದರೆ —

೧೯೮೦ರಲ್ಲಿ ಮುಂಬಯಿಯಲ್ಲಿ ಜವಳಿ ಕಾರ್ಮಿಕರ ಬಹುದೊಡ್ಡ ಮುಷ್ಕರವೊಂದು ನಡೆಯಿತು; ಜವಳಿ ಗಿರಣಿಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡವು. ಆ ಮೊದಲೂ ಕೂಡ ಮುಂಬಯಿಯ ನೂರು ವರ್ಷಕ್ಕೂ ಹೆಚ್ಚಿನ ಬಟ್ಟೆ ಗಿರಣಿಗಳ ಇತಿಹಾಸದಲ್ಲಿ ಅಷ್ಟೆ ದೊಡ್ಡ ಮುಷ್ಕರಗಳು ಅನೇಕ ಬಾರಿ ನಡೆದಿದ್ದವು; ಪ್ರತಿ ಬಾರಿಯೂ ಕಾರ್ಮಿಕರು ಹಾಗೂ ಮಾಲಿಕರ ನಡುವೆ ಮಾತುಕತೆಯಾಗಿ ಪರಸ್ಪರ ಕೊಡುಕೊಳುವಿಕೆಯ ಸಂಧಾನಗಳಾಗಿ ಗಿರಣಿಗಳು ಮತ್ತೆ ಕೆಲಸಕ್ಕೆ ಮರಳಿದ್ದವು. ೧೯೮೦ರಲ್ಲಿ ಮಾತ್ರ ಅಂಥದೇನೂ ಜರುಗಲಿಲ್ಲ. ಈ ಬಾರಿ ಮಾಲಿಕರು ಕೊಂಚವೂ ಬಗ್ಗಲಿಲ್ಲ, ಮಾತ್ರವಲ್ಲ, ಹೆಚ್ಚೇನನ್ನೂ ಕಳೆದುಕೊಳ್ಳಲಿಲ್ಲ. ಕಾರ್ಮಿಕರು ಮಾತ್ರ ಬಹಳಷ್ಟನ್ನು ಕಳೆದುಕೊಂಡರು.

ಮಾಲಿಕರ ಈ ಹೊಚ್ಚಹೊಸ ರೀತಿಯ ವರ್ತನೆಗೆ ಬಲವಾದ ಕಾರಣವೊಂದಿತ್ತು. ೧೯೭೦ರ ದಶಕದ ಉತ್ತರಾರ್ಧದ ಭಾರತದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಅಗಾಧವಾದ ಬೆಳವಣಿಗೆಯಾಗಿ ಅಸಂಖ್ಯಾತ ಹಳ್ಳಿಗಳು ವಿದ್ಯುತ್ ಜಾಲಕ್ಕೆ ಸೇರ್ಪಡೆಯಾದವು. (ಇದಾದ ಕೆಲವೆ ವರ್ಷಗಳಲ್ಲಿ, ೧೯೮೦ರ ದಶಕದ ಮಧ್ಯಭಾಗದಲ್ಲಿ, ಭಾರತ ಸರ್ಕಾರ ಫ್ರಾನ್ಸ್ ಹಾಗೂ ಹಾಲೆಂಡ್ ದೇಶಗಳ ಸಹಯೋಗದೊಂದಿಗೆ ಸಿಂಗ್ರೋಲಿಯಲ್ಲಿ ರಾಕ್ಷಸಶಕ್ತಿಯ ಅತ್ಯುಷ್ಣ ವಿದ್ಯುತ್ (ಸೂಪರ್ ಥರ್ಮಲ್) ಉತ್ಪಾದನಾ ಸ್ಥಾವರಗಳನ್ನು ಸ್ಥಾಪಿಸುವುದರ ಮೂಲಕ ಈ ಜಾಲ ಇನ್ನಷ್ಟು ವಿಸ್ತಾರಗೊಂಡಿತು.) ಈ ಬೆಳವಣಿಗೆಯ ಮುಖಾಂತರ ಈಗ ಕುಗ್ರಾಮಗಳ

ಮನೆಮನೆಯಲ್ಲಿಯೂ ಒಂದರಿಂದ ಹತ್ತುಹನ್ನೆರಡರಷ್ಟು ಸಣ್ಣ ಸಂಖ್ಯೆಯ ಹಾಗೂ ಸಣ್ಣ ಪ್ರಮಾಣದ ವಿದ್ಯುತ್-ಚಾಲಿತ ಮಗ್ಗಗಳನ್ನು ನಡೆಸುವುದು ಸಾಧ್ಯವಾಯಿತು. ಇದು ಒಂದು ರೀತಿಯಲ್ಲಿ ವಿಕೇಂದ್ರೀಕರಣವೆಂದು ಕಂಡರೂ ಕೂಡ ವಾಸ್ತವದಲ್ಲಿ ಅದು ತಾಂತ್ರಿಕ ವಿಕೇಂದ್ರೀಕರಣವಾಗಿತ್ತೆ ಹೊರತು ಆರ್ಥಿಕ-ರಾಜಕೀಯ ವಿಕೇಂದ್ರೀ ಕರಣವೇನಾಗಿರಲಿಲ್ಲ. ತದ್ವಿರುದ್ಧವಾಗಿ, ಅದು ಕಾರ್ಮಿಕರು ಬಹುಸಂಖ್ಯೆ ಯಲ್ಲಿ ಸಂಘಟಿತರಾಗಿ ಹೋರಾಡುವ ಅವಕಾಶವನ್ನೆ ಮಾಯಮಾಡಿತು. ಈಗ ಬೃಹತ್ ಪ್ರಮಾಣದ ಉತ್ಪಾದನೆಯ ವ್ಯವಸ್ಥೆಯು ಸಣ್ಣಪ್ರಮಾಣದ ಉತ್ಪಾದನೆಗೆ ಎಡೆ ಮಾಡಿಕೊಟ್ಟು ಆರ್ಥಿಕ ಕ್ಷೇತ್ರದಲ್ಲಿ ಹೊಸದೊಂದು ಮಾದರಿಗೆ ನಾಂದಿ ಹಾಡಿತು. ಹಾಗಾಗಿಯೆ ೧೯೮೦ರ ಮುಷ್ಕರದಲ್ಲಿ ಸಿಲುಕಿಕೊಂಡಿದ್ದ ಬಟ್ಟೆ ಗಿರಣಿಗಳ ಮಾಲಿಕರು ತಮ್ಮ ಕಾರ್ಖಾನೆಗಳು ಸ್ಥಗಿತಗೊಂಡದ್ದರ ಬಗ್ಗೆ ತುಸುವೂ ತಲೆಕೆಡಿಸಿಕೊಳ್ಳಲಿಲ್ಲ. ಬದಲಾಗಿ ಅವರು ತಮ್ಮ ಕಾರ್ಯಕ್ಷೇತ್ರವನ್ನು ನಗರಗಳಿಂದ ಹಳ್ಳಿಗಳಿಗೆ ವರ್ಗಾಯಿಸಿಕೊಂಡರು, ವಿಸ್ತರಿಸಿಕೊಂಡರು.

ಈ ಬದಲಾವಣೆಯ ಹಿಂದೆ ವಿದ್ಯುತ್ ಜಾಲದ ವಿಸ್ತರಣೆಯಷ್ಟೆ ಮುಖ್ಯವಾದ ಮತ್ತೊಂದು ಐತಿಹಾಸಿಕ ಕಾರಣವೂ ಇದೆ. ಕೈಗಾರಿಕಾ ಕ್ರಾಂತಿಯಿಂದ ೧೯೨೦-೩೦ರ ವರೆಗೆ ಪಶ್ಚಿಮದಲ್ಲಿ ಯಂತ್ರರೂಪಿ ಬಂಡವಾಳ (ಇಂಡಸ್ಟ್ರಿಯಲ್ ಕ್ಯಾಪಿಟಲ್)ವೆ ಹಣ ಹೂಡಿಕೆಯ ಅತಿ ಮುಖ್ಯ ರೂಪವಾಗಿದ್ದಿತು. ಅಂದರೆ ಉದ್ಯಮಿಗಳು ತಮ್ಮ ಬಂಡವಾಳವನ್ನು ತೊಡಗಿಸುತ್ತಿದ್ದುದು ಪ್ರಧಾನವಾಗಿ ಯಂತ್ರಗಳ ಮೇಲೆಯೆ ಆಗಿತ್ತು. ೧೯೨೦-೩೦ರ ಘಟ್ಟದಿಂದ ಈ ಹೂಡಿಕೆ ಪ್ರಮುಖವಾಗಿ ಹಣದ ರೂಪ (ಫೈನಾನ್ಸ್ ಕ್ಯಾಪಿಟಲ್) ವನ್ನೆ ಪಡೆಯತೊಡಗಿತು; ಅರ್ಥಾತ್, ಈಗ ಉದ್ಯಮಿಗಳು ಯಂತ್ರೋಪಕರಣಗಳಿಗಿಂತ ಶುದ್ಧ ಹಣದ ರೂಪದಲ್ಲೆ ತಮ್ಮ ಬಂಡವಾಳವನ್ನು ಹೂಡತೊಡಗಿದ್ದರು. ಪಶ್ಚಿಮದಲ್ಲಿ ನಡೆದ ಎರಡು ಮಹಾಯುದ್ಧಗಳ ಮುಖ್ಯ ಕಾರಣಗಳಲ್ಲಿ ಧನರೂಪಿ ಬಂಡವಾಳಕ್ಕೆ ಸಂಬಂಧಿಸಿದ ಸೆಣಸಾಟವೂ ಒಂದಾಗಿತ್ತು. ಈ ಅಂಶವನ್ನು ಅರ್ಥಶಾಸ್ತ್ರಜ್ಞರು ಈಗಾಗಲೆ ಗುರುತಿಸಿಯಾಗಿದೆ.

ಪಶ್ಚಿಮದಾದ್ಯಂತ ಆಗ ನಡೆದ ಈ ಪ್ರಕ್ರಿಯೆ ಈಗ ಮೂರನೆ ಜಗತ್ತಿನ ರಾಷ್ಟ್ರಗಳಲ್ಲಿ ಪುನರಾವರ್ತನೆಯಾಗತೊಡಗಿದೆ. ಆಗ ಅಲ್ಲಿ ಅವಸಾನದಂಚಿನಲ್ಲಿದ್ದ ಯಂತ್ರಕೇಂದ್ರಿತ ಬಂಡವಾಳ ಹೂಡಿಕೆಯ ಮಾದರಿಯು ಎರಡನೆಯ ಮಹಾಯುದ್ಧದ ಕಾರಣದಿಂದ ಮರುಜೀವವನ್ನು ಪಡೆದುಕೊಂಡಿತು. ಯುದ್ಧಾನಂತರದ ಕೆಲವೆ ವರ್ಷಗಳಲ್ಲಿ ಬಹಳಷ್ಟು ವಸಾಹತು ದೇಶಗಳು ಐರೋಪ್ಯ ಆಳ್ವಿಕೆಯಿಂದ ಸ್ವಾತಂತ್ರ್ಯ ಗಳಿಸಿಕೊಂಡವು. ಆದರೆ, ರಾಜಕೀಯವಾಗಿ ಮುಕ್ತವಾದರೂ ಅವು ಅನಂತರ ಅನುಸರಿಸಲಾರಂಭಿಸಿದ್ದು



ಮಾತ್ರ ಪಾಶ್ಚಿಮಾತ್ಯ ಅಭಿವೃದ್ಧಿಯ ಮಾರ್ಗಗಳನ್ನೆ. ಇಂಥ ಅಭಿವೃದ್ಧಿಯ ಯೋಜನೆಗಳಲ್ಲಿ ಅವು ಮತ್ತೆ ಅದೆ ಪಶ್ಚಿಮ ರಾಷ್ಟ್ರಗಳ ಸಹಾಯವನ್ನು ಬೇಡಬೇಕಾಗಿ ಬಂದಿತು. ಇದೆ ಸುದೈವವೆಂಬಂತೆ ಪಶ್ಚಿಮ ರಾಷ್ಟ್ರಗಳು ತಮ್ಮ ಯಂತ್ರಕೇಂದ್ರಿತ ವ್ಯವಸ್ಥೆಯನ್ನೂ ಅದಕ್ಕೆ ಸಂಬಂಧಿಸಿದ ಬಂಡವಾಳ ಹೂಡಿಕೆಯ ಮಾದರಿಯನ್ನೂ ಸಾರಾಸಗಟಾಗಿ ತಮ್ಮ ಹಳೆಯ ವಸಾಹತು ರಾಷ್ಟ್ರಗಳಿಗೆ ರವಾನಿಸತೊಡಗಿದವು; ಇಂಥ ಬಂಡವಾಳ ಹೂಡಿಕೆಯಿಂದ ಕೆಲವೆ ವರ್ಷಗಳಲ್ಲಿ ಅಗಣಿತ ಪ್ರಮಾಣದ ಲಾಭವನ್ನು ಗಳಿಸಿಕೊಂಡವು. ಈ ಲಾಭಾಂಶವನ್ನೆ ಅವು ಈಗ ಶುದ್ಧ ಹಣದ ರೂಪದಲ್ಲಿ ಮತ್ತೆ ಪ್ರಗತಿಶೀರ ರಾಷ್ಟ್ರಗಳ ಆರ್ಥಿಕ ಕ್ಷೇತ್ರದಲ್ಲಿ ತೊಡಗಿಸಲು ಹವಣಿಸುತ್ತಿವೆ.

ಹೀಗೆ, ಸಣ್ಣಸಣ್ಣ ಘಟಕಗಳನ್ನಾಧರಿಸಿದ ಹೊಸತೊಂದು ಮಾದರಿಯ ಉದ್ಯಮ ವ್ಯವಸ್ಥೆ, ವಿಸ್ತಾರವಾದ ವ್ಯಾಪಾರ ಹಾಗೂ ಸಾಗಾಣಿಕೆಯ ಮಾರ್ಗಗಳ ಸ್ಥಾಪನೆ, ಹಾಗೂ ಧನಕೇಂದ್ರಿತ ಬಂಡವಾಳದ ಪ್ರಾಬಲ್ಯಗಳು ಈ ನವವಸಾಹತುಶಾಹಿಯ ಮುಖ್ಯ ಅಂಗಗಳಾಗಿವೆ. ಆಧುನಿಕ ದೂರಸಂಪರ್ಕ ತಂತ್ರಜ್ಞಾನ ಇವುಗಳಿಗೆಲ್ಲ ಪೂರಕವೂ ಪೋಷಕವೂ ಆದ ಮತ್ತೊಂದು ಅಂಗವಾಗಿದೆ. ಈ ನಾಲ್ಕನೆಯ ವ್ಯವಸ್ಥೆಯಿಲ್ಲದಿದ್ದಲ್ಲಿ ಮೊದಲ ಮೂರು ವ್ಯವಸ್ಥೆಗಳನ್ನು ನಿರ್ವಹಿಸುವುದು ಅಸಾಧ್ಯವಾದ ಸಂಗತಿಯಾದ್ದು. ಹೀಗಾಗಿ, ದೂರಸಂಪರ್ಕ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಮೇಲ್ನೋಟಕ್ಕೆ ಕಾಣುವ ಲಾಭ-ಅನುಕೂಲಗಳೇನೆ ಇರಲಿ, ಅದು ಅಂತಿಮವಾಗಿ ಹಾಗೂ ಆತ್ಯಂತಿಕವಾಗಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕಾರ್ಯನಿರ್ವಹಣೆ (ಮ್ಯಾನೇಜ್‌ಮೆಂಟ್) ಯನ್ನು ಸುಲಭಗೊಳಿಸಿಕೊಡುವಂತಹ ಸಾಧನವಲ್ಲದೆ ಬೇರೇನೂ ಅಲ್ಲ. ಉದಾಹರಣೆಗೆ, ಇಂದು ಅಮೇರಿಕಾದ ಯಾವುದೊ ಒಂದು ನಗರದ ಗಗನಚುಂಬಿ ಕಟ್ಟಡವೊಂದರಲ್ಲಿ ಕುಳಿತ ಒಬ್ಬ ದೂರವಾಣಿ - ದೂರದರ್ಶನ - ಇಂಟರ್‌ನೆಟ್ ಮೂಲಕ ಭಾರತದ ಯಾವುದೋ ಒಂದು ಹಳ್ಳಿಯಲ್ಲಿ ನಡೆಯುತ್ತಿರುವುದನ್ನೆಲ್ಲ ನೋಡಬಲ್ಲ, ತಿಳಿಯಬಲ್ಲ ಮಾತ್ರವಲ್ಲ, ನಿಯಂತ್ರಿಸಬಲ್ಲ ಹಾಗೂ ನಿರ್ದೇಶಿಸಬಲ್ಲ. ಹಿಂದೆ ಇದ್ದಂತೆ ಸಾವಿರ ಸಂಖ್ಯೆಯ ಕಾರ್ಮಿಕರು ಒಂದು ಕಾರ್ಖಾನೆಗೆ ಹೋಗುವ ಅವಶ್ಯಕತೆ ಇಂದಿಲ್ಲ. ಬದಲಿಗೆ ಈಗ ಪ್ರತಿಯೊಬ್ಬ ಕುಶಲಕರ್ಮಿಯೂ ತನ್ನ ಮನೆಯಲ್ಲಿದ್ದು ಸಣ್ಣಸಣ್ಣ ಯಂತ್ರಘಟಕಗಳ ಮೂಲಕ ಸಣ್ಣ ಪ್ರಮಾಣದ ಉತ್ಪಾದನೆಯಲ್ಲಿ ತೊಡಗಿರುತ್ತಾನೆ; ಮಧ್ಯವರ್ತಿ ಮ್ಯಾನೇಜರನೊಬ್ಬ ಅಂಥವರ ಉತ್ಪನ್ನಗಳನ್ನು ಸಂಗ್ರಹಿಸಿ ದೂರದ ನಗರಗಳಲ್ಲೊ ದೇಶಗಳಲ್ಲೊ ಇರುವ ಒಂದು ಬಲಾಢ್ಯ ಕಂಪನಿಗೆ ರವಾನಿಸುತ್ತಾನೆ. ಹಳೆಯ ಬೃಹತ್ ಕಾರ್ಖಾನೆಗಳ ವ್ಯವಸ್ಥೆಯಲ್ಲಿದ್ದಂತೆ ಈ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ನಡೆಯುವ ಶೋಷಣೆ ಕಣ್ಣಿಗೆ ಕಾಣುವಂಥದ್ದಲ್ಲ. ಹಿಂದೆ, ವಸಾಹತುಶಾಹಿ ಕಾಲದಲ್ಲಿ, ಹಳ್ಳಿಯ

ರೈತನೊಬ್ಬ ರಕ್ತ-ಬೆವರು ಸುರಿಸಿ ಬೆಳೆಸಿದ್ದೆಲ್ಲವನ್ನು ದೂರದ ಅದೃಶ್ಯ ಸರ್ಕಾರವೊಂದು ಆತನಿಗೆ ಹೆಚ್ಚೇನನ್ನೂ ಉಳಿಸದಂತೆ ಸೊತ್ತೊಯ್ಯುತ್ತಿತ್ತು. ಇಂದು ಜಾಗತೀಕರಣದ ಹೆಸರಿನಲ್ಲಿ ನವ ವಸಾಹತುಶಾಹಿ ಜಗತ್ತಿನ ಬೇರೆಬೇರೆ ಭಾಗಗಳ ಕುಶಲಕರ್ಮಿಗಳನ್ನು ಅದೇ ರೀತಿಯಲ್ಲಿ ನಡೆಸಿಕೊಳ್ಳುತ್ತಿದೆ. ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯೂ.ಟಿ.ಓ.) ಯ ಹಿಂದಿನ ಶಕ್ತಿಗಳು ಇವೆ ನವವಸಾಹತುಶಾಹಿ ವ್ಯವಸ್ಥೆಗಳಲ್ಲದೆ ಬೇರಾವುವೂ ಅಲ್ಲ.

ಕೆಲವರು ವಾದಿಸಬಹುದು – ಇಲ್ಲ, ಹಾಗಲ್ಲ, ಜಾಗತೀಕರಣದ ಮೂಲಕ ನಮ್ಮ ಉತ್ಪಾದನೆಯ ವಸ್ತುಗಳಿಗೂ ಅಂತಾರಾಷ್ಟ್ರೀಯ ಮಾರುಕಟ್ಟೆ ಹಾಗೂ ಬೆಲೆಗಳು ಸಿಗುತ್ತವಲ್ಲ? ನಮ್ಮಲ್ಲಿ ಈ ಮೊದಲು ಅಲಭ್ಯವಾಗಿದ್ದ ವಿದೇಶಿ ಸರಕುಗಳು ಈಗ ನಮಗೂ ಅಗ್ಗವಾಗಿ ದೊರಕುತ್ತವಲ್ಲ? – ಎಂದು. ವಾಸ್ತವ ಮಾತ್ರ ಅಷ್ಟು ಸರಳವಾಗಿಲ್ಲ. ಜಾಗತಿಕ ವ್ಯಾಪಾರ ಸಂಘಟನೆಯ ಮೂಲಕ ಆಗುವುದು ಮೂಲಭೂತವಾಗಿ ಇಷ್ಟೇ: ವಸಾಹತುಶಾಹಿ ಹಾಗೂ ನವವಸಾಹತುಶಾಹಿ ಈ ಮೊದಲೆ ರಚಿಸಿಕೊಂಡ ವ್ಯಾಪಾರ ಮಾರ್ಗಗಳು ಈಗ ಇನ್ನಷ್ಟು ಬಲಗೊಳ್ಳುತ್ತವೆ; ಈಗ ಸೃಷ್ಟಿಯಾಗುವ ಹೊಸ ವ್ಯಾಪಾರ ಮಾರ್ಗಗಳು ಮತ್ತೆ ಅದೆ ಶಕ್ತಿಗಳ ಕಪಿ ಮುಷ್ಠಿಯಲ್ಲಿರುತ್ತವೆ. ಇದರಿಂದಾಗಿ, ಇಂದಿನ ಹಾಗೂ ಮುಂಬರುವ ದಿನಗಳಲ್ಲಿ ಜಗತ್ತಿನ ಯಾವುದೆ ಎರಡು ಮೂಲೆಯ ಕೇಂದ್ರಗಳ ನಡುವೆ ಏನೆ ಸರಳ ವಹಿವಾಟು ನಡೆಯಲಿ, ಅದರಲ್ಲಿ ಒಂದು ದೊಡ್ಡ ಪಾಲು ಅಮೆರಿಕಾ - ಯುರೋಪುಗಳಿಗೆ ಸಲ್ಲಲೇಬೇಕು. ಇಂಥ ವ್ಯವಸ್ಥೆಯಲ್ಲಿ, ಜಾಗತಿಕ ಮಟ್ಟದಲ್ಲಿ ವಾಣಿಜ್ಯ -ವ್ಯಾಪಾರ ಹೆಚ್ಚಿದಷ್ಟೂ ಸಹ ಬಡ ದೇಶಗಳ ಸಂಪತ್ತು ಹೆಚ್ಚುಹೆಚ್ಚು ಶ್ರೀಮಂತ ದೇಶಗಳ ಖಾತೆಗೆ ವರ್ಗಾವಣೆಯಾಗುತ್ತಿರುತ್ತದೆ. ಯಾವುದೆ ಪ್ರಾಕೃತಿಕ ವಸ್ತು ಅಥವಾ ಮಾನವ ಕಾಯಕದ ಉತ್ಪನ್ನ ತನ್ನ ಮೂಲ ಪರಿಸರದಿಂದ ಮಾರುಕಟ್ಟೆಗೆ ಸಾಗಿಬರುವ ಹಾದಿಯಲ್ಲಿ ಗಳಿಸಿಕೊಳ್ಳುವ 'ಮೌಲ್ಯ'ದ ಬಹುಭಾಗ ಈಗ ಆ ವಾಣಿಜ್ಯ ಮಾರ್ಗಗಳನ್ನು ನಿಯಂತ್ರಿಸುವ ಬಲಾಢ್ಯರ ಪಾಲಾಗುತ್ತದೆ. ಈ ವಾಣಿಜ್ಯ ಜಾಲ ಇಷ್ಟು ಅಭೂತ ಪೂರ್ವವಾಗಿ ಬೆಳೆದಿರುವುದರಿಂದ ಇಂದು ಜಗತ್ತಿನ ಶೇಕಡಾ ೮೦ ರಿಂದ ೯೦ರಷ್ಟು ಭಾಗಗಳಲ್ಲಿ ದೂರದ ಇನ್ನಾವುದೊ ಭಾಗದಲ್ಲಿ ತಯಾರಾದ ಸರಕುಗಳು ಸುಲಭವಾಗಿ ದೊರಕುತ್ತಿವೆ ನಿಜ. ಆದರೆ ಈ ಪ್ರಕ್ರಿಯೆಯ ಇನ್ನೊಂದು ಮುಖವೆಂದರೆ, ಇಂಥ ಸರಕುಗಳು ಹಿಂದಿನಂತೆ ಬೃಹತ್ ಕಾರ್ಖಾನೆಗಳಲ್ಲಿ ತಯಾರಾದುವಲ್ಲ. ಬದಲಾಗಿ ಸಣ್ಣಸಣ್ಣ ಘಟಕಗಳಲ್ಲಿ ಉತ್ಪಾದನೆಯಾದುವು. ಹೀಗೆ ಇಂದು ಬನಾರಸ್‌ನ ಸರಕು ಮಣಿಪಾಲದಲ್ಲಿ ದೊರಕುತ್ತದೆ, ಮಣಿಪಾಲದ್ದು ಬನಾರಸಿನಲ್ಲಿ ದೊರಕುತ್ತದೆ. ಈ ವ್ಯಾಪಾರ ಸರಪಣಿಯ ಹಿಂದಿರುವ ಅಗೋಚರ ಸತ್ಯವೇನೆಂದರೆ, ಉತ್ಪಾದನೆ-



ಉತ್ಪನ್ನ-ವ್ಯವಹಾರಗಳ 'ಮೌಲ್ಯ' ಬನಾರಸ್‌ನ ಕುಶಲಕರ್ಮಿಗಾಗಲಿ ಮಣಿಪಾಲದ ಕುಶಲಕರ್ಮಿಗಾಗಲಿ ಸಿಗದೆ, ಅವರ ಪರಸ್ಪರ ಸಂಬಂಧವನ್ನು ನಿಯಂತ್ರಿಸುವ ದೇಶಿ/ವಿದೇಶಿ ಬಂಡವಾಳಗಾರನ ಕೈಸೇರುತ್ತದೆ. ವಿಶ್ವ ವ್ಯಾಪಾರ ಸಂಸ್ಥೆ ಹಾಗೂ ಅದರ ಚೀಲದ ವಿಸ್ತರಣೆಯ ಪ್ರಯತ್ನದ ಹಿಂದಿರುವ ಅಂತಿಮ ಉದ್ದೇಶ ಇದುವೆ. ಇದೆ ಜಾಗತೀಕರಣದ ತತ್ವ ಹಾಗೂ ತರ್ಕ. ಇಂಥ ವಿಶ್ವವ್ಯಾಪಕ ವ್ಯಾಪಾರ ವ್ಯೂಹದ ರಚನೆಯಲ್ಲಿ ದೂರಸಂಪರ್ಕ ತಂತ್ರಜ್ಞಾನವೂ ಪ್ರಮುಖವಾದೊಂದು ಪಾತ್ರವನ್ನು ಹೊಂದಿದೆ.

ಜಾಗತೀಕರಣದ ಪ್ರಕ್ರಿಯೆಯು ಹೊಸ ವ್ಯಾಪಾರ ಮಾರ್ಗಗಳ ಹೊಸದೆ ರೀತಿಯ ಕೆಲವು ಸಂಗತಿಗಳನ್ನೂ ಸೃಷ್ಟಿಸುತ್ತದೆ. ಇಂಥ 'ಸಾಂಸ್ಕೃತಿಕ ಘಟನೆ'ಗಳ ಹಿನ್ನೆಲೆಯನ್ನು ಪರೀಕ್ಷಿಸಿದಾಗ ಅವುಗಳ ಹಿಂದೆ ನಿಂತು ಬಲೆ ಹೆಣೆಯುತ್ತಿರುವ ಆಧುನಿಕ ತಂತ್ರಜ್ಞಾನದ ಸ್ವರೂಪವೂ ಬಯಲಾಗುವುದು. ಉದಾಹರಣೆಗೆ, ಇತ್ತೀಚಿನ ವರ್ಷಗಳಲ್ಲಿ, ದೇಶದ ಕುಶಲಕರ್ಮಿಗಳನ್ನು ಪ್ರೋತ್ಸಾಹಿಸುವ ಹೆಸರಿನಲ್ಲಿ ಅಸಂಖ್ಯಾತವಾದ 'ಭಾರತ ಕುಶಲಕಲಾ ಮೇಳ'ಗಳನ್ನು ನಡೆಸಲಾಗುತ್ತಿದೆ. ಕೇಂದ್ರ-ರಾಜ್ಯ ಸರ್ಕಾರಗಳು, ದೊಡ್ಡದೊಡ್ಡ ಸಂಸ್ಥೆಗಳು ಹಾಗೂ ಬಹುರಾಷ್ಟ್ರೀಯ ಕಂಪೆನಿಗಳೆಲ್ಲವೂ ಇಂಥ 'ಉತ್ಸವ'ಗಳನ್ನು ಅತ್ಯುತ್ಸಾಹದಿಂದ ಸಂಘಟಿಸುತ್ತಿವೆ. ಇದಕ್ಕೆ ಕಾರಣವಿಷ್ಟೇ: ಇನ್ನು ಕೆಲವು ದಶಕಗಳ ಕಾಲ ಆ ಕುಶಲಕರ್ಮಿಗಳ ಶ್ರಮ ಮತ್ತು ಉತ್ಪನ್ನಗಳ 'ಮೌಲ್ಯ'ದ ಬಹುದೊಡ್ಡ ಪಾಲನ್ನು ತಮ್ಮ ಜೇಬಿಗಿಳಿಸಿಕೊಳ್ಳುವ ಉಪಾಯಗಳನ್ನು ರೂಪಿಸಿಕೊಳ್ಳಲು ಈ ಸರ್ಕಾರಿ ಯಾ ಖಾಸಗಿ ಸಂಸ್ಥೆಗಳಿಗೆ ಇಂಥ 'ಉತ್ಸವ'ಗಳಿಗಿಂತ ಮಿಗಿಲಾದ ಅವಕಾಶ ಇನ್ನೆಲ್ಲಿ ದಕ್ಕೀತು? ಆಧುನಿಕ ತಂತ್ರಜ್ಞಾನದ ಸಹಾಯದೊಂದಿಗೆ ಬೆಳೆಯುತ್ತಿರುವ ಆಧುನಿಕ ಆರ್ಥಿಕ ವಸಾಹತುಶಾಹಿಯು ತಂದೊಡ್ಡುವ ಅಪಾಯವೆ ಇದು.

ಇಲ್ಲಿ ಇನ್ನೊಂದು ಸ್ವಾರಸ್ಯದ ಅಂಶವನ್ನು ಗಮನಿಸಬಹುದು. ತನ್ನ ಮೊದಲ ಘಟ್ಟದಲ್ಲಿ, ಅಂದರೆ ೧೮-೧೯ನೆ ಶತಮಾನಗಳಲ್ಲಿ, ಆಧುನಿಕ ಸಾಮ್ರಾಜ್ಯಶಾಹಿಯು ತನ್ನ ಮುಂಚಿನ ವಿಕೇಂದ್ರೀಕೃತ ಸಂರಚನೆಗಳನ್ನೆಲ್ಲ ನಾಶಮಾಡಿ ಎಲ್ಲ ಅಧಿಕಾರವನ್ನು ತನ್ನಲ್ಲಿಯೆ ಕೇಂದ್ರೀಕರಿಸಿಕೊಳ್ಳುವ ಜಾಡಿನಲ್ಲಿ ಸಾಗಿಬಂದಿತು. ಈಗ ತನ್ನ ಎರಡನೆಯ ಘಟ್ಟದಲ್ಲಿ ಅದು ವಿಕೇಂದ್ರೀಕೃತ ವ್ಯವಸ್ಥೆಗಳಿಗೆ ಮರುಜೀವ ನೀಡುವ ಆಸಕ್ತಿಯನ್ನು ತೋರುತ್ತಿರುವುದೇನೊ ಹೌದು; ಆದರೆ ಇಂಥ ತೋರಿಕೆಯ ಹಿಂದೆ ಅಡಿಗಿರುವುದು ಮತ್ತೆ ಅದರದ್ದೆ ಹಿತಾಸಕ್ತಿಯಾಗಿದೆ. ಒಟ್ಟಾರೆ ಜಗತ್ತಿನ ಉತ್ಪಾದನೆ-ಉದ್ಯಮಗಳ ವ್ಯವಸ್ಥೆಯಲ್ಲಿ ಏನೇ ಬದಲಾವಣೆಯಾದರೂ ಅದು ಸಾಮ್ರಾಜ್ಯಶಾಹಿಯು ಇಷ್ಟಾನುಸಾರವಾಗಿಯೆ ಆಗಬೇಕು. ಅದಕ್ಕೆ ಕೇಂದ್ರೀಕರಣವೆ ಲಾಭದಾಯಕವೆಂದಾಗ

ಹಾಗೆ, ವಿಕೇಂದ್ರೀಕರಣವೆ ಲಾಭದಾಯಕವೆಂದಾಗ ಹೀಗೆ, ಇಡಿ ಜಗದ ಜನತೆ ಪರಿಭ್ರಮಿಸುತ್ತಿರಬೇಕು. ಈ ಯೋಜನೆಯಲ್ಲಿ ಅದು ದೂರಸಂಪರ್ಕ ಹಾಗೂ ಶೀಘ್ರಸಂಚಾರ ತಂತ್ರಜ್ಞಾನಗಳಿಂದ ಅಪಾರವಾದ ನೆರವನ್ನು ಪಡೆದುಕೊಳ್ಳುತ್ತದೆ.

••• ••• •••

ಇನ್ನು, ಆಧುನಿಕ ವಿಜ್ಞಾನ-ತಂತ್ರಜ್ಞಾನಗಳು ಪ್ರಬಲವಾಗಿ ಪ್ರಭಾವಿಸಿರುವ ಮತ್ತೆ ಕೆಲವು ಕ್ಷೇತ್ರಗಳನ್ನು ಪರಿಶೀಲಿಸೋಣ:

ಕೃಷಿ ಕ್ಷೇತ್ರದಲ್ಲಿ ಅವುಗಳ ಪ್ರವೇಶದಿಂದ ಉಂಟಾಗಿರುವ ಲಾಭ-ನಷ್ಟಗಳ ಚರ್ಚೆ ಈಗಾಗಲೇ ಹಳೆಯದಾಗಿ ಹೋಗಿದೆ. ಆ ಚರ್ಚೆಯ ವಿವರಗಳೂ ಎಲ್ಲರಿಗೂ ಸುಪರಿಚಿತವಾಗಿವೆ. ಉದಾಹರಣೆಗೆ, ಆಧುನಿಕ ರಾಸಾಯನಿಕ ವ್ಯವಸಾಯ ಕ್ರಮದಿಂದಲೇ ನಮ್ಮ ಆಹಾರ ಸಮಸ್ಯೆ ಬಗೆಹರಿಯಿತೆಂದು ಒಂದು ಗುಂಪು ವಾದಿಸಿದರೆ ಇನ್ನೊಂದು ಗುಂಪು ಅಂಥ ತತ್ಕಾಲೀನ ಪರಿಹಾರದಿಂದ ಭೂಮಿ ತನ್ನ ಮೂಲಸಾರ ವನ್ನು ಕಳೆದುಕೆಳ್ಳುವಂತಹ ದೀರ್ಘಕಾಲೀನ ಸಮಸ್ಯೆಯೆ ಉಂಟಾಯಿತೆಂದು ವಾದಿಸುತ್ತದೆ. ಕ್ಷಣಕ್ಷಣಕ್ಕೂ ಹೆಚ್ಚುತ್ತಿರುವ ಜನಕೋಟಿಗೆ ಅನ್ನ ನೀಡಲು ಕೃತಕ ಗೊಬ್ಬರ- ಬೀಜ-ಔಷಧಿಗಳ ವೈಜ್ಞಾನಿಕ ಕೃಷಿ ಪದ್ಧತಿಯೆ ಶಕ್ತವೆಂದು ಕೆಲವರು ವಾದಿಸುತ್ತಿದ್ದರೆ ಇನ್ನು ಕೆಲವರು ಅಂಥ ಪದ್ಧತಿ ಬೆಳೆಗಳ ಹಾಗೂ ಅವುಗಳನ್ನವಲಂಬಿಸಿದ ಮಾನವರ ಸಹಜ ಶಕ್ತಿಯನ್ನೆ ನಾಶಗೊಳಿಸುತ್ತಿದೆಯೆಂದು ವಾದಿಸುತ್ತಿದ್ದಾರೆ.

ಈ ಅಂಶಗಳಿಗೆ ಹೊರತಾದ ಮತ್ತೂ ಒಂದು ಅಂಶವಿದೆ. ಅದು ಮತ್ತೆ ನಮ್ಮನ್ನು ಈ ಚರ್ಚೆಯ ಕೇಂದ್ರವಿಷಯಕ್ಕೆ ಮರಳಿ ಒಯ್ಯುವಂಥದು. ಪಾರಂಪರಿಕ ಕೃಷಿ ಹಾಗೂ ಆಧುನಿಕ ಕೃಷಿ ಪದ್ಧತಿಗಳ ನಡುವೆ ಮೂಲಭೂತವಾದೊಂದು ವ್ಯತ್ಯಾಸವುಂಟು. ಅಮೋನಿಯಾ ಇಲ್ಲದೆ ಆಧುನಿಕ ಕೃಷಿ ವಿಧಾನವಿಲ್ಲ. ಅಮೋನಿಯಾದ ಉತ್ಪಾದನೆ ಯಲ್ಲಿ ಮತ್ತೆ ಅಧಿಕ ಸ್ತರಾಂತರಿ ಪ್ರಕ್ರಿಯೆಗಳಿಗೆ ಮೊರೆ ಹೋಗಬೇಕು. ೧೮೪೦ರ ದಶಕದಿಂದ ಪ್ರಾರಂಭಿಸಿ ಇಲ್ಲಿಯವರೆಗೂ ನಾವು ಬಳಸುತ್ತ ಬಂದಿರುವ ಹ್ಯಾಲ್‌ವರ್ಡ್ ಪ್ರಕ್ರಿಯೆಯಲ್ಲಿ ಜಲಜನಕ ಹಾಗೂ ಸಾರಜನಕಗಳು ೫೦೦° ಸೆಂಟಿಗ್ರೇಡ್‌ನಷ್ಟು ತಾಪಮಾನದಲ್ಲಿ ಮತ್ತು ೨೦೦ ಅಟ್‌ಮಾಸ್ಫಿಯರನಷ್ಟು ಒತ್ತಡದಲ್ಲಿ ಸಂಲಗ್ನಗೊಂಡು ಅಮೋನಿಯಾವನ್ನು ಉತ್ಪಾದಿಸುತ್ತವೆ. ಇದು ಮತ್ತೆ ಪ್ರಕೃತಿ ನಿಷೇಧಿಸಿದ ಪಥವಾಗಿದೆ.

ಆಧುನಿಕ ವೈದ್ಯವಿಜ್ಞಾನದ ಕಥೆಯೂ ಇದಕ್ಕಿಂತ ತೀರ ಭಿನ್ನವೇನಲ್ಲ. ಪಾರಂಪರಿಕ ವೈದ್ಯಕೀಯಕ್ಕೂ ಆಧುನಿಕ ವೈದ್ಯಕೀಯಕ್ಕೂ ಇರುವ ಮೂಲಭೂತ ವ್ಯತ್ಯಾಸಗಳಲ್ಲಿ ಒಂದೆಂದರೆ ಅವುಗಳಲ್ಲಿ ಎರಡನೆಯದು ಜೀವದೇಹಚ್ಛೇದ



(ವಿವಿಸೆಕ್ಷನ್) ದ ವಿಧಾನವನ್ನು ಬಳಸುತ್ತದೆ. ಜೀವಂತ ದೇಹವನ್ನು ಕತ್ತರಿಸಿ ಒಳನುಗ್ಗಿ ಶಸ್ತ್ರಕ್ರಿಯೆಯನ್ನು ನಡೆಸುತ್ತದೆ. ನನಗೆ ಗೊತ್ತು – ನಾನಿಲ್ಲಿ ಹೇಳಹೊರಟಿರುವ ವಿಷಯ ಅತ್ಯಂತ ಜಟಿಲವೂ ಸಮಸ್ಯಾತ್ಮಕವೂ ಅದುದೆಂದು. ನಾನು ವೈದ್ಯನಲ್ಲವಾದ್ದರಿಂದ ಶಸ್ತ್ರಚಿಕಿತ್ಸೆಯ ಕ್ರಮದ ಬಗ್ಗೆ ನಾನು ಪರ ಅಥವಾ ವಿರೋಧದ ವಾದಗಳನ್ನು ತಾಂತ್ರಿಕ ಸ್ತರದಲ್ಲೇನೂ ಮಂಡಿಸಲಾರೆ. ಆದರೆ ಓರ್ವ ಸಾಮಾನ್ಯನಾಗಿ ಆ ಚಿಕಿತ್ಸಾಕ್ರಮದ ಬಗ್ಗೆ ಸಮಾಜ ಹೊಂದಿರುವ ಸಾಮಾನ್ಯ ಭಾವನೆಯನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಬರಬರುತ್ತ ಆಧುನಿಕ ವೈದ್ಯವಿಜ್ಞಾನ ಶಸ್ತ್ರಕ್ರಿಯೆಯ ಕ್ರಮವನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸುತ್ತಿದೆಯೆನ್ನುವುದೆ ಜನಸಾಮಾನ್ಯರ ಅಭಿಪ್ರಾಯವಾಗಿದೆ; ಇಂಥ ಅವಲಂಬನೆ ಅಷ್ಟೇನೂ ಅನಿವಾರ್ಯವಲ್ಲವೆಂಬುದೂ ಅವರ ತಿಳುವಳಿಕೆಯಾಗಿದೆ.

ಇನ್ನು, ಮಾನವ ಜೀವನ ಚಟುವಟಿಕೆಗಳಲ್ಲಿ ಸಾಮಾನ್ಯಕ್ಕಿಂತ ಕೊಂಚ ಹೆಚ್ಚು ಆಸಕ್ತಿಯುಳ್ಳವರಿಗೆ ಈ ವಿಷಯದಲ್ಲಿ ಬೇರೆ ರೀತಿಯ ಕೆಲವು ಪ್ರಶ್ನೆಗಳು ಕಾಡುವುದುಂಟು: ಜೀವಂತ ದೇಹಗಳನ್ನು ಕತ್ತರಿಸಿ ಚಿಕಿತ್ಸೆ ನಡೆಸಿ ಮತ್ತೆ ಅವನ್ನು ಹೊಲಿದು ಮುಚ್ಚುವುದು ನೈಸರ್ಗಿಕವಾಗಿ ಎಷ್ಟರಮಟ್ಟಿಗೆ ಸೂಕ್ತ ಹಾಗೂ ಎಷ್ಟರ ಮಟ್ಟಿಗೆ ಸರಿ? ಈ ದೇಹಗಳನ್ನು ಹೀಗೆ ಸೃಷ್ಟಿಸಿರುವ ಪ್ರಕೃತಿ ಇಂಥ ಹಸ್ತಕ್ಷೇಪವನ್ನು ಸಹಿಸಿಕೊಳ್ಳುವುದೆ? ಇನ್ನೊಂದೆಡೆ ಈ ದೇಹಗಳದೆ ಪ್ರಕೃತಿ ಅದನ್ನು ತಾಳಿಕೊಳ್ಳ ಬಲ್ಲುದೆ? ನಮಗಿರುವ ಅಲ್ಪಜ್ಞಾನದಲ್ಲಿಯೆ ತಿಳಿದಿರುವ ಒಂದು ಮೂಲಭೂತ ನಿಸರ್ಗಸತ್ಯವೆಂದರೆ ಯಾವುದೆ ಜೀವಜಾತಿಯ ಯಾವುದೆ ದೇಹಭಾಗ ತನ್ನ ಸಹಜಪ್ರಕೃತಿಗೆ ಹೊರತಾದಂಥ ಪ್ರಕ್ರಿಯೆಗಳಿಗೆ ಪದೇಪದೆ ಗುರಿಯಾಗುತ್ತಿದ್ದಲ್ಲಿ ಅದು ಕಾಲಾಂತರದಲ್ಲಿ ತನ್ನ ಮೂಲ ಕ್ರಿಯೆಯನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳುವ, ಇಲ್ಲ ತಾನೆ ಕಣ್ಮರೆಯಾಗುವ ಸಂಭವವಿದೆ. ಹೀಗೆ ನೋಡಿದರೆ, ಮತ್ತೆಮತ್ತೆ ಸೀಸೆರಿಯನ್ ಶಸ್ತ್ರಕ್ರಿಯೆಗೆ ಒಳಗಾಗುವ ಮಾನವ ದೇಹಭಾಗ ಕೊನೆಗೆ ತನ್ನ ಸಹಜ ಧರ್ಮವಾದ ಸಂತಾನಾಭಿವೃದ್ಧಿ ಕಾರ್ಯವನ್ನು ನಿರ್ವಹಿಸಲೆ ನಿರಾಕರಿಸಬಹುದು.

ಈ ರೀತಿ ವಾದಿಸುವಲ್ಲಿ ನಾನು ಶಸ್ತ್ರಚಿಕಿತ್ಸೆಯ ಕ್ರಮವನ್ನೆ ಒಟ್ಟಾರೆಯಾಗಿ ಖಂಡಿಸುತ್ತಿಲ್ಲ. ಕೆಲವು ಅಸಾಮಾನ್ಯವಾದ ಸನ್ನಿವೇಶಗಳಲ್ಲಿ ಶಸ್ತ್ರಕ್ರಿಯೆಯ ಹೊರತಾಗಿ ಬೇರೆ ಯಾವ ಚಿಕಿತ್ಸಾವಿಧಾನವೂ ಸೂಕ್ತವಲ್ಲದಿರಬಹುದು ಹೌದು. ಆದರೆ ನನ್ನ ಒಂದು ಅನುಮಾನವೆಂದರೆ ಇಂಥದೊಂದು ಸುಲಭವಾದ ಕ್ರಮ ಸಿಕ್ಕಿದಾಕ್ಷಣ ಅದನ್ನು ಆತುಕೊಂಡು ಮಾನವ ದೇಹ ತನ್ನ ಸಹಜ ಪುನಸ್ಸ್ವಧಾರಣೆಯ ಶಕ್ತಿಯನ್ನು ಕಳೆದುಕೊಳ್ಳುತ್ತ ಹೋಗುತ್ತದೆ. ಅಷ್ಟೆ ಅಲ್ಲ, ಸಾಮಾನ್ಯ ಸಮಸ್ಯೆಯ ಬಹುಸಂಖ್ಯಾತ ಪ್ರಸಂಗಗಳಲ್ಲಿಯೂ ವೈದ್ಯರುಗಳು ಇಂಥ ಸುಲಭಸಾಧ್ಯ ವಿಧಾನವನ್ನೆ ನೆಚ್ಚಿಕೊಂಡು,

ವೃಥಾ ಶ್ರಮವೇಕೆಂದು ಅದನ್ನೆ ಪ್ರಥಮಾದ್ಯತೆಯ ಮೇರೆಗೆ ಬಳಸತೊಡಗುತ್ತಾರೆ; ಕೊನೆಗೆ ವೃತ್ತಿ ಸಂಬಂಧಿತವಾದ ಮೂಲಕೌಶಲ್ಯಗಳನ್ನೂ ಆತ್ಮವಿಶ್ವಾಸವನ್ನೂ ಕಳೆದುಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಅವರು ಶಸ್ತ್ರಚಿಕಿತ್ಸೆಯನ್ನು ಅಂತಿಮ ಉಪಾಯವಾಗಿ ಉಪಯೋಗಿಸುವುದನ್ನು ಬಿಟ್ಟು ಅದನ್ನು ಸರ್ವಪ್ರಥಮ ಅಸ್ತ್ರವನ್ನಾಗಿಯೆ ಹೂಡತೊಡಗುತ್ತಾರೆ. ಶಸ್ತ್ರಚಿಕಿತ್ಸಾ ವಿಧಾನದ ಅವಶ್ಯಕತೆ ಹಾಗೂ ಅನವಶ್ಯಕತೆಗಳ ಬಗ್ಗೆ ಇದುವರೆಗೆ ಗಂಭೀರವಾದ ಚರ್ಚೆ ನಡೆದೆ ಇಲ್ಲ. ಇದಕ್ಕೆ ಒಂದು ಕಾರಣವೆಂದರೆ ಎಲ್ಲ ಕ್ಷೇತ್ರಗಳಲ್ಲೂ ನಡೆಯುವಂತೆ ಇಲ್ಲಿಯೂ ಸಹ ಆಧುನಿಕ ವೈದ್ಯವಿಜ್ಞಾನ ವ್ಯವಸ್ಥೆಯು ಹೆಚ್ಚು ಪ್ರಚುರಗೊಳಿಸುವುದು ಶಸ್ತ್ರಕ್ರಿಯೆಯ ಯಶಸ್ಸಿನ ನಿದರ್ಶನಗಳನ್ನಷ್ಟೆ ವಿನಃ ಅದರ ಸೋಲಿನ ಅಂಕಿ-ಅಂಶಗಳನ್ನಲ್ಲ. ಆದಾಗ್ಯೂ, ಇಂಥ 'ವೃತ್ತಿ ಗೋಪ್ಯತೆ' ಯೆಂಬ ಕೋಟೆಯನ್ನು ಭೇದಿಸಿ ಕೆಲವು ಸ್ವತಂತ್ರ ಅಧ್ಯಯನಗಳು ನಡೆದಿವೆ; ಅವೆಲ್ಲವೂ ಸಹ ಸದ್ಯ ನಡೆಯುತ್ತಿರುವ ಶಸ್ತ್ರಚಿಕಿತ್ಸೆಗಳಲ್ಲಿ ಬಹುಪಾಲು ಅನವಶ್ಯಕವೊ ನಿರುಪಯುಕ್ತವೊ ಆದುವು ಎನ್ನುವ ವಾಸ್ತವದತ್ತ ನಮ್ಮ ಗಮನ ಸೆಳೆಯುತ್ತಿವೆ.

ಆಧುನಿಕ ನಾಗರಿಕತೆಯ ಬೇರೆ ಕ್ಷೇತ್ರಗಳಲ್ಲಿಯಂತೆ ಇಲ್ಲಿಯೂ ಸಹ ಉಚ್ಚ ಶಕ್ತಿ ಪ್ರಕ್ರಿಯೆಗಳನ್ನು ಅವಲಂಬಿಸದೆ ಬೇರೆ ದಾರಿಯಿಲ್ಲ. ಬೃಹತ್ ಪ್ರಮಾಣದ ಕೈಗಾರಿಕೆಯ ರೀತಿಯಲ್ಲಿ ಬೃಹತ್ ಸಂಖ್ಯೆಯ ಶಸ್ತ್ರಕ್ರಿಯೆಗಳನ್ನು ನಡೆಸುವಲ್ಲಿ ಅತ್ಯಗತ್ಯವಾದ ಶಸ್ತ್ರಗಳನ್ನು ಅಗಾಧ ರಾಶಿಯಲ್ಲಿ ಉತ್ಪಾದಿಸಿಕೊಳ್ಳಲು ಮತ್ತೆ ಅಧಿಕ ಸ್ತರಾಂತರಿ ಕ್ರಮಗಳಿಗೆಯೆ ಮೊರೆಹೋಗಬೇಕು.

ನಮ್ಮ ಚರ್ಚೆಯ ಈ ಭಾಗದ ಕೊನೆಯ ಅಂಶವಾಗಿ ಇನ್ನೊಂದು ಮೂಲಭೂತ ವಿಷಯವನ್ನು ಗಮನಿಸಬಹುದು :

ಆಧುನಿಕ ವಿಜ್ಞಾನ ತಂತ್ರಜ್ಞಾನಗಳು ಹೊರನೋಟಕ್ಕೆ ಪಾರಂಪರಿಕ ಕ್ರಮಗಳಿಗಿಂತ ಹೆಚ್ಚು ಫಲದಾಯಕವೆಂದು ಕಂಡರೂ ವಾಸ್ತವದಲ್ಲಿ ಅವು ತಾವು ನೀಡುವ ಫಲಕ್ಕಿಂತ ಎಷ್ಟೋ ಪಾಲು ಹೆಚ್ಚು ಪ್ರಮಾಣದ ಶಕ್ತಿಯನ್ನು ಕಬಳಿಸುವಂಥವು. ಹೀಗಾಗಿ ಅವುಗಳ ಶಕ್ತಿಬಳಕೆ ಹಾಗೂ ಫಲೋತ್ಪಾದನೆಯ ನಡುವಿನ ಅನುಪಾತ ತೀರಾ ಅಲ್ಪವಾದದ್ದು; ಬಹಳಷ್ಟು ಸಲ ಅಲ್ಲಿ ದೊರಕುವ ಫಲಕ್ಕಿಂತ ದುಡಿಸಿಕೊಂಡ ಶಕ್ತಿಯ ಪ್ರಮಾಣವೆ ಮಿಗಿಲಾಗಿರುತ್ತದೆ. ಇದನ್ನು ಸರಳ ಭೌತಶಾಸ್ತ್ರೀಯ ಲೆಕ್ಕಾಚಾರದಲ್ಲಿ ಹೇಳುವುದಾದರೆ, ಆಧುನಿಕ ವೈಜ್ಞಾನಿಕ ಕೃಷಿ ಒಂದು ಘಟಕದಷ್ಟು ಶಕ್ತಿರೂಪದ ಫಲವನ್ನು ಉತ್ಪಾದಿಸುವ ಕ್ರಿಯೆಯಲ್ಲಿ ಸುಮಾರು ಐದು ಘಟಕಗಳಷ್ಟು ಶಕ್ತಿಯನ್ನು ವ್ಯಯಿಸಿರುತ್ತದೆ. ಅದೆ, ಪ್ರಪಂಚದ ಬಹಳೆಡೆಗಳಲ್ಲಿ ಇಂದಿಗೂ ಪ್ರಚಲಿತವಾಗಿರುವ



ಅನಾಧುನಿಕ, ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಈ ಅನುಪಾತ ಸಾಮಾನ್ಯವಾಗಿ ೧ : ೧ ಆಗಿಯೂ ಕೆಲವೊಮ್ಮೆ ೦.೮ : ೧ ಆಗಿಯೂ ಇರುತ್ತದೆ. ಅಂದರೆ ಶಕ್ತಿ ಬಳಕೆಯ ಹಾಗೂ ಫಲೋತ್ಪಾದನೆಯ ಎಲ್ಲ ಆಯಾಮಗಳನ್ನೂ ಗಣನೆಗೆ ತೆಗೆದುಕೊಂಡಾಗ, ಅನಾಧುನಿಕ, ಸಾಂಪ್ರದಾಯಿಕ ಕ್ರಮಗಳೆ ಹೆಚ್ಚು ಫಲದಾಯಕವಾದುವು ಪರಿಸರ ಸಂವೇದಿಯಾದುವು ಹಾಗೂ ಹೆಚ್ಚು ಕಾರ್ಯದಕ್ಷತೆಯುಳ್ಳವು ಎನ್ನುವುದು ಸಂಶಯಾತೀತವಾದ ಸತ್ಯವಾಗಿದೆ.

ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಮೂಲ ದೋಷವಿರುವುದು ಅವುಗಳ ಕಾರ್ಯತತ್ವದ ಪರಿಕಲ್ಪನೆಯಲ್ಲಿಯೆ ಆಗಿದೆ. ನಾವು ಈ ಮೊದಲೆ ನೋಡಿದಂತೆ ಅವುಗಳು 'ಶಕ್ತಿ'ಗಿಂತ ಹೆಚ್ಚು 'ಅಧಿಕಾರ', 'ಪ್ರಾಬಲ್ಯ'ಗಳನ್ನು ನೆಚ್ಚಿಕೊಂಡಿರುವಂಥವು. ಇಂಥ ವ್ಯವಸ್ಥೆಗಳಲ್ಲಿ ಕಾರ್ಯಸಂಬಂಧಿ ಅದಕ್ಷತೆಯು ಜನ್ಮಜಾತವಾದೊಂದು ದೌರ್ಬಲ್ಯವಾಗಿರುತ್ತದೆ. ಆಧುನಿಕ ಭೌತಶಾಸ್ತ್ರವೆ ಒಂದೆಡೆ ಹೇಳುವಂತೆ ಅತ್ಯಲ್ಪ ಕಾಲಾವಧಿಯಲ್ಲಿ ಅತ್ಯಗಾಧ ಶಕ್ತಿಯನ್ನು ವ್ಯಯಿಸಿದಲ್ಲಿ ಅಂಥ ಪ್ರಕ್ರಿಯೆಗಳು ಅಂಥದೆ ಬೃಹತ್ ಪ್ರಮಾಣದ ಶಕ್ತಿನಷ್ಟ (ಎಂಟ್ರೊಪಿ) ಕ್ಕೂ ಕಾರಣವಾಗುತ್ತವೆ. ಇಂಥ ಪ್ರಕ್ರಿಯೆಗಳು ಬೇಡವೆ ಬೇಡ ಎಂಬುದು ನನ್ನ ವಾದವಲ್ಲ. ಅವುಗಳನ್ನು ಅತ್ಯನಿವಾರ್ಯವಾದೆಡೆ ಅತ್ಯಲ್ಪ ಸಂಖ್ಯೆಯಲ್ಲಿ ಅತ್ಯಪರೂಪವಾಗಿ ಬಳಸಿದಾಗ ಅವುಗಳಿಂದ ಅಪೇಕ್ಷಿತ ಸೌಕರ್ಯಗಳನ್ನು ಪಡೆದುಕೊಳ್ಳಬಹುದು ಹಾಗೂ ಅವುಗಳಿಂದ ಸಹಜವಾಗಿ ಉಂಟಾಗುವ ಮಾರಕ ಪಾರಿಸರಿಕ ಪರಿಣಾಮಗಳನ್ನು ಪರಿಹಾರಸಾಧ್ಯತೆಯ ಮಿತಿಯಲ್ಲಿಟ್ಟುಕೊಳ್ಳಬಹುದು. ಆದರೆ ಅವು ಒಂದು ನಾಗರಿಕತೆಯ ಒಟ್ಟೂ ತಂತ್ರಜ್ಞಾನೀಯ ಚಟುವಟಿಕೆಗಳ ಬಹುಮುಖ್ಯ ರೂಪವಾಗಿ ಬೆಳೆದಾಗ ಅನೂಹ್ಯವೂ ಅಪರಿಹಾರ್ಯವೂ ಆದ ಅಸಂಖ್ಯ ಸಮಸ್ಯೆಗಳು ಹುಟ್ಟಿಕೊಳ್ಳುವವು.

ಇವೆಲ್ಲ ಕಾರಣಗಳಿಂದಾಗಿಯೆ ನಾವಿಂದು ನಮ್ಮ 'ಅಭಿವೃದ್ಧಿ'ಯ ಕಲ್ಪನೆಯನ್ನೆ ಮೂಲಭೂತ ಮರುಪರಿಶೀಲನೆಗೆ ಒಡ್ಡಬೇಕಾದ ಒತ್ತಡ ಸೃಷ್ಟಿಯಾಗಿದೆ. ಆಧುನಿಕ ತಂತ್ರಜ್ಞಾನದ ವಿಧಾನಗಳು ಅದಕ್ಷವೂ ಅತ್ಯಪಾಯಕಾರಿಯೂ ಆದುವೆಂದು ತಿಳಿದಿದ್ದೂ ಸಹ ನಾವು ಅವುಗಳನ್ನೆ ಹೆಚ್ಚುಹೆಚ್ಚು ಬಳಸುವುದರ ಹಾಗೂ ಬೆಳೆಸುವುದರ ಹಿಂದೆ ನಮ್ಮ ನವ ನಾಗರಿಕತೆಯ ಬಹು ದೋಷಪೂರಿತವಾದ ಆಲೋಚನಾ ಕ್ರಮದ ಹಾಗೂ ಜೀವನಶೈಲಿಯ ದೊಡ್ಡ ಪಾತ್ರವಿದೆ. ಈ ನಾಗರಿಕತೆ ಸುಖದ ಶೋಧನೆಯಲ್ಲಿ ಸಹನೆಯನ್ನು ಬಿಟ್ಟುಕೊಟ್ಟಿರುವಂಥದ್ದು, ತನ್ಮೂಲಕ ತನ್ನ ಪರಿಸರದ ಸಹನಶೀಲತೆಯನ್ನು ಕೆಣಕುವಂಥದ್ದು, ಅದರ ಧಾರಣಾ ಸಾಮರ್ಥ್ಯವನ್ನು ನಷ್ಟಗೊಳಿಸುವಂಥದ್ದು. ಇಂಥ ನಾಗರಿಕತೆ ಇಂದು 'ಸಹನಸಾಧ್ಯ ಅಭಿವೃದ್ಧಿ' (ಸಸ್ಟೇನಬಲ್ ಡೆವಲಪ್‌ಮೆಂಟ್) ಯ

ಬಗ್ಗೆ ಮಾತನಾಡುತ್ತಿರುವುದು ಅತಾರ್ಕಿಕವೂ ಹಾಸ್ಯಾಸ್ಪದವೂ ಆಗಿದೆ. ‘ಶಕ್ತಿ ಸಂಚಾಲಿತ’ ಪ್ರಕ್ರಿಯೆಗಳಿಗಿಂತ ‘ಪ್ರಾಬಲ್ಯಸಂಚಾಲಿತ’ ಪ್ರಕ್ರಿಯೆಗಳೆ ಮೇಲುಗೈ ಪಡೆದಿರುವಲ್ಲಿ ‘ಸಹನಸಾಧ್ಯ ಅಭಿವೃದ್ಧಿ’ ಯೆನ್ನುವುದು ಅಸಾಧ್ಯವಾದ ಸಂಗತಿಯೆ ಸರಿ.

ಆಧುನಿಕ ನಾಗರಿಕತೆಯ ಇಂಥ ಏಕಮುಖಿ ಚಲನೆಯ ವಿರುದ್ಧವಾಗಿ ಬಹಳ ಮೊದಲಿನಿಂದಲೂ ಕೂಡ ಅನೇಕರು ದನಿಯೆತ್ತುತ್ತ ಬಂದಿದ್ದಾರೆ. ಸ್ವಾರಸ್ಯವೆಂದರೆ ಇಂಥವರು ಆ ತಮ್ಮ ವಿಮರ್ಶೆಯಲ್ಲಿ ತಾರ್ಕಿಕ ಆಯಾಮಗಳನ್ನೇನೂ ನೆಚ್ಚಕೊಳ್ಳದೆ ತರ್ಕಾತೀತ ವಾದಗಳನ್ನೆ ಹೆಚ್ಚು ಬಳಸಿಕೊಂಡರು. ಇವರಲ್ಲಿ ಬಹುಪಾಲು ಮಂದಿ ಕವಿಗಳು ಕಲಾವಿದರು ಸಂತರು ಆಗಿದ್ದರು. ಒಂದು ರೀತಿಯಲ್ಲಿ ಇವರೆಲ್ಲರೂ ಜ್ಞಾನಕ್ಕಿಂತ ಮಿಗಿಲಾಗಿ ವಿವೇಕವನ್ನು ಆಶ್ರಯಿಸಿದವರಾಗಿದ್ದರು. ಈ ವಿವೇಕ ಕೂಡಾ ಒಟ್ಟೊ ಮಾನವ ಸಮುದಾಯದ ಅಂತರಂಗದ ದನಿಯೆ ಆಗಿರುವಂಥದು. ಉಗಿಬಂಡಿ ಆಗಮಿಸಿದ ಮೊದಲ ದಿನಗಳಲ್ಲೆ ಅದು ಹರಡುತ್ತಿದ್ದ ಪಾರಿಸರಿಕ -ಆರ್ಥಿಕ - ಸಾಮಾಜಿಕ - ದುಷ್ಪರಿಣಾಮಗಳ ವಿರುದ್ಧ ಅನೇಕರ ವಿವೇಕ ಪ್ರತಿಭಟಿಸಿತ್ತು. ಕೈಗಾರಿಕಾ ಕ್ರಾಂತಿಯ ಮೊತ್ತಮೊದಲ ದಿನಗಳಲ್ಲೆ ಕಾರ್ಖಾನೆಗಳನ್ನು ಸೈತಾನನ ಗಿರಣಿಗಳೆಂದು ಜರಿದ ಇಂಗ್ಲಿಷ್ ಕವಿ ವಿಲಿಯಮ್ ಬ್ಲೇಕ್ ಇಂಥ ವಿವೇಕದ ಒಂದು ಮಾದರಿಯಾಗಿದ್ದ. ಆದರೆ ಆತ ಆಧುನಿಕ ತಂತ್ರಜ್ಞಾನವನ್ನು ಖಂಡಿಸಿದ್ದು ಪ್ರಧಾನವಾಗಿ ಆಧ್ಯಾತ್ಮಿಕ ನೆಲೆಯಲ್ಲಿ. ಬ್ಲೇಕ್‌ನ ನಿದರ್ಶನ ತೋರುವಂತೆ, ಪ್ರತಿಯೊಂದು ಮಾನವ ಸಮುದಾಯವೂ ತನ್ನ ಮೇಲೆ ತಾನೆ ಕೆಲವು ನೈತಿಕ ಪ್ರತಿಬಂಧಗಳನ್ನು ಹೇರಿಕೊಂಡಿರುತ್ತದೆ; ಆ ಮೂಲಕ ತನ್ನ ಭೌತಾಪೇಕ್ಷೆಗಳಿಗೆ ಆತ್ಮದ ಕಡಿವಾಣವೊಂದನ್ನು ತೊಡಿಸಿರುತ್ತದೆ. ಇಂಥ ಪರಿಮಿತಿಗಳ ಒಳಗೆ ತಮ್ಮ ಜೀವನವನ್ನು ನಡೆಸಿಕೊಂಡು ಬರುವ ಸಮುದಾಯಗಳು ಸಹಜವಾಗಿಯೆ ಸಂತುಲಿತವೂ ಪರಿಸರಸ್ನೇಹಿಯೂ ಆಗಿರುತ್ತವೆ. ಅವುಗಳ ಈ ಮನೋಧರ್ಮ ಅವುಗಳ ವಿಜ್ಞಾನ-ತಂತ್ರಜ್ಞಾನಗಳಲ್ಲಿಯೂ ಪ್ರತಿಫಲಿತಗೊಂಡಿರುತ್ತದೆ.

ಕಳೆದ ಎರಡು ಶತಮಾನಗಳ ಇತಿಹಾಸದ ಒಂದು ವೈಚಿತ್ರ್ಯವೆಂದರೆ, ಅಂದು ಕೆಲವರು ಅನುಭಾವಿ ನೆಲೆಯಲ್ಲಿ ಕಾಣಿಸಿಕೊಡಲೆತ್ನಿಸಿದ ಸತ್ಯಗಳನ್ನು ಆಧುನಿಕ ವಿಜ್ಞಾನ ಗೇಲಿಮಾಡಿತು; ಇಂದು ಅದೇ ವಿಜ್ಞಾನ ಅದೆ ಸತ್ಯಗಳನ್ನು ಪ್ರತ್ಯಕ್ಷ ಅನುಭವದ — ಅಷ್ಟೆ ಅಲ್ಲ ನೋವು ತುಂಬಿದ ಅನುಭವದ — ಮೂಲಕ ಕಂಡುಕೊಳ್ಳುತ್ತಿದೆ. ಉಗಿಬಂಡಿಯ ಬಗ್ಗೆ ಅಂದು ಕೆಲ ವಿವೇಕಿಗಳು ನುಡಿದಿದ್ದ ಕಟು ಮಾತುಗಳ ತಥ್ಯ ಇಂದು ನಮಗೆ ನಮ್ಮ ಪರಿಸರದ ಕಣಕಣದಲ್ಲೂ ಪ್ರಸ್ಫುಟವಾಗಿ ಗೋಚರವಾಗುತ್ತಿದೆ. ಅಂದರೆ, ಜೀವ-ಜೀವನ-ಜಾಲದ ಮೂಲ ಸತ್ಯಗಳನ್ನು ಗ್ರಹಿಸುವಲ್ಲಿ ಆಧುನಿಕ ವಿಜ್ಞಾನಕ್ಕಿಂತ ಸರಳ ಜೀವನಾನುಭನ ಹಾಗೂ ಅನುಭಾವಗಳೆರಡೂ ಹೆಚ್ಚು ಸೂಕ್ಷ್ಮತೆ ಹಾಗೂ



ದೂರದೃಷ್ಟಿಯನ್ನುಳ್ಳವು ಎಂದಾಯಿತು.

ಈ ಅಂಶ ನಮ್ಮನ್ನು ಚರ್ಚೆಯ ಮತ್ತೊಂದು ಹಂತಕ್ಕೆ ಕರೆದೊಯ್ಯುತ್ತದೆ. ಇಂದು ಆಧುನಿಕ ವಿಜ್ಞಾನ ಮತ್ತಷ್ಟು ಲಕಲಕಿಸುವ ಮತ್ತಷ್ಟು ಸಾಧನೆಗಳ ಹೊಸಿಲಲ್ಲಿ ನಿಂತು ನಮ್ಮನ್ನು ಕೈಬೀಸಿ ಸೆಳೆಯುತ್ತಿರುವಾಗ ನಮ್ಮ ಪ್ರತಿಕ್ರಿಯೆ ಎಂತಿರಬೇಕು? ಈ ಮೊದಲು ಮಾಡಿದಂತೆ ನಾವು ಅಂತರಂಗ ವಿವೇಕದ ವಾಣಿಗೆ ಕಿವುಡಾಗಿ ಆಧುನಿಕ ವಿಜ್ಞಾನ ಹಾಕಿಕೊಟ್ಟ ಮಾರ್ಗದುದ್ದ ಓಡುತ್ತ ಸಾಗಬೇಕೆ? ಇಲ್ಲ, ಸಂದ ಇನ್ನೂರು ವರ್ಷಗಳ ಅನುಭವದ ತಿಳುವಳಿಕೆಯಲ್ಲಿ ನಡುವೊಮ್ಮೆ ನಿಂತು ಅದಕ್ಕಿಂತ ಸಹನಶೀಲವೂ ಕ್ಷೇಮದಾಯಕವೂ ಆದ ಪರ್ಯಾಯ ಮಾರ್ಗಗಳನ್ನು ಹುಡುಕಿಕೊಳ್ಳಲು ಯತ್ನಿಸಬೇಕೆ? ಈ ಎರಡುನೂರು ವರ್ಷಗಳಲ್ಲಿ ಮಾಡಿದಂತಹ ತಪ್ಪುಗಳನ್ನೆ ಮತ್ತೊಮ್ಮೆ ಬೇರೆ ರೂಪಗಳಲ್ಲಿ ಮಾಡುವುದು ಮೂರ್ಖತನವಾಗುತ್ತದೆ. ಈ ಅವಧಿಯಲ್ಲಿ ಮೊದಲಿಗೆಯೆ ಸಾಮುದಾಯಿಕ ನೀತಿ ಪ್ರಜ್ಞೆಯನ್ನು ನಿರ್ಲಕ್ಷಿಸಿ, ಪ್ರಗತಿಯೆನ್ನುವುದು ನೀತಿಯನ್ನೂ ಮೀರಿದ್ದು ಎಂದು ನಂಬಿ ನಾವು ಈಗಾಗಲೇ ಹಲವು ಸಂಕಷ್ಟಗಳನ್ನು ನಾವಾಗಿಯೆ ಸೃಷ್ಟಿಸಿಕೊಂಡಾಗಿದೆ. ಈಗ ನಮ್ಮ ಮುಂದಿರುವ ಬಹುಮುಖ್ಯ ಆಯ್ಕೆಯೆಂದರೆ ‘ಮತ್ತೆ ಮೊದಲಿನಂತೆಯೇ ನೀತಿಕಲ್ಪನೆಯನ್ನು ಕಡೆಗಣಿಸಿ, ಅಂಥ ಧಿಕ್ಕಾರದಿಂದುಂಟಾಗುವ ದುಷ್ಪರಿಣಾಮಗಳನ್ನು ಕೊನೆಗೆ ಆಧುನಿಕ ವಿಜ್ಞಾನವೆ ಮನಗಾಣುವವರೆಗೂ ಕಾಯಬೇಕೊ?’ ಎನ್ನುವುದು. ಈ ಸಂಬಂಧದಲ್ಲಿ ಆತ್ಯಂತಿಕವಾದ ಒಂದು ನಿದರ್ಶನವೆಂದರೆ ತದ್ರೂಪಿ ತಳಿ ಸೃಷ್ಟಿ (ಕ್ಲೋನಿಂಗ್) ಯದು. ಸಂತಾನಾಭಿವೃದ್ಧಿಗೆ ಸ್ತ್ರೀ-ಪುರುಷ ಜೀವರೂಪಗಳೆರಡೂ ಅತ್ಯನಿವಾರ್ಯವೆಂಬ ಪ್ರಕೃತಿಯ ತತ್ವಕ್ಕೆ ತಿಲಾಂಜಲಿಯನ್ನಿತ್ತು ಕೃತಕ ವಿಧಾನಗಳ ಮೂಲಕ ಹೊಸ ಜೀವಗಳನ್ನು ಸೃಷ್ಟಿಸುವುದು ಎಷ್ಟು ಅಪಾಯಕಾರಿಯಾಗಬಲ್ಲದು ಎನ್ನುವುದಕ್ಕೆ ನಮಗಿನ್ನೂ ಬಲವಾದ ‘ವೈಜ್ಞಾನಿಕ’ ಪುರಾವೆಗಳೇನೂ ಸಿಕ್ಕಿಲ್ಲ. ಆದರೆ ಅಂಥದೊಂದು ತಂತ್ರಜ್ಞಾನದ ಮೊದಲ ಸೂಚನೆಗಳು ದೊರಕಿದಾಕ್ಷಣವೆ ನಮ್ಮ ಒಳದನಿ ಅದರ ವಿರುದ್ಧ ಎಚ್ಚರಿಕೆಯನ್ನು ನೀಡುತ್ತಿದೆ, ಇದು ಪ್ರಕೃತಿ ಧರ್ಮಕ್ಕೆ ಬಗೆಯುವ ಅಪಚಾರ ಎಂದು ನುಡಿಯುತ್ತಿದೆ. ಆಧುನಿಕ ವಿಜ್ಞಾನದ ಬಹುಪಾಲು ಚಟುವಟಿಕೆಗಳ ಬಗ್ಗೆಯೂ ಈ ಎರಡು ಶತಮಾನಗಳುದ್ದಕ್ಕೂ ಈ ವಿವೇಕದ ಶಿಖೆ ಇಂಥದೆ ಮಾತುಗಳನ್ನಾಡುತ್ತ ಬಂದಿದೆ. ಈಗಲಾದರೂ ನಾವು ಈ ವಾಣಿಗೆ ತತ್‌ಕ್ಷಣ ಕಿವಿಗೊಡೋಣವೊ ಇಲ್ಲ ಮತ್ತೊಮ್ಮೆ ಆಧುನಿಕ ವಿಜ್ಞಾನ ನಮ್ಮನ್ನು ಮತ್ತೊಂದು ಕಂಟಕಕಂದರ ದಂಚಿಗೆ ಕರೆದೊಯ್ದು ನಿಲ್ಲಿಸಿ ಅಲ್ಲಿ ನೀಡುವ ‘ವೈಜ್ಞಾನಿಕ ಜ್ಞಾನದ ದಿವ್ಯಕ್ಷಣ’ದವರೆಗೂ ಕಾಯೋಣವೊ?

ಇಲ್ಲಿ ಮತ್ತೊಮ್ಮೆ ಗಾಂಧಿಯ ನೆನಪಾಗುತ್ತದೆ. ೧೯೦೯ರಷ್ಟು ಹಿಂದೆಯೆ ಅವರು ಬರೆದ ಪ್ರಖ್ಯಾತ ಕೃತಿ 'ಹಿಂದ್ ಸ್ವರಾಜ್' ನಲ್ಲಿ ಒಂದೆಡೆ ಅವರು ಹೇಳುತ್ತಾರೆ: ಆಧುನಿಕ ವಿಜ್ಞಾನ-ತಂತ್ರಜ್ಞಾನಗಳು ಸೃಷ್ಟಿಸಿರುವಂತಹ ಯಂತ್ರಗಳು ನಮ್ಮ ಪೂರ್ವಿಕರಿಗೆ ತಿಳಿದಿರಲಿಲ್ಲವೆಂದೇನಿಲ್ಲ. ಅವರಿಗೆ ಅವುಗಳ ಬಗ್ಗೆ ಖಂಡಿತವಾಗಿಯೂ ಅರಿವಿತ್ತು. ಆದರವರು ಪ್ರಜ್ಞಾಪೂರ್ವಕವಾಗಿಯೆ ಅಂಥ ಸಾಧನಗಳನ್ನು ತಯಾರಿಸದಂತೆ ಹಾಗೂ ಬಳಸದಂತೆ ತಮ್ಮ ಮೇಲೆ ತಾವೆ ನಿರ್ಬಂಧವನ್ನು ವಿಧಿಸಿಕೊಂಡಿದ್ದರು. ಏಕೆಂದರೆ ಅವರಿಗೆ ಮತ್ತೊಂದು ದೊಡ್ಡ ಸತ್ಯವೂ ತಿಳಿದಿತ್ತು – ಇಂಥ ಯಂತ್ರಗಳು ಪಾರಿಸರಿಕ ಮೌಲ್ಯಗಳನ್ನೂ ಮಾನವೀಯ ಮೌಲ್ಯಗಳನ್ನೂ ಒಟ್ಟೊಟ್ಟಿಗೆ ನಾಶಮಾಡುವಂಥವು.

ಗಾಂಧಿಗೆ ಪ್ರಕೃತಿ ಮತ್ತು ಮಾನವಪ್ರಕೃತಿಗಳು ಬೇರೆಬೇರೆಯಾಗಿರಲಿಲ್ಲ. ಅಂಥವರಿಗೆ ಪಾರಿಸರಿಕ ಪ್ರತಿಬಂಧ-ಆಧ್ಯಾತ್ಮಿಕ ಪ್ರತಿಬಂಧ - ಸಾಮುದಾಯಿಕ ಪ್ರತಿಬಂಧ - ಆರ್ಥಿಕ ಪ್ರತಿಬಂಧಗಳ ನಡುವೆ ಅಂಥದ್ದೇನೂ ಭಿನ್ನತೆಯಿರುವುದಿಲ್ಲ.

••• ••• •••

ಮೇಲೆ ಪ್ರಸ್ತಾಪಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಆಧುನಿಕ ವಿಜ್ಞಾನದ ಪಕ್ಷಪಾತಿಗಳು ಇನ್ನೊಂದು ಆಕ್ಷೇಪವನ್ನು ಎತ್ತುವುದುಂಟು. ಅವರ ವಾದ ಸ್ಥೂಲವಾಗಿ ಹೀಗಿರುತ್ತದೆ:

'ಹೀಗೆ ವಿಜ್ಞಾನವನ್ನು ಪ್ರಕೃತಿಯ ವಿರೋಧಿಯೆಂದೇ ಏಕೆ ಪರಿಗಣಿಸುತ್ತೀರಿ? ಆಧುನಿಕ ವಿಜ್ಞಾನವೂ ಕೂಡ ಮಾನವನ ಜ್ಞಾನದ ಒಂದು ಶಾಖೆಯಲ್ಲವೇನು? ಆ ಮೂಲಕ ಮಾನವನ ಪ್ರಜ್ಞೆಯ ಒಂದು ಅಂಶವಲ್ಲವೇನು? ಹಾಗಿರುವಾಗ ಮಾನವ ಪ್ರಜ್ಞೆ – ತತ್ಕಾರಣ ಆಧುನಿಕ ವಿಜ್ಞಾನ ಕೂಡಾ ಮಾನವನಂತೆಯೆ ಪ್ರಕೃತಿಯದೆ ಸೃಷ್ಟಿಯಲ್ಲವೇನು? ಇಂಥ ಪ್ರಕೃತಿಸೃಷ್ಟಿತ ಮಾನವಪ್ರಜ್ಞೆ ತನ್ನನ್ನು ತಾನು ವಿಜ್ಞಾನ-ತಂತ್ರಜ್ಞಾನಗಳ ರೂಪದಲ್ಲಿ ಅಭಿವ್ಯಕ್ತಿಸಿಕೊಂಡಾಗ ಅವು ಹೇಗೆ ತಾನೆ ಪ್ರಕೃತಿವಿರೋಧಿಯಾಗಬಲ್ಲವು? ವಿಕಾಸದ ಪಥದಲ್ಲಿ ಏಕಕೋಶ ಜೀವಿಯೊಂದು ತನ್ನನ್ನು ತಾನೆ ಭಾಗಿಸಿಕೊಂಡು ಗುಣಿಸಿಕೊಂಡು ಅಂತಿಮವಾಗಿ ಅಸಂಖ್ಯ ಜೀವಕೋಶಗಳ ಸಂಗ್ರಹವಾದ ಮಾನವನಂತಹ ಅತ್ಯುಚ್ಚ ಅತಿಸಂಕೀರ್ಣ ಜೀವರೂಪದ ಮಟ್ಟಕ್ಕೆ ಮುಟ್ಟಿಕೊಂಡಂತೆಯೆ ಮಾನವ ಪ್ರಜ್ಞೆಯೂ ಸಹ ಹಂತಹಂತವಾಗಿ ಬೆಳೆಯುತ್ತ ಇಂದು ಆಧುನಿಕ ವಿಜ್ಞಾನದ ಶಿಖರಸ್ತರಕ್ಕೆ ಬಂದು ತಲುಪಿಕೊಂಡಿದೆ. ಇದೂ ಪ್ರಕೃತಿಯ ಒಂದು ಯೋಜನೆಯಾಗಿರಬಹುದಲ್ಲವೇನು? ಇಂಥ ವಿಜ್ಞಾನ ಪ್ರಕೃತಿ ಮಾರಕವೆನ್ನುವುದು ಶುದ್ಧ ಅವೈಜ್ಞಾನಿಕವಾದ ವಾದ.'



ಮಾನವಪ್ರಜ್ಞೆ ಮತ್ತು ಮಾನವಜ್ಞಾನಗಳೆರಡೂ ಮಾನವನಷ್ಟೆ ಪ್ರಾಚೀನವಾದುವು ಎನ್ನುವುದು ಯಾರೂ ಅಲ್ಲಗಳೆಯಲಾಗದಂತಹ ವಾಸ್ತವವಾಗಿದೆ. ಆದರೆ ಆಧುನಿಕ ವಿಜ್ಞಾನವೊಂದೆ ಮಾನವಪ್ರಜ್ಞೆಯ ಪ್ರಕಟನೆಯ ಅತ್ಯುಚ್ಚ ರೂಪವೆನ್ನುವುದು ಮಾತ್ರ ಪ್ರಶ್ನಾರ್ಹವಾದುದು. ವಿಜ್ಞಾನವಾದಿಗಳು ನೀಡುವ ವಿಕಾಸ ಪ್ರಕ್ರಿಯೆಯ ನಿದರ್ಶನವನ್ನೆ ವಿಸ್ತರಿಸುವುದಾದರೆ, ಏಕಕೋಶ ಏಕರೂಪಿ ಜೀವಿಯೊಂದು ತನ್ನ ಸಾಫಲ್ಯವನ್ನು ಕಂಡುಕೊಳ್ಳುವಲ್ಲಿ ಅನೇಕ ರೂಪಗಳಾಗಿ ಬೆಳೆಯಿತೆಂಬುದಾದಲ್ಲಿ ಅದೇ ರೀತಿ ಮಾನವಜ್ಞಾನವೂ ವಿಜ್ಞಾನವೂ ಅನೇಕ ಜ್ಞಾನರೂಪಗಳಾಗಿ ವಿಜ್ಞಾನರೂಪಗಳಾಗಿ ಬೆಳೆಯಿತು/ಬೆಳೆಯಬೇಕು ಎಂಬುದನ್ನೂ ಒಪ್ಪಿಕೊಳ್ಳಬೇಕು.

ಆಧುನಿಕ ವಿಜ್ಞಾನದ ಮೂಲಭೂತವಾದೊಂದು ದೋಷವಿರುವುದು ಇಲ್ಲಿಯೆ. ಅದು ಬಹುರೂಪಗಳನ್ನೆಲ್ಲ ನೆಲಸಮ ಮಾಡಿ ತನ್ನ ಏಕಾಧಿಪತ್ಯವನ್ನು ಸ್ಥಾಪಿಸಲು ಯತ್ನಿಸುವಂಥದು. ಅನೇಕತೆಯ ಬಗ್ಗೆ ಅದಕ್ಕೆ ಕಿಂಚಿತ್ತೂ ಸಹನೆಯಿಲ್ಲ, ಪರ್ಯಾಯ ಮಾರ್ಗಗಳ ಬಗ್ಗೆ ಕೊಂಚವೂ ತಾಳ್ಮೆಯಿಲ್ಲ. ಜೀವವೈವಿಧ್ಯ ಹಾಗೂ ಜೀವಸಮೃದ್ಧಿಗಳು ಅದರ ಸರಳೀಕೃತ ಸೂತ್ರ ಕಟ್ಟುವ ಯೋಜನೆಗೆ ಎಡರುತೊಡರುಗಳಾಗಿ ಕಾಣುತ್ತವೆ. ಅಂತೆಯೆ ಜಗತ್ತಿನಲ್ಲಿ ಒಂದೇ ಒಂದರ ಬದಲಾಗಿ ಹತ್ತು ಹಲವು ಭಿನ್ನ ವಿಜ್ಞಾನ ರೂಪಗಳು ಇರುವುದೂ ಅದಕ್ಕೆ ಅಸಹನೀಯವಾಗುತ್ತದೆ.

ಈ ಅಂಶ ಆಧುನಿಕ ವಿಜ್ಞಾನದ ಹಿಂದಿನ ಗುಪ್ತ ರಾಜಕೀಯ ಆಯಾಮವನ್ನೂ ಅನಾವರಣಗೊಳಿಸುತ್ತದೆ. ವಿಜ್ಞಾನ ನಿರ್ಲಿಪ್ತವಾದುದು, ರಾಜಕೀಯದ ಯಾವ ಲೇಪನವೂ ಇಲ್ಲದುದು ಎಂದು ಯಾರೆ ಎಷ್ಟೆ ಹೇಳಲಿ, ವಿಜ್ಞಾನಕ್ಕೂ ರಾಜಕೀಯದ ಮುಖವೊಂದಿರುವುದು ಸತ್ಯ. ಆಧುನಿಕ ವಿಜ್ಞಾನ ಹುಟ್ಟಿದ್ದೆ ಸುಮಾರು ಐದುನೂರು ವರ್ಷಗಳ ಹಿಂದೆ, ಬೇಕನ್, ನ್ಯೂಟನ್, ಗೆಲಿಲಿಯೋ, ಪ್ಯಾಸ್ಕಲ್ ಮುಂತಾದವರ ಕಾಲದಲ್ಲಿ. ಒಟ್ಟೂ ಮಾನವ ಇತಿಹಾಸದ ಹೋಲಿಕೆಯಲ್ಲಿ ಇದು ಇನ್ನೂ ಈಗಷ್ಟೆ ಕಣ್ಣು ತೆರೆಯುತ್ತಿರುವ ಕೂಸು. ಇದರ ಪೂರ್ವದಲ್ಲೂ ವಿಜ್ಞಾನವಿತ್ತು. ಇನ್ನೂ ಸರಿಯಾಗಿ ಹೇಳಬೇಕೆಂದರೆ, ಅನೇಕ ವಿಜ್ಞಾನಗಳಿದ್ದವು; ಅವೆಲ್ಲವೂ ತಮ್ಮ ಕಾಯಕವನ್ನು ತೃಪ್ತಿಕರವಾಗಿಯೆ ನಿಭಾಯಿಸಿಕೊಂಡು ಬಂದಿದ್ದವು.

ಪಾರಂಪರಿಕ ವಿಜ್ಞಾನದ ಈ ಬಹುರೂಪತೆಯನ್ನು ಮೆಟ್ಟಿನಿಂತು ಆಧುನಿಕ ಪಾಶ್ಚಾತ್ಯ ವಿಜ್ಞಾನ ತನ್ನ ಏಕಸ್ವಾಮ್ಯವನ್ನು ಸಾಧಿಸಿದ್ದಾದರೂ ಹೇಗೆ? ಈ ಯೋಜನೆ ಅದೆ ಐದುನೂರು ವರ್ಷಗಳ ಹಿಂದೆ ಆರಂಭಗೊಂಡ ಆಧುನಿಕ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ವಿರಾಟ್ ಯೋಜನೆಯ ಒಂದು ಭಾಗವೆ ಆಗಿತ್ತು. ಆಧುನಿಕ ಯೂರೋಪಿನ ಬಂಡವಾಳಶಾಹಿ - ವಸಾಹತುಶಾಹಿ ಶಕ್ತಿಗಳು ಆಧುನಿಕ ವಿಜ್ಞಾನಕ್ಕೆ

ಎಣೆಯಿಲ್ಲದ ಬೆಂಬಲ ನೀಡಿ, ಅದರ ಮೂಲಕ ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡವು. ಈ ಹೊಸ ನಾಗರಿಕತೆ ತನ್ನ ರಾಜಕೀಯ - ಆರ್ಥಿಕ ಬಲಪ್ರಯೋಗದ ಜೊತೆಜೊತೆಗೆಯೆ ಅವ್ಯಾಹತವಾಗಿ ನಡೆಸಿದ ಸಾಂಸ್ಕೃತಿಕ ಹಾಗೂ ವೈಚಾರಿಕ ಸ್ತರಗಳ ದಾಳಿಯಿಂದ ಹತ್ತೊಂಬತ್ತನೆ ಶತಮಾನದ ಮಧ್ಯಭಾಗದ ವೇಳೆಗೆ ಜಗತ್ತಿನ ಬಹುಭಾಗ (ಇದು ವಸಾಹತೀಕೃತವಾದ್ದು) ಇನ್ನೊಂದು ಅಲ್ಪಭಾಗವೊಂದರ ಮಾದರಿಯನ್ನೆ ಆದರ್ಶವೆಂದು ಸ್ವೀಕರಿಸುವಂತಹ ಸನ್ನಿವೇಶ ಸೃಷ್ಟಿಗೊಂಡಿತು. ಈ ರೀತಿಯ ಕ್ರಮಗಳಿಂದ ಆಧುನಿಕ ಪಶ್ಚಿಮ ತನ್ನ ವಿಜ್ಞಾನವನ್ನೆ ಸರ್ವಶ್ರೇಷ್ಠತೆಯ ಸಾರ್ವಕಾಲಿಕತೆಯ ಪಟ್ಟದ ಮೇಲೆ ಪ್ರತಿಷ್ಠಾಪಿಸಿತು.

ಇಂಥ 'ಸಾರ್ವಕಾಲಿಕ ಸತ್ಯ' ದ ಪರಿಕಲ್ಪನೆಯೆ ಅನೇಕ ಅಪಾಯಗಳನ್ನೊಳಗೊಂಡದ್ದಾಗಿದೆ. ಯಾವುದೆ ಸಂಗತಿ ತನ್ನನ್ನು ಸಾರ್ವಕಾಲಿಕವೆಂದು ತಿಳಿದುಕೊಳ್ಳುತ್ತಿರುವಂತೆಯೆ ಅದು ಕಾಲದ ನಂಟನ್ನು, ಅಂದರೆ ಇತಿಹಾಸದ ನಂಟನ್ನು, ಕಿತ್ತೆಸೆಯುತ್ತದೆ; ತನ್ಮೂಲಕ ಇತಿಹಾಸದ ಅವಿಭಾಜ್ಯ ಅಂಗಗಳಾಗಿರುವ ಜೀವಂತ ಮನುಷ್ಯರ ಜೀವನಾನುಭವದ ನಂಟನ್ನೂ ಹರಿದುಕೊಳ್ಳುತ್ತದೆ. ಹಾಗೆ ಮಾಡಿದಾಗ ಅದು ನಿರ್ಮಾನುಷವಾಗುತ್ತದೆ, ಬಹಳ ಸಲ ಅಮಾನುಷವೂ ಆಗುತ್ತದೆ. ಕೊನೆಗದು ತಾನು ಹುಟ್ಟಿದ್ದು ಬೆಳೆದಿದ್ದು ಮನುಷ್ಯರ ಮೂಲಕವಾಗಿ ಎನ್ನುವುದನ್ನು ಮರೆತು ಮಾನವಾತೀತವಾಗಿ ಕಾಲಾತೀತವಾಗಿ ಮೆರೆಯತೊಡಗುತ್ತದೆ. ಆಗ ಅದು ತನ್ನನ್ನು ಅನುಮಾನಿಸುವವರನ್ನು ಪ್ರಶ್ನಿಸುವವರನ್ನು ಸ್ವಲ್ಪವೂ ಸಹಿಸಿಕೊಳ್ಳದು. ಹೀಗೆ ಹೊರಗಿನ ಹಾಗೂ ಒಳಗಿನ ವಿಮರ್ಶೆಗಳೆರಡನ್ನೂ ಒಪ್ಪದೆ ಇರುವುದನ್ನೆ ಲೋಕಾರೂಢಿ ಸರ್ವಾಧಿಕಾರಿ ನಡವಳಿಕೆಯೆಂದು ಗುರುತಿಸುತ್ತದೆ.

ಯಾವುದೆ ಜ್ಞಾನರೂಪ ಹೀಗೆ ಸಾರ್ವಕಾಲಿಕತೆಯ ಹಾಗೂ ನಿತ್ಯಸತ್ಯತೆಯ ಕವಚ ಧರಿಸಿಕೊಂಡಾಗ ಅದು ಜ್ಞಾನಪ್ರಮಾಣಶಾಸ್ತ್ರ (ಎಪಿಸ್ಟೆಮಾಲಜಿ) -ವನ್ನೆ ಧಿಕ್ಕರಿಸುತ್ತದೆ. ಜ್ಞಾನಪ್ರಮಾಣಶಾಸ್ತ್ರವನ್ನು ಒಪ್ಪಿಕೊಳ್ಳುವುದೆಂದರೆ ಜ್ಞಾನಸಂಪಾದನೆಯಲ್ಲಿ ಬೇರೆ ಬೇರೆ ಮಾರ್ಗಗಳಿರುವುದು ಸಾಧ್ಯವೆಂದೂ ಅವೆಲ್ಲವುಗಳಿಗೂ ಅನೇಕ ರೀತಿಯ ಶಕ್ತಿಗಳು ದೌರ್ಬಲ್ಯಗಳು ಇರುವುದು ಸಾಧ್ಯವೆಂದೂ ಒಪ್ಪಿಕೊಳ್ಳುವುದು; ಹಾಗೆಯೆ ಜ್ಞಾನವೆನ್ನುವುದು ಮಾನವನ ಅಸ್ತಿತ್ವವಾದಿ ಸ್ಥಿತಿಗಳಲ್ಲಿ ಒಂದು ಎಂದೂ ಒಪ್ಪಿಕೊಳ್ಳುವುದು. ಇಂಥ ಮುಕ್ತ ಮನೋಧರ್ಮಕ್ಕೆ ತದ್ವಿರುದ್ಧವಾಗಿ ಆಧುನಿಕ ಪಾಶ್ಚಾತ್ಯ ವಿಜ್ಞಾನ ತನ್ನನ್ನೂ ಮಾನವ ಜೀವಿಯ ಅಸ್ತಿತ್ವದ ಸ್ಥಿತಿಯನ್ನೂ ಬೆಸೆದ ಬಳ್ಳಿಯನ್ನು ತುಂಡರಿಸಿತು. ಆ ಮೂಲಕ ಅದು ಜ್ಞಾನಕ್ಕೆ ಸ್ವಾಯತ್ತತೆ (ಆಟೊನಮಿ) ಯ ಸ್ವರೂಪವನ್ನು ಪ್ರದಾನ ಮಾಡಿತು.



••• ••• •••

ಈ ನನ್ನ ಉಪನ್ಯಾಸದ ಒಟ್ಟೂ ನಿಲುವು ಪುನರುತ್ಥಾನದತ್ತಲೊ ನಾಗರಿಕತೆಯ ಹಿಮ್ಮುಖ ಚಲನೆಯತ್ತಲೊ ಒಲವು ಹೊಂದಿರುವಂಥದು ಎಂದು ಕೆಲವರಿಗೆ ಅನಿಸಬಹುದು. ಆದರೆ ನನ್ನ ನಿಲುವಿನ ನಿಜ ಅದಲ್ಲ. ಮೊದಲನೆಯದಾಗಿ, ಪುನರುತ್ಥಾನವಾದ (ರಿವೈವಲಿಸಮ್) ಎನ್ನುವುದೆ ಅತ್ಯಂತ ಅಸ್ಪಷ್ಟವಾದೊಂದು ಪರಿಕಲ್ಪನೆಯಾಗಿದೆ. ಯಾರೂ ಎಂದೂ ಭೂತಕಾಲಕ್ಕೆ ಮರಳಿಹೋಗಲು ಸಾಧ್ಯವೆ ಇಲ್ಲ. ಎರಡನೆಯದಾಗಿ, ಆ ಭೂತಕಾಲವನ್ನು ಮತ್ತೆ ವರ್ತಮಾನದಲ್ಲೊ ಭವಿಷ್ಯದಲ್ಲೊ ಸೃಷ್ಟಿಸುವುದೂ ಸಾಧ್ಯವಿಲ್ಲ.

'ಹಾಗಾದರೆ ಇಂಥ ಚರ್ಚೆಯ ನಿಲುವೇನು ?' – ಎಂಬ ಪ್ರಶ್ನೆಗೆ ಉತ್ತರಿಸುವಲ್ಲಿ ನಾನು ಮತ್ತೆ ಗಾಂಧಿಯ ನೆರವು ಬೇಡುತ್ತೇನೆ.

೧೯೨೧ರಲ್ಲಿ, ಅಸಹಕಾರ ಚಳವಳಿಯ ದಿನಗಳಲ್ಲಿ, ಗುಜರಾತ್ ವಿದ್ಯಾಪೀಠವನ್ನು ಉದ್ಘಾಟಿಸುತ್ತ ಗಾಂಧಿ ಈ ಅರ್ಥದ ಮಾತುಗಳನ್ನಾಡಿದರು:

ನಾವೆಲ್ಲ ನಮ್ಮ ದೇಶದ ಮೂಲಶಕ್ತಿಗಳನ್ನು ಮತ್ತೆಮತ್ತೆ ಶೋಧಿಸಿಕೊಳ್ಳಬೇಕು. ಹೀಗೆಂದಾಕ್ಷಣ ನಾವು ಹಳೆಯ ಕಾಲಕ್ಕೆ ಮರಳಬೇಕೆಂದೊ ಅಂದಿನದನ್ನೆ ಪುನರಾವರ್ತಿಸಬೇಕೆಂದೊ ಖಂಡಿತ ಅಲ್ಲ. ಬದಲಾಗಿ, ನಾವು ಮುಂದೆ ನಡೆಯಬೇಕು; ಆದರೆ ಪೂರ್ವ ಪರಂಪರೆಗಳ ಅನುಭವವಿವೇಕದಲ್ಲಿ ನೆಟ್ಟುನಿಂತು ಆಧುನಿಕ ಅನುಭವಗಳಿಂದ ಸಮೃದ್ಧಗೊಂಡು ಮುನ್ನಡೆಯಬೇಕು.

ಆಧುನಿಕ ವೈಜ್ಞಾನಿಕ ಪಾಶ್ಚಾತ್ಯ ನಾಗರಿಕತೆಯ ಅತ್ಯಂತ ಕಟು ಟೀಕಾಕಾರನಾಗಿದ್ದರೂ ಸಹ ಗಾಂಧಿ ಎಂದಿಗೂ ಹಿಮ್ಮುಖ ಚಲನೆಯನ್ನು ಪ್ರತಿ ಪಾದಿಸಲಿಲ್ಲ. ಬದಲಾಗಿ, ಸೃಜನಶೀಲ ದ್ವಂದ್ವಾತ್ಮಕತೆಯ ಅತ್ಯುಜ್ವಲ ನಿದರ್ಶನವೆಂಬಂತಿರುವ ನಿಲುವೊಂದನ್ನು ತಾಳಿ ಅವರು ಭೂತ-ವರ್ತಮಾನ-ಭವಿಷ್ಯ ಮೂರಕ್ಕೂ ಸಮಾನ ಸೂಕ್ಷ್ಮತೆಯಿಂದ ಸ್ಪಂದಿಸಬೇಕೆಂದು ವಾದಿಸಿದರು. ಆ ಮೂಲಕ, ಜೀವನವೆನ್ನುವುದು ಬೇರೆಬೇರೆ ಮಾರ್ಗಗಳ ಮೂಲಕ ನಡೆಯುವ ಸತ್ಯದ ಸತತ ಶೋಧನೆಯಾಗಿರಬೇಕೆಂದು ಸೂಚಿಸಿದರು.

ಕೊನೆಯದಾಗಿ, ನಮ್ಮೆಲ್ಲರ ನಿತ್ಯಜೀವನದ ಸಾಮಾನ್ಯ ಸನ್ನಿವೇಶವೊಂದರ ಉದಾಹರಣೆಯ ಮೂಲಕ ನನ್ನ ಉಪನ್ಯಾಸವನ್ನು ಮುಗಿಸುತ್ತೇನೆ.

ನಮ್ಮ ಕುಟುಂಬದ ಓರ್ವ ಸದಸ್ಯರಿಗಾರಿಗೊ ಗಂಭೀರವಾದೊಂದು ಅನಾರೋಗ್ಯದ ಸಮಸ್ಯೆ ಕಾಡತೊಡಗಿತು ಎಂದಿಟ್ಟುಕೊಳ್ಳಿ. ಆಗ ನಾವು ಅವರ ಚಿಕಿತ್ಸೆಯ ಕರ್ತವ್ಯವನ್ನು ಹೇಗೆ ನಿರ್ವಹಿಸುತ್ತೇವೆ? ಅಂಥ ಸಂಕಷ್ಟದಲ್ಲಿ ನಾವು

ಚಿಕಿತ್ಸಾಕ್ರಮವೊಂದು ವೈಜ್ಞಾನಿಕವೊ ಅವೈಜ್ಞಾನಿಕವೊ ಪ್ರಗತಿಗಾಮಿಯೊ ಪ್ರತಿಗಾಮಿಯೊ ಆಧುನಿಕವೊ ಅಂಧನಂಬುಗೆಯದೊ ಎಂದೆಲ್ಲ ಯೋಚಿಸುತ್ತ ಕೂರದೆ ಅತ್ಯುಚ್ಚ ಮಟ್ಟದ ನಗರವಾಸಿ ಪರಿಣತರಿಂದ ಹಿಡಿದು ಅಳಲೆಕಾಯಿ ನೀಡುವ ಸಣ್ಣ ಹಳ್ಳಿಯ ಪಂಡಿತನವರೆಗೂ ಓಡಿಯಾಡುತ್ತೇವೆ; ಅತ್ಯಾಧುನಿಕ ಆಸ್ಪತ್ರೆಯಿಂದ ಆಂಜನೇಯನ ಗುಡಿಯವರೆಗೂ ಅಲೆದಾಡುತ್ತೇವೆ. ಎಲ್ಲ ಜ್ಞಾನಮಾದರಿಗಳ ಸಂಕುಚಿತ ಚೌಕಟ್ಟಿನಿಂದ ಮುಕ್ತರಾಗಿ ಹೇಗಾದರೂ ಆಗಲಿ, ನಮ್ಮ ಪ್ರಿಯವ್ಯಕ್ತಿ ಗುಣಮುಖನಾಗಲಿ ಎಂದು ಹಾರೈಸುತ್ತೇವೆ.

ಪ್ರತಿಗಾಮಿ ಪ್ರಗತಿಗಾಮಿ ಚೌಕಟ್ಟು ಹಾಕಿಕೊಟ್ಟದ್ದೂ ಆಧುನಿಕ ವಿಜ್ಞಾನವೇ. ತನ್ನ ಪಥದಲ್ಲಿ ನಡೆದರೆ ಪ್ರಗತಿಗಾಮಿ, ಅನ್ಯಪಥದಲ್ಲಿ ನಡೆದರೆ ಪ್ರತಿಗಾಮಿ, – ಇವೆರಡೂ ಕೂಡಾ ತಪ್ಪೇ.

ಹೀಗೆ ದೈವಶಕ್ತಿಯ ದೈವೀ ಪಾವಿತ್ರ್ಯದ ಬಂಧನವನ್ನೆ ಕಿತ್ತೆಸೆಯುವ ನಾವು ಆಧುನಿಕ ವಿಜ್ಞಾನದ ಬಂಧನವನ್ನೂ ಕಿತ್ತೆಸೆಯಬಾರದೇಕೆ? ಆಧುನಿಕ ವಿಜ್ಞಾನದಲ್ಲಿರುವ ಅಂಥ ಪಾವಿತ್ರ್ಯವಾದರೂ ಏನು?

ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಗೆ ಪಾತ್ರರಾದ
ನಮ್ಮವರಾದ
**ಶ್ರೀ ಪುರುಷೋತ್ತಮ ತಲವಾಟ**
ಮತ್ತು
**ಶ್ರೀ ಗುರುಮೂರ್ತಿ ವರದಾಮೂಲ**
**ಇವರಿಗೆ ನೀನಾಸಮ್ ಅಭಿನಂದನೆಗಳು**

**ಇತ್ತೀಚೆಗೆ ನಿಧನರಾದ**
ನಾಟಕಕಾರ ಶ್ರೀ ಸಮೇತನಹಳ್ಳಿ ರಾಮರಾಯ,
ಗಮಕಿ ಶ್ರೀ ಎಂ.ರಾಘವೇಂದ್ರರಾವ್, ಡಾ.ಎಂ.ಎನ್. ಶ್ರೀನಿವಾಸ್,
ಕಿನ್ನರಿಜೋಗೇರಾಟದ ಹಿರಿಯ ಕಲಾವಿದ ಶ್ರೀ ಫಕೀರಪ್ಪ ಜೋಗಿ ಮತ್ತು
ಅಮಚಿ ಪಟೇಲ್ ಶ್ರೀ ಲಕ್ಷೀನಾರಾಯಣರಾವ್
**ಇವರಿಗೆ ನೀನಾಸಮ್ ಶ್ರದ್ಧಾಂಜಲಿ.**

# ಯುದ್ಧಕಾಲದಲ್ಲಿ ಕಲೆಯ ಕಾಯಕ

ಸದಾನಂದ ಮೆನೋನ್
ಕನ್ನಡಕ್ಕೆ: ಬಿ.ಆರ್.ವೆಂಕಟರಮಣ ಐತಾಳ

ಈ ವರ್ಷದ ಪ್ರಾರಂಭದಲ್ಲಿ, ಕಲೆಯ ಕುರಿತಾದ ಅಂತಾರಾಷ್ಟ್ರೀಯ ಮಟ್ಟದ ಒಂದು ಸೆಮಿನಾರಿನಲ್ಲಿ, ನಾನು ಮುಂದಿಟ್ಟ ಒಂದು ಪ್ರಮೇಯ ಬಿಸಿಬಿಸಿ ಚರ್ಚೆಗೆ ಗ್ರಾಸವಾಗಿ ದೊಡ್ಡ ವಿವಾದ ಎಬ್ಬಿಸಿತ್ತು. ನನ್ನ ಪ್ರಶ್ನೆ ಮತ್ತೇನಲ್ಲ– ಇಂದಿನ 'ಅವಶ್ಯಕತೆಯ ಪೂರೈಕೆ ಪರವಾದ ಸೌಂದರ್ಯಶಾಸ್ತ್ರ'ದ ಸಂದರ್ಭದಲ್ಲಿ ನಮ್ಮ ಕಲಾವಿದರು ತಮ್ಮ 'ಬದಲಾಯಿಸುವ ತಾಕತ್ತನ್ನು' ಕಳೆದುಕೊಂಡಿದ್ದಾರೆ; ಇದರಿಂದಾಗಿ ಕಲೆ ಎನ್ನುವುದು ತೀರಾ ಸಂಪ್ರದಾಯನಿಷ್ಠವಾದ ವಿಚಾರಗಳನ್ನು ಪ್ರದರ್ಶಿಸಲು, ಹೇಳಿಕೆಗಳನ್ನು ಉದ್ಘೋಷಿಸಲು ಬಳಸುವ ಪದವಾಗಿದೆ – ಎನ್ನುವುದು ನನ್ನ ಪ್ರತಿಪಾದನೆಯಾಗಿತ್ತು. ಕಳೆದ ಕೆಲವು ತಿಂಗಳ ಹಿಂದೆ ನಡೆದ ಕಾರ್ಗಿಲ್ ಹೋರಾಟದ ನೆರಳಿನಲ್ಲಿ ನಮ್ಮ ಬಹುತೇಕ ಕಲಾ ಸಾಂಸ್ಕೃತಿಕ ಸಮುದಾಯದವರು ಪ್ರದರ್ಶಿಸಿದ ಪೊಳ್ಳು ಬೆಡಗು ಥಳಕು – ನನ್ನ ವಾದವನ್ನು ಯಥೇಷ್ಟ ಸಮರ್ಥಿಸುತ್ತವೆ.

ಚರ್ಚಾರ್ಹವಾದ ಈ ಇಂಡೋ-ಪಾಕ್ ಮುಖಾಮುಖಿಯು ನಮ್ಮ ಹೆಚ್ಚಿನ ಉತ್ಸಾಹೀ ಕಲಾವಿದರಲ್ಲಿ ಅನಿರೀಕ್ಷಿತವಾಗಿ ಥಟ್ಟನೆ ಭಾವನೆಗಳ ಉಬ್ಬರವನ್ನು ಉಂಟುಮಾಡಿತು. ಈ ಭಾವೋನ್ಮಾದದಲ್ಲಿ ಅವರು ರಣಕಹಳೆಗಳನ್ನು ಮೊಳಗಿದರು, ತ್ರಿವರ್ಣಧ್ವಜಗಳನ್ನು ಚಿತ್ರಿಸಿದರು, ಡಮ್ಮಿ ಎಕೆ-೪೭ ಹಿಡಿದು ನೃತ್ಯವಾಡಿದರು – ಒಟ್ಟಿನಲ್ಲಿ ಭಾರತಮಾತೆಯ ದಿಗ್ವಿಜಯವನ್ನು ಹಾರೈಸಿ ಘೋಷಣೆ ಕೂಗಿದರು. ಅದು ಕಸದ ಬುಟ್ಟಿಗೆ ಎಸೆಯಬಹುದಾದ ಕಳಪೆ ಕಲೆಯ ವರ್ಗಕ್ಕೆ ಸೇರುತ್ತದೆ. ಇಂದಿಗೂ ಜನಪ್ರಿಯ ಸಿನಿಮಾಗಳ ಸುರಕ್ಷಿತ ವಸ್ತುಗಳು ಇಂಥವೇ. ಅವು ದೇಶಪ್ರೇಮದ ಭಾವನೆಯ ತಿರುಳನ್ನು ಕಡೆದು ತಮ್ಮ ಸುಲಲಿತ ಕಲಾಮಾದರಿಗಳನ್ನು ನಿರ್ಮಿಸುತ್ತವೆ. ಆದರೆ ನಮ್ಮ ಕಲಾಕಾರ ಸಮುದಾಯದವರು ಇಂತಹ ಆವೇಶ - ಆಕ್ರಮಣಗಳಿಗೆ ಮುನ್ನುಗ್ಗಿ ಹೀಗೆ ತಮ್ಮನ್ನು ಪ್ರದರ್ಶಿಸಿಕೊಂಡದ್ದು ತೀರಾ ವಿರಳ. ಈ ತರುವಾಯದ ಸೌಂದರ್ಯಕಲ್ಪನೆ ಮತ್ತು ಬೌದ್ಧಿಕ ಪರಿಸರಗಳ ನಡುವಣ ಅಸಮತೋಲನದಿಂದಾಗಿ ರವೀಂದ್ರನಾಥ ಠಾಕೂರರ ಕಲ್ಪನೆಯ ಭಾರತವನ್ನು ನರದೌರ್ಬಲ್ಯದ ಲಕ್ಷಣಗಳ ಜೊತೆ ಬಿತ್ತನೆ ಮಾಡಿದಂತೆ ಅಪಶಕುನಕಾರಿಯಾಗಿ ಪರಿಣಮಿಸಿದೆ.

೧೯೬೩ರಲ್ಲಿ, ದೆಹಲಿಯ ಕೆಂಪುಕೋಟೆಯ ಮೈದಾನದಲ್ಲಿ, ಲತಾ ಮಂಗೇಶ್ಕರ್ ಕವಿ ಪ್ರದೀಪರ 'ಆಯಿ ಮೇರೆ ವತನ್ ಕೆ ಲೋಗೋಂ' ಹಾಡಿನ ಜೊತೆಗೆ 'ರುದಾಲಿ' ಅಭಿನಯಿಸಿದಾಗ ಪಂಡಿತ್ ನೆಹರೂ ಅವರು ನೆರೆದ ಜನಸಂದೋಹದೆದುರೇ ಕಣ್ಣೀರು ತೊಡೆದುಕೊಂಡರು. ಚೀನಾಯುದ್ಧದ ಅಂದಿನ ಪರಿಸ್ಥಿತಿಯಲ್ಲಿ ಈ ಕಂಬನಿಯ ಭಾವಧಾರೆಗಳು ರಾಷ್ಟ್ರೀಯ ಸಂಕಟದ ದ್ಯೋತಕಗಳಾಗಿ ಪತ್ರಿಕೆಗಳಲ್ಲಿ ಪ್ರಕಟವಾದವು. ಅಂದು ಮೊದಲ್ಗೊಂಡು ಉದ್ದಕ್ಕೂ ಸಮರತುಲ್ಯಭಾವಗಳನ್ನು ಶಾಶ್ವತ ನಿತ್ಯಸತ್ಯವೆಂದು ಬಿಂಬಿಸಲು ಆ ಹಾಡನ್ನು ಸಮರೋಪಾದಿಯಲ್ಲಿ ಬಳಸಲಾಗಿದೆ; ಅಲ್ಲದೆ, ರಾಷ್ಟ್ರೀಯ ಅಶ್ರುಜಲ - ನೀರಾವರಿ ಯೋಜನೆಗಳಲ್ಲಿ ಪ್ರಮುಖ ರಾಜಕೀಯ ಅಸ್ತ್ರವಾಗಿ ಅದನ್ನು ಖಾಯಂ ಮರುಸೃಷ್ಟಿಸಲಾಗುತ್ತಿದೆ. ನಿಸ್ಸಂದೇಹವಾಗಿ, ಜನರ ನೋಟವನ್ನು ಮಸುಕುಗೊಳಿಸಲು ಅತ್ಯುತ್ತಮ ಮಾರ್ಗವೆಂದರೆ ಅವರ ಕಣ್ಣಿನ ಭಾವುಕತೆಯ ಮಂಜು. ನಮ್ಮ ದೇಶದಲ್ಲಿ ಕಲೆ ಮತ್ತು ಕಲಾವಿದರು ಹೆಚ್ಚುಹೆಚ್ಚಾಗಿ ಇದನ್ನೇ ತಮ್ಮ ಅಂತಿಮ ಗುರಿಯಾಗಿಸಿಕೊಂಡಿದ್ದಾರೆ.

ಯುದ್ಧ ಎನ್ನುವುದು, ಮತಿಭ್ರಾಂತ ಅವಿವೇಕಿಗಳನ್ನು ಹೊರತುಪಡಿಸಿ, ಯಾವತ್ತೂ ಯಾರಿಗೂ ಸ್ಫೂರ್ತಿಯ ಸೆಲೆಯಾಗುವುದು ಸಾಧ್ಯವಿಲ್ಲ. ಯಾಕೆಂದರೆ, ಅದು ಮನುಷ್ಯನನ್ನು ಜಡವಾಗಿಸುತ್ತದೆ, ಚೈತನ್ಯಶೂನ್ಯನಾಗಿಸುತ್ತದೆ, ಪಾರ್ಶ್ವವಾಯುಪೀಡಿತನಂತಾಗಿಸುತ್ತದೆ. ಅದು ಸೃಷ್ಟ್ಯಾತ್ಮಕ ಪ್ರಕ್ರಿಯೆಗಳಿಗೆ ವಿರುದ್ಧವಾದ ನೆಲೆ. ನಿಗೂಢ ಒಳ-ಉದ್ದೇಶಗಳ ಕೈವಾರಿಗಳಿಂದ ಕಲೆಯ ಪರಿವೇಷತೊಟ್ಟು ವಿಜೃಂಭಿಸುವಂಥವರಿಗೆ ತಮ್ಮ ಟೊಳ್ಳುತನ ತಿಳಿಯುವುದಿಲ್ಲ. ಒದ್ದೆಮುದ್ದೆಯಾದ ಭಾವಪರವಶತೆ ಮತ್ತು ಸೈನಿಕರ ಪರವಾಗಿ ಉತ್ಪ್ರೇಕ್ಷಿತ ಅನುಕಂಪ – ಇವು, ಅವು ಸೂಚಿಸುವ ನಿಜವಾದ ಘಟನೆಗಳ ಜೊತೆ ಸ್ಪರ್ಧಿಸಲಾರವು. ಸಮರಾದರ್ಶತೆಯನ್ನು ಎತ್ತಿಹಿಡಿಯುವಂತಹ 'ಕಲೆ' ತಾನೊಂದು ಹುಸಿಬೆಡಗಿನ ಮಾಧ್ಯಮವೆಂದು, ಕೇವಲ ಥಳುಕಿನ ರೂಪವೆಂದು, ಟೊಳ್ಳು ವಕ್ತಾರನೆಂದು ತನ್ನನ್ನು ತಾನೇ ನಿಕೃಷ್ಟವಾಗಿ ಪ್ರತಿಬಿಂಬಿಸಿಕೊಳ್ಳುತ್ತದೆ. ಯಾವಾಗ ದೇಶಪ್ರೇಮದ ಭಾವನೆಗಳು ಕೇವಲ ಭೀಕರತೆಯನ್ನೇ ಮೆಚ್ಚಲು ಉದ್ದೀಪಿಸುತ್ತವೋ ಮತ್ತು ಕೆಡುಕನ್ನೇ ಸ್ವೀಕರಿಸುತ್ತವೋ –ಅಂತಹ ಭಾವನೆಗಳು ಹುತಾತ್ಮ ಸೈನಿಕರ ವಿಜಯಮಾಲಿಕೆಯ ಮೇಲೆ ಹಿಗ್ಗಿ ಕುಣಿದಾಡುವ ಹೀನಸಂತೋಷದ ಕಲೆಯನ್ನಷ್ಟೇ ಸೃಜಿಸಬಲ್ಲವು.

ಯಾವ ದೇಶವೂ ತನ್ನ ಸೈನಿಕರ 'ತ್ಯಾಗ'ವನ್ನು ಇಷ್ಟೊಂದು ಭಾವಾತಿರೇಕತೆಗೆ ಒಯ್ದಿಲ್ಲ. ಹಾಗೆಯೆ, ದ್ವಿತೀಯ ಮಹಾಯುದ್ಧಾನಂತರ ಯಾವ ದೇಶವೂ, ನಮ್ಮ ಉಪಖಂಡದ ಆಂತರಿಕ ಸಂಘರ್ಷಗಳಲ್ಲಿ ಬಳಸಿದಂತೆ, ಇಷ್ಟೊಂದು ಅಗಾಧ



ಪ್ರಮಾಣದಲ್ಲಿ ತನ್ನ ಪ್ರಜೆಗಳಿಗೆ ಸಮವಸ್ತ್ರತೊಡಿಸಿ ಸಾಮೂಹಿಕ ಕಗ್ಗೊಲೆಗೆ ಅಣಿಗೊಳಿಸಿದ್ದಿಲ್ಲ. ಇದು ಎಷ್ಟೊಂದು ಬಗೆಯಲ್ಲಿ ಸಿನಿಕತನದ ಹಾಡು - ಕುಣಿತ - ಕಥೆ- - ಸಿನಿಮಾಗಳಾಗಿ ಕಾಲ್ಪನಿಕ ರಮ್ಯವೈಭವಗಳಾಗಿ ಮೆರೆಯಿತು ಎನ್ನುವುದು ಚರ್ಚಿಸತಕ್ಕ ವಿಷಯ. ಪಿ. ಸಾಯಿನಾಥ್ ಹೇಳುವಂತೆ, ನಮ್ಮ ಬಡ ರೈತಾಪಿಯುವಕರಿಗೆ ಸೈನ್ಯಕ್ಕೆ ಸೇರುವುದೆಂದರೆ ಅದು ಕೇವಲ ' ಪರಿಮಿತ ಉದ್ಯೋಗಾವಕಾಶದಿಂದಾಗಿ'. ಪರಾಕ್ರಮಕ್ಕಾಗಿ ಅಲ್ಲ. ನಮ್ಮಲ್ಲಿನ 'ಪರಿಮಿತ ಪ್ರಯಾಣ ಸೌಕರ್ಯ' ಗಳಿಂದಾಗಿ, ತಿಳಿದೂ ತಿಳಿದೂ ತಾವಾಗಿಯೇ ರೈಲುಗಳಲ್ಲಿ ಪ್ರಯಾಣಿಸಿ ರೈಲ್ವೇ ಅಪಘಾತಗಳಲ್ಲಿ ಸಾವನ್ನಪ್ಪುವ ಬಹುಸಂಖ್ಯೆಯ ಪ್ರಯಾಣಿಕರನ್ನೂ ಬೇಕಾದರೆ 'ತ್ಯಾಗವೀರ' ರೆಂದು ಕರೆಯಬಹುದು.– ನಮ್ಮ ದೇಶದಲ್ಲಿ ಇಂತಹ ಪ್ರಯಾಣಿಕರ ಸಾವಿನ ಸಂಖ್ಯೆ ಸೈನಿಕರ ಸಾವಿಗಿಂತ ನಾಲ್ಕುಪಟ್ಟು ಹೆಚ್ಚು. ಯಾವೊಬ್ಬ ಕವಿಯೂ ಇಂತಹ ನತದೃಷ್ಟರಿಗಾಗಿ ಕವಿತೆ ಬರೆಯುವುದಿಲ್ಲ. ನಮ್ಮ ಯಾವ ಗಾನಕೋಗಿಲೆಗಳೂ ಇಂಥವರಿಗಾಗಿ ಆತಂಕಪಟ್ಟು ಉಲಿಯುವುದಿಲ್ಲ. ಯಾವ ನಾಟ್ಯಸರಸ್ವತಿಯರೂ ಇಂತಹ ಅವಘಡದ ಪ್ರದೇಶಗಳಿಗೆ ಭೇಟಿಕೊಡುವುದಿಲ್ಲ. ಯಾವನೇ ರಣಶೀಘ್ರ ಸಂಗೀತನಿರ್ದೇಶಕನೂ ಈ ಬಡಪಾಯಿಗಳಿಗಾಗಿ ಮರುಗಿ ಶ್ರದ್ಧಾಂಜಲಿ ಸಲ್ಲಿಸಲು ತನ್ನ ನೀಳಕೇಸರಗಳನ್ನು ಅದುರಿಸಿದ್ದಿಲ್ಲ.

ಭರತಬಾಲಾರ ಗಣರಾಜ್ಯದಿನದ ಕೊಡುಗೆ 'ದೇಶ್ ಕಾ ಸಲಾಮ್' ನಮ್ಮ ಸಂಗೀತವನ್ನು ರಣೋಗ್ರವಾಗಿಸುತ್ತಿರುವುದಕ್ಕೆ ಒಂದು ಅಸಹ್ಯ ಉದಾಹರಣೆ. ಅದು ಬಾಬ್ ಫಾಸ್ಸ್ ಫಿಲ್ಮ್ 'ಕ್ಯಾಬೆರೆ' ಯ ಒಂದು ಸನ್ನಿವೇಶವನ್ನು ತಣ್ಣಗೆ ನೆನಪಿಸುವಂತಿತ್ತು. ಆ ಫಿಲ್ಮಿನಲ್ಲಿ 'ಟುಮಾರೋ ಬಿಲಾಂಗ್ಸ್ ಟು ಮಿ' ಎಂಬ ಜರ್ಮನಿಯ ಒಂದು ಮೋಹಕ ಹಳ್ಳಿಹಾಡು ಚಾಣಾಕ್ಷತೆಯಿಂದ ಜಾಗೃತೆಯಾಗಿ ಥಟ್ಟನೆ ಕರ್ಣಕಠೋರವಾಗಿ ರೂಪಾಂತರಗೊಂಡು ಗಡಸುಕಾಲಿನ ನಾಜಿ ಸೈನಿಕರ ಮುಗಿಯದ ಮಿಲಿಟರಿ ಮಾರ್ಚ್‌ಗೆ ಹಿನ್ನೆಲೆಯಾಗುತ್ತದೆ. ನಾವಿನ್ನೂ ಅಲ್ಲಿತನಕ ತಲುಪಿಲ್ಲ; ಆದರೂ, 'ದೇಶ್ ಕಾ ಸಲಾಮ್' ನಮ್ಮ ಕಲಾಕಾರರ ಸೈನ್ಯವನ್ನು ಭವಿಷ್ಯದಲ್ಲಿ ಹೇಗೆ ನಿರ್ಲಕ್ಷ್ಯದಿಂದ ಬಳಸಿ ನಿಯಂತ್ರಿಸಬಹುದು ಎಂಬುದಕ್ಕೆ ಒಂದು ಮುನ್ನೆಚ್ಚರಿಕೆಯೆಂದು ಪರಿಗಣಿಸಬೇಕು. ಈ ಸಂದರ್ಭದಲ್ಲೂ ಕೂಡ, ಮತ್ತೊಮ್ಮೆ, ಲತಾ ಮಂಗೇಶ್ಕರ್ ಅವರಿಗೆ ಭಾರತೀಯ ಸಂಗೀತದ – ಶಾಸ್ತ್ರೀಯ, ಸುಗಮ ಹಾಗೂ ಜಾನಪದ – ಹನ್ನೆರಡು ಮಂದಿ ಉನ್ನತಮಟ್ಟದ ಗಾಯಕ-ಗಾಯಕಿಯರನ್ನು ಕೊಟ್ಟು, ಅನಿರೀಕ್ಷಿತವಾಗಿ 'ಜನಗಣಮನ' ವನ್ನು ಆಯುಧವಾಗಿ ಬಳಸಿ, ಕಾಶ್ಮೀರದ ನಿಯಂತ್ರಣರೇಖೆಯಲ್ಲಿನ ವೈರಿಗಳ ಮೇಲೆ ಸಾಮೂಹಿಕ ಆಕ್ರಮಣ ನಡೆಸಲಾಯಿತು.

ಲಡಾಕ್ ನ ಗಡಿಪ್ರದೇಶದ ಬಂಡೆಗುಡ್ಡಗಳ ಪರ್ವತಶ್ರೇಣಿಯ ಹಿನ್ನೆಲೆಯಲ್ಲಿ

ತ್ರಿವರ್ಣವಿನ್ಯಾಸದಲ್ಲಿ ಅಂಗಭಂಗಿಗಳ ಪೋಸುಕೊಡುವ ನಮ್ಮ ಸಂಗೀತಗಾರರ ಕೂಟವು ನಿಜವಾಗಿಯೂ ಆ ತಟಸ್ಥವಲಯದಲ್ಲಿ ಒಳನುಗ್ಗಿಬಂದ ಅನ್ಯದೇಶದ ಸಿಪಾಯಿಗಳಂತೆ ಕಂಡುಬರುತ್ತಿದ್ದರು. ಬಹುಶಃ, ಈಯೆಲ್ಲ ಪಂಡಿತ್ - ವಿದ್ವಾನ್ - ಉಸ್ತಾದರುಗಳು ತಮ್ಮ ರಣಸಂಗೀತವನ್ನು ಕಿರಲುತ್ತಿರುವಾಗ ಅವರಿಗೆ ಖಾಕಿ ಉಡುಪು ತೊಡಿಸಿದ್ದರೆ ಇನ್ನೂ ಹೆಚ್ಚು ಒಪ್ಪುವಂತಿತ್ತು. ಮತ್ತೊಮ್ಮೆ, ಮಾಸ್ಟರ್ ಸಿಂಕೋಪೇಟರ್ (ವಿಪರ್ಯಯ ಸಂಯೋಜಕ) ಎ.ಆರ್. ರೆಹಮಾನ್ ಹೈಬ್ರಿಡ್ - ಡಿಸ್ಕೋ - ರಾಷ್ಟ್ರೀಯತೆಯ ತನ್ನ ಹೊಸ ಅವತಾರದಲ್ಲಿ ವಿಜೃಂಭಿಸುತ್ತಾನೆ. ಆತನ 'ವಂದೇ ಮಾತರಂ', 'ಜನಗಣಮನ' .....ಮತ್ತು 'ಆಯಿ ಮೇರೆ ವತನ್ ಕೆ ಲೋಗೋಂ' ಹಾಡುಗಳು – ಅಬ್ಬರದ ದೇಶಾಭಿಮಾನದ ಸೂಪರ್ ಮಾರ್ಕೆಟಿನಲ್ಲಿ ಯಶಸ್ವೀ ವಿತರಣೆಗಾಗಿ – ಜನಪ್ರಿಯ ದೇಶಭಕ್ತಿಯ ಝಣತ್ಕೃತಿಗಳೊಂದಿಗೆ ಕೈಕಾಲುಗಳ ಮಣಿತ - ಬಡಿತ ಗಳನ್ನು ಸಮನ್ವಯಗೊಳಿಸಿದ ಏಕತಾನದಲ್ಲಿ ಏಕರೂಪದಲ್ಲಿ ಮೊಳಗುತ್ತವೆ ಅದುರುತ್ತವೆ ಉರುಳುತ್ತವೆ.

ಕಳೆದ ಕೆಲವು ತಿಂಗಳುಗಳಿಂದ ಇಂತಹ ಹಲವು ಬೇಸರದ ಸಂಗತಿಗಳನ್ನು ಉದಾಹರಿಸಬಹುದು. ಪ್ರಸಿದ್ಧ ಚಿತ್ರಕಲಾವಿದರೊಬ್ಬರು ಆರ್ಟಿಸ್ಟ್ ಕ್ಯಾಂಪಿನಲ್ಲಿ ಕಾರ್ಗಿಲ್ ನಿಧಿಗಾಗಿ ಹಣಸಂಗ್ರಹಿಸುತ್ತಿರುವಾಗ ಸಂದರ್ಶಕರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ, ತನ್ನ ಎಂದಿನ ಅಮೂರ್ತ ಭೂಹಿನ್ನೆಲೆಯೆದುರು ಕದನನಿರತ ಕಾರ್ಗಿಲ್ ಸೈನಿಕರ ತಾಣದಲ್ಲಿ ತ್ರಿವರ್ಣಧ್ವಜದ ಕಾಮನಬಿಲ್ಲನ್ನು ಚಿತ್ರಿಸಲು ತನಗೆ ಸ್ಫೂರ್ತಿ ಯುಂಟಾಯಿತು ಎಂದು ಹೇಳುತ್ತಾರೆ. ಚೆನ್ನೈನಲ್ಲಿ 'ಕರ್ನಾಟಕ ಸಂಗೀತಗಾರರ ಕಾರ್ಗಿಲ್ ನಿಧಿ ಟ್ರಸ್ಟ್' ನಿಧಿಸಂಗ್ರಹಕ್ಕಾಗಿ 'ಬ್ರೇವೋ ಭಾರತೀಯ ಜವಾನ್' ಎಂಬ ಸಂಗೀತ ಸಂಜೆಯನ್ನು ಏರ್ಪಡಿಸುತ್ತದೆ. ಖ್ಯಾತ ಸಂಗೀತವಿದುಷಿಯೊಬ್ಬರು ತಮ್ಮ ಹಾಡುಗಾರಿಕೆಯ ಕೊನೆಯಲ್ಲಿ ಪಾಕಿಸ್ತಾನದ ವಿರುದ್ಧ ಭಾರತೀಯ ವಿಜಯಕ್ಕಾಗಿ ರಣೋಗ್ರವಾದ ಕರೆ ಕೊಡುತ್ತಾರೆ. ದೆಹಲಿಯಲ್ಲಿನ ಅತ್ಯುಚ್ಚ ಶ್ರೇಣಿಯ ಶಾಸ್ತ್ರೀಯ ನೃತ್ಯಗಾರರು 'ಕಾರ್ಗಿಲ್ ನೃತ್ಯ'ಗಳನ್ನು ನೀಡುತ್ತಿದ್ದಾರೆ. ಈ ಸಾಲು ಹೀಗೆ ಬೆಳೆಯುತ್ತಲೇ ಹೋಗುತ್ತದೆ.

ಬೃಹತ್ತಾದ ನಮ್ಮ ಕಲಾಸಮುದಾಯದಲ್ಲಿ ಯಾವನೂ/ಳೂ ಕಲೆಯ ಏಕಮಾತ್ರ 'ಶತ್ರು' ವಾದ 'ಯುದ್ಧ' ದ ಹುಚ್ಚಿನ ವಿರುದ್ಧವೇ ತಾನು ದನಿಯೆತ್ತಿ ಪ್ರತಿಭಟಿಸಬೇಕಾಗಿದೆಯೆಂದು ಯೋಚಿಸಲಿಲ್ಲ. ನಾಗರಿಕತೆಯ ಕಾಪಿನ ಮುಂಚೂಣಿ ಗಳೆಂದು ಕರೆಸಿಕೊಳ್ಳುವ ನಮ್ಮೀ ಗಣ್ಯಸಮುದಾಯದಿಂದ ಒಬ್ಬ ವ್ಯಕ್ತಿಯೂ ಯುದ್ಧದಂತಹ ಅನಾಗರಿಕ ನಡತೆಯ ವಿರುದ್ಧ ದನಿಯೆತ್ತುವಾಗ – ಭಾರತೀಯ



ಕಲಾವಿದರು ಗಡಿಯಾಚೆಗಿನ ಪಾಕಿಸ್ತಾನಿ ಕಲಾವಿದರೊಡನೆ ಕೈಜೋಡಿಸಿ ಯುದ್ಧದ ನಿಲುಗಡೆಯ ಕುರಿತು ಏಕತ್ರವಾಗಿ ಒತ್ತಾಯಪಡಿಸಬಹುದೆಂದು ಆಲೋಚಿಸಿದಂತೆ ಕಾಣುವುದಿಲ್ಲ. ನಮ್ಮ ಕಲಾವಿದರು ನಮ್ಮದೇ ಪರಂಪರೆಯ ಉನ್ನತ ಮೌಲ್ಯದ ಮಾನವೀಯ ತತ್ವಚಿಂತನೆಗಳಿಂದಾಗಲೀ ಅಥವಾ ಇಪ್ಪತ್ತನೇ ಶತಮಾನದ ಪ್ರಮುಖ ಶಾಂತಿಚಳುವಳಿಗಳಿಂದಾಗಲೀ ಪ್ರಭಾವಿತರಾಗುವಂತೆಯೂ ಕಾಣುವುದಿಲ್ಲ. ಬದಲಿಗೆ, ಅವರು ಸುಲಭವಾಗಿ ಮತ್ತು ಅಷ್ಟೇ ಶೀಘ್ರವಾಗಿ ದ್ವೇಷ ಮತ್ತು ಕ್ಷಾತ್ರ ಪ್ರವೃತ್ತಿಗಳ ಅಡಿಯಾಳುಗಳಾಗಿ ಜಯಘೋಷ ಮಾಡಿ ಯುದ್ಧೋದ್ರೇಜನಗೈಯುವ ಉಲ್ಲಾಸಿ - ನಾಯಕರಾಗುತ್ತಾರೆ.

ಪಾಬ್ಲೋ ಪಿಕಾಸೋನ ೧೯೩೭ರ ಮಹಾಕೃತಿ 'ಗೆರ್ನಿಕಾ' ದಲ್ಲಿನ ಯುದ್ಧದ ಭಯಾನಕತೆಯ ಬಗೆಗಿನ ಆತಂಕದ ಕೂಗು ನಮ್ಮ ಕಲಾವಿದರನ್ನು ತಟ್ಟಿದಂತಿಲ್ಲ; ಅಥವಾ ಜಗತ್ತಿನ ಯಾವುದೇ ಮೂಲೆಯ ಸೃಜನಶೀಲ ಅಭಿವ್ಯಕ್ತಿಗಳ ದನಿ ಕೇಳಿಸುತ್ತಿಲ್ಲ. ಠಾಕೂರ್ - ಟಾಲ್‌ಸ್ಟಾಯ್- ಘಟಕ್- ಪ್ರೇಮ್‌ಚಂದ್- ಮಯಕೋವಸ್ಕಿ - ಬಷೀರ್- ಬ್ರೆಖ್ಟ್ ಯಾರೂ ಇವರ ಹತ್ತಿರ ಸುಳಿದಂತೆ ಕಾಣುವುದಿಲ್ಲ. ನಮ್ಮ ಕಲಾ ಸಮುದಾಯದವರನ್ನು ತಾಯ ಹಾಲಿನಿಂದ ಬಿಡಿಸಿ 'ಅಧಿಕಾರ' ಮತ್ತು 'ಆಕ್ರಮಣ' ಗಳ ಕಡೆಗೆ ಸೆಳೆದೊಯ್ದ ಪೇಯವಾದರೂ ಯಾವುದು? ಪ್ರಾಯಶಃ, ನಮ್ಮ ಪ್ರಖ್ಯಾತ ಭರತನಾಟ್ಯ ಕಲಾವಿದೆಯೊಬ್ಬರು ಹಿಂದೆ ತುರ್ತುಪರಿಸ್ಥಿತಿಯ ಕಾಲದಲ್ಲಿ 'ಇಪ್ಪತ್ತು ಅಂಶ ಕಾರ್ಯಕ್ರಮ'ಗಳಿಗಾಗಿ ನೃತ್ಯವಾಡಿದಾಗ ಕೇಳುಗರೊಬ್ಬರ ಪ್ರಶ್ನೆಗೆ, ''ಅದರಲ್ಲೇನು ತಪ್ಪಿದೆ? ಆಳುವವರನ್ನು ಮೆಚ್ಚಿಸುವುದೇ ಹಿಂದಿನಿಂದಲೂ ನಮ್ಮ ಸಂಪ್ರದಾಯವಲ್ಲವೆ?'' ಎಂದು ಉತ್ತರಿಸಿದ್ದರು; ಹಾಗೆಯೆ ಇದೂ ಕೂಡ? 'ಸಂಪ್ರದಾಯ' ಅಥವಾ 'ಪರಂಪರೆ' ಯ ಅತ್ಯಂತ ಮೂಲಭೂತ ವ್ಯಾಖ್ಯಾನ – ಅಲ್ಲವೆ?

ಬಾವುಟ ಹಿಡಿದು ಕುಣಿವ ಧ್ವಜಲೀಲೆಗಳಂತಹ ಜನಪ್ರಿಯ ಚಿಲ್ಲರೆಗಳಲ್ಲಿ ತೊಡಗಿಕೊಳ್ಳದಿದ್ದಲ್ಲಿ ಯಾರೂ ನಮ್ಮ ಕಲಾಬಳಗದ ದೇಶಪ್ರೇಮದ ರುಜುವಾತು ಗಳನ್ನು ಪ್ರಶ್ನಿಸುತ್ತಿರಲಿಲ್ಲ. ನಿಜವಾಗಿಯೂ, ಅವರು ಸಮರ್ಥನೆಗೆ ಅನರ್ಹವಾದ ಯುದ್ಧದ ಪರವಾಗಿ ಕಹಳೆಯೂದುವುದರ ಬದಲಾಗಿ – ಇಂತಹ ಸಂದರ್ಭಗಳಲ್ಲಿ ಅತ್ಯವಶ್ಯವಾದ – ಜನರು ಮತ್ತು ಮಾಧ್ಯಮಗಳ ನಡುವೆ ಶಾಂತಿ - ಸಮಾಧಾನ - ಸಂಯಮಗಳ ಪರವಾಗಿ ಚರ್ಚಿಸಿ ಒತ್ತಾಯಿಸಿದ್ದರೆ, ಅವರ ಸೇವೆ ಸೂಕ್ತವಾಗಿರುತ್ತಿತ್ತು. ಯುದ್ಧಕ್ಕೆ ಪರವಾದ ಕಲಾತ್ಮಕ ಅನುಮೋದನೆಯ ತುಡಿತಗಳು ಸ್ವತಃ ಮಾರಿಕೊಳ್ಳುವ ಅಗತ್ಯಗಳಿಂದ ಹುಟ್ಟಿದವೆನ್ನುವುದು ಸ್ಪಷ್ಟ. ಒಬ್ಬ ತನ್ನನ್ನು ತಾನೇ ಮಾರಿಕೊಳ್ಳಲು ಯುದ್ಧದಂತಹ ಸೂಕ್ತಕಾಲ ಬೇರೊಂದಿಲ್ಲ.

ಸಾಚಾ ಕಲಾತ್ಮಕ ಮನೋಧರ್ಮ ಮಾತ್ರ ಯುದ್ಧ ಮತ್ತು ಹಿಂಸೆಗಳನ್ನು ವಿರೋಧಿಸಬಲ್ಲದು ಎನ್ನುವುದನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ. ಸಂಪೂರ್ಣ ಹತಾಶೆಯ ಸನ್ನಿಕೆರಳಿದ ಸಂದರ್ಭದಲ್ಲಿ ಮಾತ್ರ ಅದು ತನ್ನ ಸ್ತಿಮಿತ ಕಳೆದುಕೊಳ್ಳಬಹುದು. ಇಲ್ಲವಾದಲ್ಲಿ, ಯುದ್ಧಕಾಲದಲ್ಲಿ ಅರಳಬಹುದಾದ ನಿಜವಾದ ಕಲಾಕೃತಿಯೆಂದರೆ ಸಾತ್ವಿಕ-ನಿಗ್ರಹ ಮತ್ತು ಭರವಸೆಗಳಿಗೆ ಪ್ರತೀಕವಾಗಬಲ್ಲಂಥವು. ಕೊನೆಯಪಕ್ಷ, ಅದು ಹೊಸ್ತಿಲಿನೊಳಗೆ ನುಗ್ಗಿ ಆವರಿಸುವ ಕತ್ತಲೆಯಲ್ಲಿ ಆಕಾಶದೆತ್ತರ ಮಿಂಚುವ ಒಂದು ಧೈರ್ಯದ ಮಿನುಗುಕಿಡಿಯಾದರೂ ಆಗಬೇಕು.

(ಕೃಪೆ : ದಿ ಹಿಂದೂ, ಸೆಪ್ಟೆಂಬರ್ ೨೭, ೧೯೯೯ )

ಪ್ರಕಟಣೆ

## ಬಿ.ಎಂ.ಶ್ರೀ. ಕಾವ್ಯ ಪ್ರಶಸ್ತಿ

- ☐ ಶ್ರೀಮತಿ ಕಮಲಾ ಬಾಲುರಾವ್ ಮತ್ತು ಶ್ರೀ ಶಾ. ಬಾಲುರಾವ್ ಅವರು ಇಟ್ಟ ಇಡುಗಂಟಿನಿಂದ ಈ ಪ್ರಶಸ್ತಿಯನ್ನು ಕೊಡಲಾಗುತ್ತಿದೆ.
- ☐ ಅಕ್ಷರ ಪ್ರಕಾಶನವು ಈ ಪ್ರಶಸ್ತಿಯ ನಿರ್ಧಾರ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದೆ.
- ☐ ಈ ಪ್ರಶಸ್ತಿಯು ಪ್ರಸ್ತುತ ವರ್ಷದಲ್ಲಿ ಪ್ರಕಟವಾದ **ಹೊಸ ಬರಹಗಾರರೊಬ್ಬರ ಮೊದಲ ಕವನಸಂಗ್ರಹಕ್ಕೆ** ಮೀಸಲಾಗಿದೆ.
- ☐ ಪ್ರತಿ ವರ್ಷ ಜನವರಿಯಿಂದ ಡಿಸೆಂಬರ್‌ನೊಳಗೆ ಪ್ರಕಟವಾದ ಕವನ ಸಂಗ್ರಹಗಳ ಸಮೀಕ್ಷೆಯ ಮೂಲಕ ತಜ್ಞರ ಸಮಿತಿಯೊಂದು ಪ್ರಶಸ್ತಿಯನ್ನು ನಿರ್ಧರಿಸುತ್ತದೆ.
- ☐ ಪ್ರಶಸ್ತಿಯ ಮೊತ್ತ **ರೂ. ೫೦೦೦** ನಗದು.
- ☐ ಪ್ರಶಸ್ತಿ ವಿಜೇತರನ್ನು ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ ಪ್ರಮುಖ ಸಮಾರಂಭವೊಂದರಲ್ಲಿ ಪುರಸ್ಕರಿಸಿ ಅಲ್ಲಿ ಆಹ್ವಾನಿತ ಪ್ರೇಕ್ಷಕರೆದುರು ಅವರ ಕಾವ್ಯವಾಚನದ ಕಿರು ಕಾರ್ಯಕ್ರಮವನ್ನೂ ಏರ್ಪಡಿಸಲಾಗುತ್ತದೆ.
- ☐ ಮೊದಲ ಪ್ರಶಸ್ತಿಯನ್ನು ಅಕ್ಟೋಬರ್ ೨೦೦೦ದಲ್ಲಿ ಕೊಡಲಾಗುತ್ತದೆ.
- ☐ ಪ್ರಶಸ್ತಿಯ ಪರಿಗಣನೆಗಾಗಿ ಲೇಖಕರು, ಪ್ರಕಾಶಕರು, ವಿಮರ್ಶಕರು ಮತ್ತು ಯಾವುದೇ ಸಂಸ್ಥೆ ಕೃತಿಗಳನ್ನು ಸೂಚಿಸಬಹುದು. ಆಯ್ಕೆ ಸಮಿತಿಯು ಹಾಗೆ ಸೂಚಿತವಾದವುಗಳಲ್ಲದೆ ಪ್ರಕಟವಾದ ಎಲ್ಲಾ ಕೃತಿಗಳನ್ನೂ ಸಾಧ್ಯವಾದ ಮಟ್ಟಿಗೂ ಪರಿಶೀಲಿಸುತ್ತದೆ.

# ತಿರುಗಾಟ :
# ರಂಗಸಂಸ್ಕೃತಿಯ ನಿರ್ಮಾಣದ ತುಡಿತ

ಎ.ಆರ್.ನಾಗಭೂಷಣ

ಎಲ್ಲ ರಂಗಾಸಕ್ತರು ಬಲ್ಲಂತೆ ಹೆಗ್ಗೋಡಿನ ನೀನಾಸಮ್ ಕಳೆದ ಹದಿನಾಲ್ಕು ವರ್ಷಗಳಿಂದ ತಿರುಗಾಟವನ್ನು ನಡೆಸಿಕೊಂಡು ಬರುತ್ತಿದೆ. ಈ ಅವಧಿಯಲ್ಲಿ ಕರ್ನಾಟಕದ ಎಲ್ಲ ಭಾಗಗಳಿಗೆ ವಿವಿಧ ಬಗೆಯ ನಲವತ್ತೊಂಬತ್ತು ನಾಟಕಗಳನ್ನು ತೆಗೆದುಕೊಂಡು ಹೋಗಿ ಪ್ರದರ್ಶಿಸಿದೆ. ಒಂದು  ರಂಗಚಟುವಟಿಕೆ ಇಷ್ಟು ವರ್ಷ ನಿಯತವಾಗಿ ಸಾಗುತ್ತಾ ಬಂದಿರುವುದು ನಿಜಕ್ಕೂ ಸಾಂಸ್ಕೃತಿಕವಾಗಿ ಮಹತ್ವದ ವಿಚಾರ . ಇಷ್ಟೂ ವರ್ಷಗಳ ಉದ್ದಕ್ಕೂ ಗುಣಮಟ್ಟವನ್ನು ಕಾಯ್ದುಕೊಳ್ಳುವ ಬಗ್ಗೆ  ನೀನಾಸಮ್ ಎಚ್ಚರದಿಂದಿರುವುದು ಕೂಡಾ ಒಂದು ಮುಖ್ಯವಾದ ಸಂಗತಿ.

ನನಗನ್ನಿಸುವಂತೆ ತಿರುಗಾಟದ ಪ್ರಮುಖ ಸಾಧನೆಗಳು ಐದು.ಮೊದಲನೆಯದಾಗಿ, ದೊಡ್ಡ ನಗರಗಳು ಮತ್ತು ಜಿಲ್ಲಾ ಕೇಂದ್ರಗಳಲ್ಲಷ್ಟೇ ಅಲ್ಲದೆ ಸಣ್ಣ  ಊರುಗಳಲ್ಲಿಯೂ ತಿರುಗಾಟ ಹೆಜ್ಜೆ ಊರಿದೆ. ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡಗಳ ಜೊತೆಜೊತೆಗೆ ಹಾಸನದ ರಕ್ಷಿದಿ, ಉಡುಪಿಯ ಶಿರ್ವ, ಗುಲಬರ್ಗದ ಮಳಖೇಡ, ಮಂಡ್ಯದ ಅರಳಕುಪ್ಪೆ ಮುಂತಾದೆಡೆಗಳಲ್ಲಿಯೂ ತಿರುಗಾಟದ ಪ್ರಯೋಗಗಳಾಗಿವೆ. ಹೀಗೆ ಕರ್ನಾಟಕದ ಎಲ್ಲ ದಿಕ್ಕುಗಳಿಗೆ, ಎಲ್ಲ ಬಗೆಯ ಊರುಗಳಿಗೆ ತಿರುಗಾಟದ ಚಟುವಟಿಕೆಗಳು ತಲುಪಿವೆ.

ಎರಡನೆಯದಾಗಿ, ತಿರುಗಾಟದ ನಾಟಕಗಳ  ಆಯ್ಕೆಯಲ್ಲಿ ತುಂಬ ವೈವಿಧ್ಯವಿದೆ. ಪ್ರಪಂಚದ ಬಹುತೇಕ ಪ್ರಮುಖ ನಾಟಕಕಾರರು ತಿರುಗಾಟದ ಮೂಲಕ ಕನ್ನಡ ರಂಗಭೂಮಿಯ ಸದಸ್ಯರಾಗಿದ್ದಾರೆ. ಭಾಸ, ಕಾಲಿದಾಸ, ಶೂದ್ರಕ, ವಿಶಾಖದತ್ತರು ಒಂದು ದಿಕ್ಕಿನಿಂದ, ಯೂರಿಪಿಡೀಸ್, ಷೇಕ್ಸ್ ಪಿಯರ್, ಮೋಲಿಯೇರ್, ಗಾರ್ಕಿ, ಗೊಗೋಲ್, ಬ್ರೆಖ್ಟ್  ಇವರೆಲ್ಲ ಇನ್ನೊಂದು ದಿಕ್ಕಿನಿಂದ, ಸಂಸ, ಬೇಂದ್ರೆ, ಪುತಿನ, ಕಾರ್ನಾಡ್, ಕಂಬಾರರು ಮತ್ತೊಂದು ದಿಕ್ಕಿನಿಂದ ಬಂದು ಒಟ್ಟಾಗಿ ಸೇರಿದ್ದಾರೆ. ಇವರೆಲ್ಲರ ನಾಟಕಗಳು ಕನ್ನಡ ನಾಟಕ ಸಾಹಿತ್ಯದ ಮತ್ತು ರಂಗ ಭೂಮಿಯ ಒಂದು ಭಾಗವಾಗಿವೆ.

ಮೂರನೆಯದಾಗಿ, ಸಾಮಾನ್ಯವಾಗಿ ಪ್ರತೀವರ್ಷ ತಮ್ಮ ಒಂದೊಂದು ಪ್ರಯೋಗಗಳನ್ನು ನೀಡುವ ಚಿದಂಬರರಾವ್ ಜಂಬೆ ಮತ್ತು ಅಕ್ಷರ ಅವರ ಜೊತೆಗೆ ಇತರ ಅನೇಕ ನಿರ್ದೇಶಕರನ್ನು ತಿರುಗಾಟ ಆಹ್ವಾನಿಸಿದೆ. ಬೆನೆವಿಟ್ಸ್, ಕಾರಂತ, ಪ್ರಸನ್ನ, ರಘುನಂದನ, ಕೃಷ್ಣಮೂರ್ತಿ ಮುಂತಾದ ಹಲವಾರು ನಿರ್ದೇಶಕರು ತಿರುಗಾಟಕ್ಕಾಗಿ ಪ್ರಯೋಗಗಳನ್ನು ಸಿದ್ಧಪಡಿಸಿದ್ದಾರೆ. ವಿವಿಧ ಬಗೆಯ ದೃಷ್ಟಿಕೋನ ಮತ್ತು ಶೈಲಿಗಳಿಂದ ಇವರೆಲ್ಲ ಕನ್ನಡ ರಂಗಭೂಮಿಯನ್ನು ಗಟ್ಟಿಗೊಳಿಸಿದ್ದಾರೆ. ಜೊತೆಗೆ, ಪ್ರೇಕ್ಷಕರಿಗೆ ವಿಭಿನ್ನ ಸ್ವರೂಪದ ಅನುಭವಗಳನ್ನೂ ಚಿಂತನೆಗಳನ್ನೂ ದೊರಕಿಸಿಕೊಟ್ಟಿದ್ದಾರೆ. ಇವರ ಗೋಕುಲ ನಿರ್ಗಮನ, ಸೆಜುವಾನ್ ನಗರದ ಸಾಧ್ವಿ, ಪ್ರತಿಮಾ ನಾಟಕ, ಹೊಸ ಸಂಸಾರ, ಆಲೀಬಾಬ, ಆಷಾಢದ ಒಂದುದಿನ, ತಲೆದಂಡ ಮುಂತಾದ ಪ್ರಯೋಗಗಳು ಪ್ರಬಲವಾದ ಹೆಜ್ಜೆಗುರುತುಗಳನ್ನು ಮೂಡಿಸಿವೆ.

ಕನ್ನಡ ರಂಗಭೂಮಿಗೆ ವೃತ್ತಿಪರತೆಯನ್ನೂ ವ್ಯವಸಾಯೀ ಶಿಸ್ತನ್ನೂ ತಂದುಕೊಟ್ಟಿರುವುದು ತಿರುಗಾಟದ ನಾಲ್ಕನೆಯ ಸಾಧನೆ. ಹವ್ಯಾಸಿ ತಂಡಗಳು ನಮ್ಮ ರಂಗಭೂಮಿಯನ್ನು ಒಂದುರೀತಿಯಿಂದ ಬೆಳೆಸುತ್ತಾ ಬಂದಿದ್ದರೆ, ತಿರುಗಾಟ ತನ್ನ ಶಿಸ್ತು ಮತ್ತು ಅಚ್ಚುಕಟ್ಟುತನಗಳಿಂದ ರಂಗಭೂಮಿಯನ್ನು ಸದೃಢಪಡಿಸುತ್ತಿದೆ.

ಗಮನಿಸಲೇಬೇಕಾದ ಐದನೆಯ ಸಾಧನೆ ಎಂದರೆ, ತಿರುಗಾಟದ ಪ್ರಯೋಗಗಳಲ್ಲಿ ಒರಟೊರಟಾದ ಕ್ರಾಂತಿಕಾರಕತೆಯಾಗಲೀ ಜಡ್ಡುಗಟ್ಟಿದ ಪ್ರತಿಗಾಮಿತನವಾಗಲೀ ಇರುವುದಿಲ್ಲ. ಹಾಗೆಯೇ, ಒಣಗಿದ ಅತಿಬೌದ್ಧಿಕತೆಯಾಗಲೀ ಅರ್ಥಹೀನ ಜನರಂಜನೆಯಾಗಲೀ ಇರುವುದಿಲ್ಲ. ಸಾಮುದಾಯಿಕ ಬದುಕನ್ನೂ ವ್ಯಕ್ತಿಯ ಅಂತರಂಗವನ್ನೂ ಶೋಧಿಸುವ ಪ್ರಯೋಗಗಳೇ ತಿರುಗಾಟದಲ್ಲಿ ಹೆಚ್ಚಾಗಿವೆ.

ಮೇಲಿನ ಎಲ್ಲ ಕಾರಣಗಳಿಂದಾಗಿ, ಕನ್ನಡ ರಂಗಭೂಮಿಯ ಮೇಲೆ ತಿರುಗಾಟದ ಪ್ರಭಾವ ಎರಡು ರೀತಿಗಳಲ್ಲಿ ಆಗುತ್ತಿರುವುದು ಸ್ಪಷ್ಟವಾಗಿದೆ. ಒಂದು, ಅನೇಕ ರಂಗಕರ್ಮಿಗಳಿಗೆ ರೆಪರ್ಟರಿಗಳನ್ನು ಕಟ್ಟುವ ಉತ್ಸಾಹ, ಆಸಕ್ತಿಗಳನ್ನು ಮೂಡಿಸಿದೆ. ಕೆಲವರು ಈಗಾಗಲೇ ರೆಪರ್ಟರಿಗಳನ್ನು ಕಟ್ಟಿ ಕಾರ್ಯಮಗ್ನರಾಗಿದ್ದಾರೆ. ಎರಡು, ಅನೇಕ ರಂಗತಂಡಗಳು ತಮ್ಮ ತಮ್ಮ ಪ್ರಯೋಗಗಳಲ್ಲಿ ಮೌಲಿಕತೆಯನ್ನೂ ರಂಗಶಿಸ್ತನ್ನೂ ಹೆಚ್ಚುಹೆಚ್ಚಾಗಿ ಮೈಗೂಡಿಸಿಕೊಳ್ಳುತ್ತಿವೆ.

ಈ ಹದಿನಾಲ್ಕು ವರ್ಷಗಳಲ್ಲಿ ತಿರುಗಾಟದ ಎಲ್ಲ ಪ್ರಯೋಗಗಳು ಒಂದೇ ಮಟ್ಟದಲ್ಲಿವೆ ಎಂದರೆ ಉತ್ಪ್ರೇಕ್ಷೆಯ ಮಾತಾದೀತು. ಪ್ರಯೋಗಗಳ ಗುಣಮಟ್ಟ ಅನೇಕ ಕಾರಣಗಳಿಂದ ಏರುಪೇರಾಗುವುದು ಸಹಜ. ಆದರೆ ವೈವಿಧ್ಯಮಯವಾದ ಪ್ರಯೋಗಗಳ ಮೂಲಕ ಹೊಸಹೊಸ ಅನುಭವಗಳನ್ನು ಶೋಧಿಸುತ್ತಾ ಅವನ್ನು



ಪ್ರೇಕ್ಷಕರಿಗೆ ಸಂವಹಿಸುತ್ತಾ ತಿರುಗಾಟ ಬೆಳೆಯುತ್ತಾ ಬಂದಿರುವುದು ಮಾತ್ರ ಸತ್ಯ. ಅರ್ಥಪೂರ್ಣ ರಂಗಸಂಸ್ಕೃತಿಯನ್ನು ನಿರ್ಮಿಸುವ ಹಂಬಲ, ಪ್ರಯತ್ನಗಳಿಂದ ವಿವಿಧ ದಿಕ್ಕುಗಳಲ್ಲಿ ಚಾಚಿಕೊಂಡಿರುವ ರಂಗಭೂಮಿಯ ಎಲ್ಲೆಗಳನ್ನು ವಿಸ್ತರಿಸುವ ಹುಡುಕಾಟದಲ್ಲಿ ತಿರುಗಾಟ ಕ್ರಿಯಾಶೀಲವಾಗಿದೆ. ಜೊತೆಜೊತೆಗೆ, ಕನ್ನಡ ರಂಗಭೂಮಿಗೆ ಚಲನಶೀಲತೆಯನ್ನು ತಂದುಕೊಟ್ಟಿದೆ.

(ಕೃಪೆ: ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ಮೈಸೂರು)

# ನೀನಾಸಮ್ ವರದಿಗಳು

## ನೀನಾಸಮ್ ರಂಗಶಿಕ್ಷಣ ಕೇಂದ್ರ

ಆಗಸ್ಟ್-ಸಪ್ಟೆಂಬರ್ ಅವಧಿಯಲ್ಲಿ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಶ್ರೀ ನಟರಾಜ ಹೊನ್ನವಳ್ಳಿಯವರ ನಿರ್ದೇಶನದಲ್ಲಿ ಶ್ರೀ ಪಿ. ಲಂಕೇಶ್ ಅವರ 'ಬಿರುಕು' ನಾಟಕದ ತಾಲೀಮು ನಡೆಸಿ ಸಪ್ಟೆಂಬರ್ ಎರಡನೇವಾರ ಪ್ರದರ್ಶಿಸಿದರು. ಸಪ್ಟೆಂಬರ್ ದ್ವಿತೀಯಾರ್ಧದಲ್ಲಿ ಎಂದಿನ ಚಟುವಟಿಕೆಗಳ ಜೊತೆಗೆ ಹಳಗನ್ನಡ ಹಾಗೂ ಆಧುನಿಕ ಕನ್ನಡ ಕಾವ್ಯ ಸಾಹಿತ್ಯಗಳ ಅಭ್ಯಾಸ-ಅವಲೋಕನ ನಡೆಸಿದರು. ಈ ಸಂದರ್ಭದಲ್ಲಿ ಕೆ.ವಿ.ಸುಬ್ಬಣ್ಣನವರು 'ಕವಿರಾಜಮಾರ್ಗ' ದ ಬಗೆಗೆ ವಿಶೇಷ ಉಪನ್ಯಾಸಗಳನ್ನು ನೀಡಿದರು. ವಿದ್ಯಾರ್ಥಿಗಳು ಅಕ್ಟೋಬರ್ ಮೊದಲವಾರ ಪಥೇರ್ ಪಾಂಚಾಲಿ, ರಶೋಮೋನ್ ಮೊದಲಾದ ಶ್ರೇಷ್ಠ ಚಲನಚಿತ್ರಗಳನ್ನು ನೋಡಿ ಚರ್ಚಿಸಿದರು. ಅಕ್ಟೋಬರ್ ೧೦ರಿಂದ ೧೭ರವರೆಗೆ ನಡೆದ ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಈ ನಡುವೆ ಸಪ್ಟೆಂಬರ್ ೨೮ರಿಂದ ಅಕ್ಟೋಬರ್ ೮ರವರೆಗೆ ಶ್ರೀ ಬಿ.ಎನ್.ನಾರಾಯಣ - ನಾಣಿ - ಯವರಿಂದ ಪ್ರಸಾಧನದ ಕುರಿತು ವಿಶೇಷ ತರಗತಿಗಳನ್ನು ನಡೆಸಲಾಯಿತು. ಅಕ್ಟೋಬರ್ ೨೦ರಿಂದ ನವೆಂಬರ್ ೧೦ರವರೆಗೆ ಶ್ರೀ ಎಂ.ಎಂ.ಕೃಷ್ಣಮೂರ್ತಿಯವರಿಂದ ಬೆಳಕಿನ ವಿನ್ಯಾಸದ ಕುರಿತು ಕಾರ್ಯಾಗಾರ ನಡೆಸಲಾಯಿತು. ನವೆಂಬರ್ ೧೪ರಂದು ಶ್ರೀ ಹೊಸಬಾಳೆ ಸೀತಾರಾಮ ರಾಯರಿಂದ ಕುಮಾರವ್ಯಾಸ ಭಾರತ ಹಾಗೂ ರನ್ನನ ಗದಾಯುದ್ಧದ ಆಯ್ದಭಾಗಗಳ ಕಾವ್ಯವಾಚನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆಗ ಶ್ರೀ ಎನ್.ಎನ್.ಮಧ್ಯಸ್ಥರು ವ್ಯಾಖ್ಯಾನಕಾರರಾಗಿ ಸಹಕರಿಸಿದ್ದರು. ಸದ್ಯ ವಿದ್ಯಾರ್ಥಿಗಳಿಗಾಗಿ ಶ್ರೀಗುರುಮೂರ್ತಿ ವರದಾಮೂಲ ಅವರ ಮಾರ್ಗದರ್ಶನದಲ್ಲಿ ಸ್ಕ್ರೀನ್ ಪ್ರಿಂಟಿಂಗ್ ತರಬೇತಿ ಹಾಗೂ ಕೆ.ವಿ.ಅಕ್ಷರ ಅವರ ನಿರ್ದೇಶನದಲ್ಲಿ ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ನಾಟಕದ ತಯಾರಿ ನಡೆಯುತ್ತಿವೆ.

# ನೀನಾಸಮ್ ಸಂಸ್ಕೃತಿ ಶಿಬಿರ ೯

ಸಂಸ್ಕೃತಿ ಶಿಬಿರ ೯ ಡಾ.ಯು.ಆರ್.ಅನಂತಮೂರ್ತಿಯವರ ನಿರ್ದೇಶನದಲ್ಲಿ ಅಕ್ಟೋಬರ್ ೧೧ರಿಂದ ೧೮ರವರೆಗೆ, ಎಂಟು ದಿನಗಳ ಕಾಲ ನಡೆಯಿತು. ಶಿಬಿರದ ಪ್ರಮುಖ ಉಪನ್ಯಾಸ- ಚರ್ಚೆಗಳು 'ಜಗತ್ತು ಮತ್ತು ಕನ್ನಡ ಜಗತ್ತು' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನಡೆದವು. ಈ ಬಾರಿ ಶಿಬಿರವನ್ನು ನಡೆಸಿಕೊಟ್ಟ ಸಂಪನ್ಮೂಲ ಅತಿಥಿಗಳು – ಶ್ರೀಯುತರಾದ ಶಮೀಕ್ ಬಂದೋಪಾಧ್ಯಾಯ, ಸದಾನಂದ ಮೆನೋನ್, ವಾಗೀಶ ಶುಕ್ಲಾ, ಕಿ.ರಂ.ನಾಗರಾಜ, ಗಿರೀಶ ಕಾಸರವಳ್ಳಿ, ರಾಜೇಂದ್ರ ಚೆನ್ನಿ, ಹೆಚ್.ಎ.ಅನಿಲ್ ಕುಮಾರ್, ಮಾಧವ ಪ್ರಸಾದ್, ಪಂ.ಗಣಪತಿ ಭಟ್ ಹಾಸಣಗಿ, ಲೀಲಾ ಸ್ಯಾಮ್ಸನ್ ಮೊದಲಾದವರು. ಭಾಗವಹಿಸಿದ ಶಿಬಿರಾರ್ಥಿಗಳ ಸಂಖ್ಯೆ – ೧೫ ಮಂದಿ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳನ್ನು ಸೇರಿಸಿ ಒಟ್ಟು – ೧೪೨.

ಕೆ.ವಿ.ಸುಬ್ಬಣ್ಣನವರಿಂದ ಸ್ವಾಗತ ಹಾಗೂ ಯು.ಆರ್.ಅನಂತಮೂರ್ತಿ ಅವರ ಪ್ರಸ್ತಾವನೆಯಿಂದ ಪ್ರಾರಂಭವಾದ ಶಿಬಿರವು ಶ್ರೀ ಶಮೀಕ್ ಬಂದೋಪಾಧ್ಯಾಯರ ಸಮಾರೋಪ ಭಾಷಣದೊಡನೆ ಮುಕ್ತಾಯವಾಯಿತು. ಒಟ್ಟು ಎಂಟೂ ದಿನಗಳಲ್ಲಿ – ಕನ್ನಡ ಚಿಂತನದ ಕುರಿತು ಡಾ.ರಾಜೇಂದ್ರ ಚೆನ್ನಿ, ದ್ರಾವಿಡ ಚಳುವಳಿಯ ಕುರಿತು ಸದಾನಂದ ಮೆನೋನ್, ಭಾರತೀಯ ಭಾಷೆಗಳ ಕಲ್ಪನೆಯ ಬಗೆಗೆ ಡಾ.ವಾಗೀಶ ಶುಕ್ಲಾ, ದಾರಿಯೋ ಫೋನ ರಂಗಮಾರ್ಗ, ಬಂಗಾಳಿ ಅಸ್ಮಿತೆ ಮತ್ತು ಸಾಹಿತ್ಯಮಾರ್ಗ, ರವೀಂದ್ರನಾಥ ಠಾಕೂರ್ ಅವರ ಕಲಾಹಿನ್ನೆಲೆ ಮುಂತಾದ ವಿಷಯಗಳ ಕುರಿತು ಶಮೀಕ್ ಬಂದೋಪಾಧ್ಯಾಯ,ಕನ್ನಡಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಕಲ್ಪನೆಯ ಬಗೆಗೆ ಕಿ.ರಂ.ನಾಗರಾಜ, ಕರ್ನಾಟಕ ಚಿತ್ರಕಲೆಯ ಬಗೆಗೆ ಅನಿಲ್ ಕುಮಾರ್, ಭರತನಾಟ್ಯದ ಕುರಿತು ಶ್ರೀಮತಿ ಲೀಲಾ ಸ್ಯಾಮ್ಸನ್, ಸಂಗೀತ ಸಂವಹನೆಯ ಬಗೆಗೆ ಪಂಡಿತ್ ಗಣಪತಿ ಭಟ್ ಹಾಗೂ ಜನಪ್ರಿಯ ಸಿನಿಮಾಗಳಲ್ಲಿ ನಾಯಕವ್ಯಕ್ತಿತ್ವದ ಬಗೆಗೆ ಮಾಧವ ಪ್ರಸಾದ್ – ಉಪನ್ಯಾಸಗಳನ್ನು ನೀಡಿದರು. ಈ ನಡುವೆ ಗಿರೀಶ ಕಾಸರವಳ್ಳಿಯವರ ಚಲನಚಿತ್ರ 'ತಾಯೀಸಾಹೇಬ', ನೀನಾಸಮ್ ಹೊರತಂದಿರುವ 'ಕನ್ನಡ ನಾಟಕ ಕನ್ನಡಿ' ವೀಡಿಯೋ ಮಾಲಿಕೆಯಲ್ಲಿನ ಸಂಗ್ಯಾಬಾಳ್ಯಾ, ತಲೆದಂಡ, ಗೋಕುಲ ನಿರ್ಗಮನ, ಚೆನ್ನಕೇಶವ ಅಭಿನಯಿಸಿದ ಅಡಿಗರ ಕಾವ್ಯಭಾಗಗಳನ್ನು ಆಧರಿಸಿದ 'ನಾನು' ರಂಗರೂಪ –ಇವುಗಳ ಪ್ರದರ್ಶನ ಹಾಗೂ ಇವಕ್ಕೆ ಸಂಬಂಧಿಸಿ ಚರ್ಚೆ ಸಂವಾದಗಳೂ ನಡೆದವು.

ಪ್ರತಿದಿನ ಸಂಜೆ ಸಾರ್ವಜನಿಕರಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನೂ ಏರ್ಪಡಿಸಲಾಗಿತ್ತು. ನೀನಾಸಮ್ ತಿರುಗಾಟ ೯೯ರ ಮೂರು ನಾಟಕಗಳು – 'ಸಕ್ಕರೆ ಗೊಂಬೆ' (ರಚನೆ: ವಿವೇಕ ಶಾನಭಾಗ, ನಿ : ಅಕ್ಷರ ಕೆ.ವಿ.), 'ಜುಜುಬಿ ದೇವರ ಜುಗಾರಿಯಾಟ' (ದಾರಿಯೋ ಫೋ ನಾಟಕದ ಅನುವಾದ :ಕೆ.ಟಿ. ಗಟ್ಟಿ, ನಿ : ಸುರೇಶ ಆನಗಳ್ಳಿ ), 'ಕೆಂಪು ಕಣಗಿಲೆ' (ಠಾಕೂರ್ ಅವರ ನಾಟಕದ ಅನುವಾದ : ಕೆ.ವಿ.ಸುಬ್ಬಣ್ಣ, ನಿ : ಚಿದಂಬರರಾವ್ ಜಂಬೆ), ರಂಗಗೀತೆಗಳು (ಶ್ರೀ ಗಜಾನನ ಬೆಣ್ಣೆ), ಕವ್ವಾಲಿ ಗಾಯನ (ಶ್ರೀಜನಾಬ್ ಶಬ್ಬೀರ್ ಅಹ್ಮದ್ ಕವ್ವಾಲ್), ಹಿಂದೂಸ್ತಾನಿ ಗಾಯನ (ಶ್ರೀಮತಿ ಜಯಶ್ರೀ ಪಟ್ನೇಕರ್),ಭರತನಾಟ್ಯ (ಶ್ರೀಮತಿ ಲೀಲಾ ಸ್ಯಾಮ್ಸನ್), ವಾಯೊಲಿನ್ ವಾದನ (ಶ್ರೀವಿ.ವಿ.ಸುಬ್ರಹ್ಮಣ್ಯಂ) ಹಾಗೂ ಹೈದರಾಬಾದಿನ ಸುರಭಿ ತಂಡದವರಿಂದ ಬ್ರೆಖ್ಟ್ ನ 'ಗುಡ್ ವುಮನ್ ಆಫ್ ಸೆಜುವಾನ್' ನಾಟಕದ ರೂಪಾಂತರವಾದ ತೆಲುಗುನಾಟಕ 'ಬಸ್ತಿ ದೇವತಾ ಯಾದಮ್ಮ' (ನಿ : ಬಿ.ವಿ.ಕಾರಂತ ) – ಮೊದಲಾದವು ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿದ್ದವು.

**ಶಿಬಿರದ ಸ್ಥೂಲ ಜಮಾ-ಖರ್ಚು**

ಶಿಬಿರಾರ್ಥಿಗಳಿಂದ ತಲಾ ರೂ. ೬೦೦-೦೦ ರಂತೆ ಶುಲ್ಕ ಸಂಗ್ರಹಿಸಲಾಗಿದೆ. ಅದರಲ್ಲಿ ಸೀಸನ್ ಟಿಕೆಟ್ ಬಾಬ್ತು ರೂ. ೧೦೦-೦೦ ಕಳೆದು ಉಳಿದ ಹಣ ರೂ. ೫೦೦-೦೦ ಅವರ ಊಟ-ವಸತಿಗಳ ಭಾಗಶಃ ವೆಚ್ಚಕ್ಕಾಗಿ ತೆಗೆದುಕೊಂಡಿದೆ.

| | | |
|---|---|---|
| ಜಮಾ ಒಟ್ಟು | ರೂ. | ೬೩,೫೦೦-೦೦ |
| **ಖರ್ಚು** | | |
| ಶಿಬಿರಾರ್ಥಿಗಳ, ಅತಿಥಿಗಳ ಊಟ-ತಿಂಡಿ | ರೂ. | ೧,೧೫,೪೮೧-೦೦ |
| ಅತಿಥಿಗಳ ಪ್ರಯಾಣ, ಕಲಾವಿದರ ಸಂಭಾವನೆ | ರೂ. | ೭೨,೭೪೨-೦೦ |
| ವಸತಿ ಮತ್ತಿತರ ವ್ಯವಸ್ಥೆ | ರೂ. | ೮೬,೯೦೨-೦೦ |
| ಮೊತ್ತ | ರೂ. | ೨,೭೫,೧೨೫-೦೦ |
| ಜಮಾ | ರೂ. | ೬೩,೫೦೦-೦೦ |
| ನಿವ್ವಳ ವೆಚ್ಚ | ರೂ. | ೨,೧೧,೬೨೫-೦೦ |

ನಿವ್ವಳ ವೆಚ್ಚ ರೂ. ೨,೧೧,೬೨೫-೦೦ ಮಾತ್ರ. ಇದನ್ನು ವಿವಿಧ ಧನಸಹಾಯ ಅನುದಾನ - ದಾನಗಳ ಮೂಲಕ ತುಂಬಿಕೊಳ್ಳಬೇಕಾಗಿದೆ.

**ಮಾತುಕತೆ ೫೨**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಶವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು

ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

**ನವೆಂಬರ್ ೧೯೯೯ ವರ್ಷ ಹದಿಮೂರು ಸಂಚಿಕೆ ನಾಲ್ಕು**

೧. ನಮ್ಮ ಹಿತ್ತಲಿನತ್ತ ಹಿನ್ನೋಟ — ನಾಗೇಶ ಹೆಗಡೆ/ಪುಟ ೧

೨. ಪ್ರಕೃತಿ ನಿಷೇಧಿಸಿದ ಪಥಗಳು — ಸುನಿಲ್ ಸಹಸ್ರಬುದ್ಧೆ
ಸಂಗ್ರಹಾನುವಾದ ಜಶವಂತ ಜಾಧವ /ಪುಟ ೧೮

೩. ಯುದ್ಧಕಾಲದಲ್ಲಿ ಕಲೆಯ ಕಾಯಕ — ಸದಾನಂದ ಮೆನೋನ್
ಕನ್ನಡಕ್ಕೆ: ಬಿ.ಆರ್.ವೆಂಕಟರಮಣ ಐತಾಳ /ಪುಟ ೪೬

೪. ತಿರುಗಾಟ : ರಂಗಸಂಸ್ಕೃತಿಯ ನಿರ್ಮಾಣದ ತುಡಿತ
ಎ.ಆರ್.ನಾಗಭೂಷಣ /ಪುಟ ೫೨

೫. ನೀನಾಸಮ್ ವರದಿಗಳು /ಪುಟ ೫೪

**MAATHUKATHE** NOV. 1999 (YEAR 13 ISSUE 4)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | | |
|---|---|---|
| ೧. | **ಮಾವಿನಮರದಲ್ಲಿ ಬಾಳೆಯ ಹಣ್ಣು** (ನಾಟಕ-ರಂಗಭೂಮಿ ಕುರಿತ ಬರಹಗಳು - ಅಕ್ಷರ ಕೆ.ವಿ.) | ರೂ.೭೫ |
| ೨. | **ಅಮೃತ ಮತ್ತು ಗರುಡ** (ಡಾ. ಡಿ.ಆರ್. ನಾಗರಾಜ್ ಬರಹಗಳ ಮರುಮುದ್ರಣ) | ರೂ. ೬೫ |
| ೩. | **ಪ್ರತಿಭೆಯ ಒಂದು ಪ್ರವಾಹ** (ಅಕ್ಷರ ಚಿಂತನ ಮಾಲೆ- ಶಿವ ವಿಶ್ವನಾಥನ್ ಬರಹಗಳು-ಅನು:ಅಕ್ಷರ ಕೆ.ವಿ) | ರೂ. ೫೦ |
| ೪. | **ಐತಿಹ್ಯಮಾಲೆಯ ಕಥೆಗಳು** (ಅಕ್ಷರಚಿಂತನಮಾಲೆ-ಕೊಟ್ಟಾರತ್ತಿಲ್ ಶಂಕುಣ್ಣಿ-ಅನು:ಬಿ.ಆರ್.ವಿ.ಐತಾಳ) | ರೂ.೫೦ |
| ೫. | **ಶತಮಾನದ ಕುಸುಮ** (ಡಾ. ಕುಸುಮಾ ಸೊರಬ ಕುರಿತ ಬರಹಗಳು-ಸಂ: ನಾಗೇಶ ಹೆಗಡೆ) | ರೂ. ೭೫ |
| ೬. | **ಹಸಿರು ಹಾದಿ** (ಯಲ್ಲಪ್ಪ ರೆಡ್ಡಿ ಆತ್ಮಕಥನ-ನಿರೂಪಣೆ: ಸತೀಶ್ ಚಪ್ಪರಿಕೆ) | ರೂ. ೮೦ |
| ೭. | **ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ** (ಡಾ.ಡಿ.ಆರ್. ನಾಗರಾಜ್) | ರೂ. ೧೨೦ |
| ೮. | **ಹೋಲೆ... ಹೋಲೆ... ಬೆಳ್ಳಕ್ಕಿಮಾಲೆ** (ಕವನಗಳು-ಶಾ.ಬಾಲುರಾವ್) | ರೂ. ೫೦ |
| ೯. | **ಸಂಗೀತ ಸಂವಾದ** (ಭಾಸ್ಕರ್ ಚಂದಾವರ್ಕರ್-ಅನು: ವೈದೇಹಿ) | ರೂ. ೧೦೦ |
| ೧೦. | **ಮಹಾತ್ಮ** (ನಾಟಕ / ಮುಕುಂದರಾವ್ - ಅನು: ಕೆ.ವಿ. ಸುಬ್ಬಣ್ಣ) | ರೂ. ೫೦ |
| ೧೧. | **ಒಂಟಿ ಧ್ವನಿ** (ಬರಹಗಳು - ಡಾ. ನಿ. ಮುರಾರಿ ಬಲ್ಲಾಳ) | ರೂ. ೧೨೦ |
| ೧೨. | **ಮೌನದ ಮಣಿ** (ಕವನಗಳು - ಎಸ್. ಮಂಜುನಾಥ್) | ರೂ. ೪೦ |

**ಹೊಸ ಪ್ರಕಟಣೆಗಳು**

| | | |
|---|---|---|
| ೧೩. | **ವೈದ್ಯ ವೈವಿಧ್ಯ** (ವೈದ್ಯಕೀಯ ಬರಹಗಳು-ಡಾ. ಎಚ್.ಎಸ್. ಮೋಹನ್) | ರೂ. ೮೦ |
| ೧೪. | **ಮಹಾಮಾಯಿ** (ನಾಟಕ - ಚಂದ್ರಶೇಖರ ಕಂಬಾರ) | ರೂ. ೬೦ |
| ೧೫. | **ಸಕ್ಕರೆ ಗೊಂಬೆ** (ನಾಟಕ - ವಿವೇಕ ಶಾನಭಾಗ) | ರೂ. ೫೫ |
| ೧೬. | **ಎರಡು ರಷ್ಯನ್ ನೀಳ್ಗತೆಗಳು** (ಟಾಲ್‌ಸ್ಟಾಯ್ ಮತ್ತು ಗೊಗೋಲ್ ಅನುವಾದ - ಟಿ.ಪಿ. ಅಶೋಕ) | ರೂ. ೫೫ |
| ೧೭. | **ರಂಗಪ್ರಯೋಗ** (ಅಭಿನಯ, ರಂಗತಂತ್ರಗಳು ಮತ್ತು ರಂಗಸಿದ್ಧತೆಯ ಪರಿಚಯ - ಅಕ್ಷರ ಕೆ.ವಿ.) | ರೂ. ೨೦೦ |

**ಅಚ್ಚಿನಲ್ಲಿ**

**ಬಹುಮುಖ** (ಅಕ್ಷರ ಚಿಂತನ ಮಾಲೆ - ಮನು ಚಕ್ರವರ್ತಿ, ಅನು: ಎಲ್. ಜಿ. ಮೀರಾ)

**ಜಾಗತಿಕ ಪರಿಸರ ಚರಿತ್ರೆ** (ಅಕ್ಷರ ಚಿಂತನ ಮಾಲೆ - ರಾಮಚಂದ್ರ ಗುಹಾ, ಅನು: ಮಾಧವ ಐತಾಳ)